ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 14 ಶುಕ್ರವಾರ 2025

₹4

ಸಂಪುಟ: 45 | ಸಂಚಿಕೆ: 324 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಲಕ್ಷ್ಮೀದೇವಿ ರವರು

ಶ್ರೀ.ಬಿ.ಪಿ.ಕನ್ನೇಗೌಡರ ಧರ್ಮಪತ್ನಿ

(ಸಾಮಾಜಿಕ ನ್ಯಾಯಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರು, ಮೈ.ತಾ.)
ಮಾಜಿ ಅಧ್ಯಕ್ಷರು, ಬೋಗಾದಿ ಗ್ರಾಮ ಪಂಚಾಯ್ತಿ, ಅಧ್ಯಕ್ಷರು ಭೋಗೇಶ್ವರ ದೇವಸ್ಥಾನ ಟ್ರಸ್ಟ್

ಇವರು ದಿನಾಂಕ 05-03-2025ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 15-03-2025ರ ಶನಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಸ್ವಗೃಹ ಬೋಗಾದಿ ಗ್ರಾಮ, ಕಸಬಾ ಹೋ॥, ಮೈಸೂರು ತಾ॥ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ.ಬಿ.ಪಿ.ಕನ್ನೇಗೌಡ ಮತ್ತು ಮಗ ಕೆ.ಚಂದ್ರಶೇಖರ ಹಾಗೂ ಸೊಸೆ, ಹೆಣ್ಣುಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

ಹರಿಕಥೆ: ರಾತ್ರಿ : 8.00 ಗಂಟೆಗೆ, ಯರಹಳ್ಳಿ ಪುಟ್ಟಸ್ವಾಮಿ ರವರಿಂದ



ಹಾಸನ ಮಿತ್ರ

ನಾಳೆ ರಾಜ್ಯಮಟ್ಟದ ಪದಾಧಿಕಾರಿಗಳ ಸಮಾವೇಶ

ಹಾಸನ: ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ರಾಜ್ಯ ಸಮಿತಿ ಮತ್ತು ಜಿಲ್ಲಾ ಸಮಿತಿ ವತಿಯಿಂದ ಮಾ.15ರಂದು ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ರಾಜ್ಯಮಟ್ಟದ ಪದಾಧಿಕಾರಿಗಳ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಸಂಘಟಿತ ಕಾರ್ಮಿಕರ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಕುಪೇಂದ್ರ ಆಯನೂರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯ ಸಭಾ ಸದಸ್ಯರಾದ ಎಚ್.ಡಿ.ದೇವೇಗೌಡರು, ಕಾರ್ಮಿಕ ಸಚಿವ ಸಂತೋಷ್ ಲಾಡ್ ಭಾಗವಹಿಸುವರು ಎಂದರು.

ಕಾರ್ಮಿಕ ಕಾರ್ಡುಗಳ ವಿತರಣೆಯನ್ನು ಸಹಕಾರ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮಾಡಲಿದ್ದಾರೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಅಸಂಘಟಿತ ಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಪ್ರದೀಪ್ ಹೊನ್ನಪ್ಪ ವಹಿಸಲಿದ್ದಾರೆ ಎಂದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಸ್ವರೂಪ್ ಪ್ರಕಾಶ್, ಅರಸಿಕೆರೆ ವಿಧಾನಸಭಾ ಕ್ಷೇತ್ರದ ಶಾಸಕ ಮತ್ತು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಬಾಲಕೃಷ್ಣ, ಶಿವಮೊಗ್ಗ ವಿಧಾನಪರಿಷತ್ ಸದಸ್ಯ ಡಿ.ಎಸ್. ಅರುಣ್ ಕುಮಾರ್, ಹಾಸನ ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಎಸ್.ಎಸ್.ರಂಗಸ್ವಾಮಿ, ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಶಿಕ್ಷಣ ಮತ್ತು ತರಬೇತಿ ಕೇಂದ್ರದ ಅಧ್ಯಕ್ಷ ಹರ್ಷ ಭಾಸ್ಕರ್ ಕಾಮತ್, ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಕುಪೇಂದ್ರ ಆಯನೂರು ಮತ್ತು ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ, ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಮಹೇಶ್ ಪೇಟ್ಕರ್ ಭಾಗವಹಿಸಲಿದ್ದಾರೆ ಎಂದರು.

ಸಮಾರೋಪ ಸಮಾರಂಭದಲ್ಲಿ ಮಾಜಿ ಸಂಸದರು ರಾಜ್ಯ ಮತ್ತು ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ಗೌರವಾಧ್ಯಕ್ಷ ಆಯನೂರು ಮಂಜುನಾಥ್ ಹಾಗೂ ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ಕಾರ್ಯಾಧ್ಯಕ್ಷೆ ಶ್ರೀಮತಿ ರತ್ನಮಾಲ ಸುರೇಶ್ ಮೂಳೆ ಭಾಗವಹಿಸುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಅಸಂಘಟಿತ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಪ್ರದೀಪ್ ಹೊನ್ನಪ್ಪ, ರಾಜ್ಯ ಉಪಾಧ್ಯಕ್ಷ ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಮಹೇಶ್ ಪೇಟ್ಕರ್, ಜಿಲ್ಲಾಧ್ಯಕ್ಷ ಎಸ್.ಎಸ್. ರಂಗಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಸಗೀರ್ ಅಹಮದ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.

ಮಾ.17, ಸಾಲಗಾಮೆಯಲ್ಲಿ ಪುನೀತ್ ಉತ್ಸವ



ಹಾಸನ: ಡಿ.ಪಿ.ಚಂದ್ರಶೇಖರ್ ಅಭಿಮಾನಿಗಳ ಬಳಗದ ವತಿಯಿಂದ ಮಾ.17ರಂದು ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಪುನೀತ್ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಪ್ರದೀಪ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತಾಲೂಕಿನ ಸಾಲಗಾಮೆ ಸಂತೆ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಕಾರ್ಯಕ್ರಮದ ಅಂಗವಾಗಿ ನೇತ್ರದಾನ, ರಕ್ತದಾನ, ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಆರೋಗ್ಯ ತಪಾಸಣೆಯಲ್ಲಿ ನುರಿತ ವೈದ್ಯಕೀಯ ಆಸ್ಪತ್ರೆಗಳು ಭಾಗವಹಿಸಲಿವೆ ಎಂದು ಮಾಹಿತಿ ನೀಡಿದರು.

ಇದಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ, ಅದೇದಿನ ಸಂಜೆ ಖ್ಯಾತ ನಿರೂಪಕ ಮತ್ತು ನಟರಾದ ಶ್ಯಾಂ ಅರ್ಪಿಸುವ ಮಿಲನ್ ಮ್ಯೂಸಿಕಲ್ ಸೆಲೆಬ್ರೇಷನ್ ಸ್ಟಾರ್ ನೈಟ್ ಇವರಿಂದ ಸಂಗೀತಾ ಮತ್ತು ಮನೋರಂಜನೆ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಲಿದ್ದು, ಕಾಂಗ್ರೆಸ್ ಮುಖಂಡ ಹಾಗೂ ಸಮಾಜ ಸೇವಕ ಡಿಪಿ ಚಂದ್ರಶೇಖರ್ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಈ ನಾಡಿಗೆ ಅಪಾರ ಜನಸೇವೆ ಮೂಲಕವೇ ಹೆಸರಾಗಿರುವ ಪುನೀತ್ ರಾಜ್‌ಕುಮಾರ್ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಎಲೆಮರೆ ಕಾಯಿಯಂತೆ ಅಪಾರ ಸೇವೆಗಳನ್ನು ಮಾಡಿ ಇಂದಿಗೂ ಜನರ ಮನಸ್ಸಿನಲ್ಲಿ ಜೀವಂತವಾಗಿ ಉಳಿದಿರುವ ಪುನೀತ್ ರಾಜ್ ಕುಮಾರ್ ಎಂದಿಗೂ ಜೀವಂತ. ಅವರ ನೆನಪಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ಪಿ.ಚಂದ್ರಶೇಖರ್ ಅಭಿಮಾನಿ ಬಳಗದ ಸಂತೋಷ್, ದರ್ಶನ್, ದಿನೇಶ, ಚಿರತ್, ಅಭಿಲಾಶ್ ಇತರರು ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ನಿರ್ದೇಶಕಿ ಡಾ.ರಾಜೇಶ್ವರಿ ಮಾದಪ್ಪ, ವೈದ್ಯರಾದ ಡಾ.ಅಖಿಲ, ಡಾ.ನಯನ, ಹೆಚ್‌ಆರ್ ನಿರೀಕ್ಷಾ ಹಾಗೂ ಆಸ್ಪತ್ರೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೈಸೂರು, ಮಾ.13(ಎಸ್‌ಬಿಡಿ)– ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ವಿಶ್ವ ಮಹಿಳಾ ದಿನವನ್ನು ಆಚರಿಸಲಾಯಿತು.

ಸಮಾರಂಭದಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ ಮಾತನಾಡಿ, ನಮ್ಮ ಸನಾತನ ಧರ್ಮದಲ್ಲಿ ಮಹಿಳೆಗೆ ಅಪಾರ ಗೌರವವಿದೆ. ಭಾರತದಲ್ಲಿ ಆಧ್ಯಾತ್ಮಿಕ ಹಾಗೂ ಸಾಮಾಜಿಕವಾಗಿ ಮಹಿಳೆಯರಿಗೆ ವಿಶೇಷ ಸ್ಥಾನ ಮಾನ ನೀಡಲಾಗಿದೆ. ಹಾಗಾಗಿ ಸ್ತ್ರೀ–ಪುರುಷ ಇಬ್ಬರೂ ಸರಿಸಮಾನರು ಎಂದು ಹೇಳಿದರು.

ಆಸ್ಪತ್ರೆಯ ನಿರ್ದೇಶಕಿ ಡಾ.ರಾಜೇಶ್ವರಿ ಮಾದಪ್ಪ ಮಾತನಾಡಿ, ಹೆಣ್ಣು–ಗಂಡು ಇಬ್ಬರೂ ಸರಿಸಮಾನರು. ಕುಟುಂಬದಲ್ಲಿ ಮಹಿಳೆಗೆ ತುಂಬಾ ಪ್ರಾಮುಖ್ಯತೆ ಇದೆ. ಪುರುಷರಷ್ಟೇ ಕೆಲಸ ಮಾಡಬೇಕು, ಮಹಿಳೆಯರು ಮನೆಯೊಳಗಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕೆಂಬ ಕಾಲವಿಲ್ಲ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾರೆ. ಪುರುಷರ ಸರಿಸಮಾನವಾಗಿ ದುಡಿಯುತ್ತಿದ್ದಾರೆ. ಉದ್ಯೋಗದ ಜೊತೆಗೆ ಕುಟುಂಬ ನಿರ್ವಹಣೆಯನ್ನೂ ಸಮರ್ಥವಾಗಿ ನಿಬಾಯಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವೈದ್ಯರಾದ ಡಾ. ಅಖಿಲ, ಡಾ.ನಯನ, ಹೆಚ್‌ಆರ್ ನಿರೀಕ್ಷಾ ಸೇರಿದಂತೆ ಹಲವು ವೈದ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಮಲ್ಲಮ್ಮ ನಿಧನ



ಮೈಸೂರು, ಮಾ.13– ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿ ಮಲ್ಲಮ್ಮ(82) ಅವರು ಗುರುವಾರ ಸಂಜೆ ನಿಧನರಾದರು. ಇವರು ಗುಂಡ್ಲುಪೇಟೆ ತಾಲೂಕು, ಬೆರಟಹಳ್ಳಿ ಗ್ರಾಮದ ಮಾಜಿ ಚೇರ್ಮನ್ ದಿವಂಗತ ಹೊನ್ನಪ್ಪ ಅವರ ಧರ್ಮಪತ್ನಿ.

ಮೃತರು ಓರ್ವ ಪುತ್ರಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಲಲಿತಾದ್ರಿಪುರದ ವೀರಶೈವ–ಲಿಂಗಾಯತ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ರುಕ್ಮಿಣಮ್ಮ



ಮೈಸೂರು, ಮಾ.13– ಮೈಸೂರು ರಾಜರಾಜೇಶ್ವರಿನಗರ ನಿವಾಸಿ ದಿವಂಗತ ಶ್ರೀನಿವಾಸ್ ಅಯ್ಯಂಗಾರ್ ಅವರ ಪತ್ನಿ, ಶತಾಯುಷಿ ರುಕ್ಮಿಣಮ್ಮ (103) ಗುರುವಾರ ನಿಧನರಾದರು.

ಇವರು ಇಬ್ಬರು ಪುತ್ರರು, ಪುತ್ರಿ, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟ ತಪ್ಪಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಇವರ ಮೊಮ್ಮಗ ಆರ್.ಪಿ.ಆನಂದ್ ಭಾರತ್ ಆಸ್ಪತ್ರೆ ಮತ್ತು ಆಂಕೊಲಾಜಿ ಸಂಸ್ಥೆಯಲ್ಲಿ ಮಾರ್ಕೆಟಿಂಗ್ ಮುಖ್ಯಸ್ಥರಾಗಿದ್ದಾರೆ.

ಮೈಸೂರಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಅರ್ಥಪೂರ್ಣ ಆಚರಣೆ

ಸಮಾನರು ಎಂಬ ಮನೋಭಾವನೆ ಎಲ್ಲರಲ್ಲೂ ಬರಬೇಕು: ಎಡಿಸಿ ಡಾ.ಪಿ.ಶಿವರಾಜು ಅಭಿಮತ



ಮೈಸೂರು ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಎಡಿಸಿ ಡಾ.ಪಿ.ಶಿವರಾಜು ಉದ್ಘಾಟಿಸಿದರು.

ಮೈಸೂರು,ಮಾ.13– ಮೈಸೂರಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಬುಧವಾರ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು. ನಾವೆಲ್ಲರೂ ಸಮಾನರು, ಒಂದೇ ಎಂಬ ಮನೋಭಾವ ನಮ್ಮಲ್ಲಿ ಬರಬೇಕು ಎಂದು ಮೈಸೂರು ಅಪರ ಜಿಲ್ಲಾಧಿಕಾರಿ(ಎಡಿಸಿ) ಪಿ.ಶಿವರಾಜು ಹೇಳಿದರು.

ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ರೇಣುಕಾಚಾರ್ಯ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ರೇಣುಕಾಚಾರ್ಯರ ಜಯಂತಿಯನ್ನು ನಮ್ಮ ಮನೆಗಳಲ್ಲಿಯೂ ಆಚರಿಸಬೇಕಿದೆ. ಯಾವುದೇ ಜಯಂತಿಯನ್ನು ಆಚರಣೆ ಮಾಡುವಾಗ ಅದರ ಮೂಲ ಉದ್ದೇಶ ಮತ್ತು ಆಶಯಗಳನ್ನು ಮೊದಲು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ ಎಂದರು.

ಸಾವಿರ ವರ್ಷಗಳ ಹಿಂದೆ ಇದ್ದವರನ್ನು ನಾವು ನೆನಪಿಸಿಕೊಂಡು ಅವರ ಜಯಂತಿಯನ್ನು ಆಚರಣೆ ಮಾಡುತ್ತಾ ಇದ್ದೇವೆ ಎಂದರೆ ಅದರ ಮಹತ್ವ ಅರಿವಾಗಬೇಕು. ಅಂತಹವರ ಜಯಂತಿ ಪವಿತ್ರ ಆಚರಣೆ. ಆ ಸಾಲಿನಲ್ಲಿ ರೇಣುಕಾಚಾರ್ಯರು ಸೇರಿದ್ದಾರೆ. ಯಾರಿಗೆ ಹುಟ್ಟು, ಸಾವು ಇಲ್ಲವೋ ಅಂತಹ ಮಹಾ ಚೇತನರ ಚರಿತ್ರೆಗಳನ್ನು ಜಯಂತಿಯಾಗಿ, ಹುಟ್ಟು ಹಬ್ಬವಾಗಿ ನಾವು ಆಚರಣೆ ಮಾಡುತ್ತೇವೆ ಎಂದರು. ಇಡೀ ಸಮಾಜಕ್ಕೆ ಬೆಳಕಾದವರು ವಿಶ್ವಗುರು ರೇಣುಕಾಚಾರ್ಯರು. ವೀರಶೈವ ಪರಂಪರೆಯಲ್ಲಿ ಮಹಾನ್ ಚೇತನರಾಗಿ ಎಂದೆಂದಿಗೂ ನಮಗೆಲ್ಲಾ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಯಾವುದೇ ಜಾತಿ, ಪಂಗಡ ಎಂಬುದು ಕೇಳಿ ಪಡೆದದ್ದಲ್ಲ. ನಮ್ಮ ಆಯ್ಕೆಯೂ ಅಲ್ಲ. ನಾವು ನಮ್ಮ ತಂದೆ ತಾಯಿಯ ಹೊಟ್ಟೆಯಲ್ಲಿಯೇ ಜನಿಸಬೇಕು ಎಂದು ನಿರ್ಧಾರ ಮಾಡಿಕೊಂಡು ಬಂದಿರುವುದಿಲ್ಲ. ಗಂಡಾಗಿ ಅಥವಾ ಹೆಣ್ಣಾಗಿ ಇದೇ ಊರಿನಲ್ಲಿ ಜನಿಸಬೇಕು ಎಂದುಕೊಂಡು ಬಂದವರಲ್ಲ ನಮ್ಮ ಜಾತಿ, ಕುಟುಂಬ ಎಲ್ಲವೂ ಪ್ರಕೃತಿಯ ಆಯ್ಕೆಯಾಗಿರುತ್ತದೆ ಎಂದು ತಿಳಿಸಿದರು.

ದೇಹವೇ ದೇವಾಲಯದ ರೀತಿ. ನಮ್ಮ ಆತ್ಮವೇ ದೇವರು ಎಂದು ಹೇಗೆ ಜೀವನ ಮಾಡುತ್ತೇವೋ, ಹಾಗೆಯೇ ಅವರವರ ಜಾತಿಗಳು, ಧರ್ಮಗಳು ಅವರವರ ಶ್ರದ್ಧೆಗೆ ಸಂಬಂಧಿಸಿದ್ದಾಗಿರುತ್ತದೆ ಎಂದರು.

ನಾವೆಲ್ಲರೂ ಸಮಾನರು. ಇದನ್ನೇ ನಮಗೆ ರೇಣುಕಾಚಾರ್ಯರು ಹೇಳಿರುವುದು. ಸಹಬಾಳ್ವೆಯಿಂದ ಸಾಮರಸ್ಯ ಬೆಳೆಸಿಕೊಳ್ಳಬೇಕು, ಬದುಕಬೇಕು ಎಂದು ಸಾರಿದ್ದಾರೆ. ಅವರ ವಿಚಾರಗಳ ಪಾಲನೆ ಮಾಡುವುದರಿಂದ ಅವರ ಜಯಂತಿಯನ್ನು ಆಚರಣೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ ಡಾ.ಆರ್.ಎಂ.ಷಡಕ್ಷರಯ್ಯ ಮಾತನಾಡಿ, ಇಂತಹ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸುತ್ತಾ ಇರುವುದು ಬಹಳ ಸಂತೋಷಕರ ವಿಷಯ.

ಚರಿತ್ರೆಯಲ್ಲಿ ವೀರಶೈವ ಧರ್ಮವನ್ನು ಸ್ಥಾಪಿಸಿ, ಪ್ರಚಾರ ಮಾಡಲು ಇಡೀ ಜಗತ್ತನ್ನೇ ಸುತ್ತಿದ್ದಾರೆ. ಅವರ ಸಿದ್ಧಾಂತಗಳು ಬಸವಣ್ಣನ ತತ್ವಗಳನ್ನು ಹೋಲುವಂತದ್ದು. ರೇಣುಕಾಚಾರ್ಯರು ನಮಗೆ ಕೊಟ್ಟಿರುವಂತಹ ಕೊಡುಗೆ ಅಪಾರ. ಅವರ ತತ್ವಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜವನ್ನು ನಿರ್ಮಾಣ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮೈಸೂರು ಮಹಾನಗರಪಾಲಿಕೆ ಮಾಜಿ ಮಹಾಪೌರರಾದ ಸುನಂದಾ ಪಾಲನೇತ್ರ, ಶ್ರೀ ಭಾರತೀಯ ಅಗಸ್ತ್ಯ ಮಹರ್ಷಿ ಸಂಶೋಧನಾ ಸಂಸ್ಥೆಯ ಮೈಸೂರು ನಿರ್ದೇಶಕರಾದ ಓಂ.ಶ್ಯಾಂಭಟ್, ರೇಣುಕಾಚಾರ್ಯ ಸಮಿತಿ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್‌ಕುಮಾರ್, ಉಪಾಧ್ಯಕ್ಷ ಜ್ಞಾನಶಂಕರ್, ಕಂಡೇಶ್ ಕಾಶಿ ವಿಶ್ವನಾಥ ಶೆಟ್ಟಿ, ಖಜಾಂಚಿ ಎನ್.ಜಿ. ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

ಸುವರ್ಣ ಕನ್ನಡಿಗ ಸಾಧಕರ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ...




2025ನೇ ಸಾಲಿನ ಸುವರ್ಣ ಕನ್ನಡಿಗ ಸಾಧಕರ ಪ್ರಶಸ್ತಿಗೆ ಭಾಜನರಾದ ಲಯನ್ಸ್ ಸಂಸ್ಥೆಯ ಪ್ರಥಮ ಉಪಾಧ್ಯಕ್ಷ ಮತ್ತು ಮೈಸೂರು ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಲಯನ್ ಕೆ.ಬಿ.ಲಿಂಗರಾಜು ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷ ಲಯನ್ ಬಿ.ಎಸ್.ಪ್ರಸಾದ್, ದ್ವಿತೀಯ ಉಪಾಧ್ಯಕ್ಷ ಲಯನ್ ಸೋಮಶೇಖರ್, ಆಡಳಿತ ಅಧಿಕಾರಿ ಲಯನ್ ಎಂ.ಸಿದ್ದೇಗೌಡ, ಖಜಾಂಚಿ ಲಯನ್ ಆರ್.ಸಿದ್ದೇಗೌಡ, ಸಹ ಕಾರ್ಯದರ್ಶಿ ಲಯನ್ ಶ್ರೀನಾಥ್, ಸದಸ್ಯರಾದ ಲಯನ್ ಗಂಗೋತ್ರಿ ಮಹೇಶ್, ಲಯನ್ ಜಗದೀಶ್, ಲಯನ್ ಭೈರೇಗೌಡ, ಲಯನ್ ಹನುಮಂತಯ್ಯ ಉಪಸ್ಥಿತರಿದ್ದರು.

ಏ.1ರಿಂದ ಮೈಸೂರಲ್ಲಿ ಎಳೆಯರ ಮೇಳ

ಮೈಸೂರು, ಮಾ. 13– ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಎಳೆಯರ ಮೇಳ–2025 ಬೇಸಿಗೆ ಶಿಬಿರವನ್ನು ಏ.1ರಿಂದ 21ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. 8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಭಾಗವಹಿಸಲು ಅವಕಾಶವಿರುತ್ತದೆ. ಮಾ.20ರಿಂದ ಅರ್ಜಿ ವಿತರಿಸಲಾಗುತ್ತದೆ. ಮಕ್ಕಳ ಸುಪ್ತ ಪ್ರತಿಭೆಯ ಬೆಳವಣಿಗೆ ಮತ್ತು ಪ್ರದರ್ಶನಕ್ಕೆ ಇದೊಂದು ಉತ್ತಮ ವೇದಿಕೆ. ಶಿಬಿರದಲ್ಲಿ ರಂಗದಾಟಗಳು, ಬಣ್ಣದ ಕಲೆ, ಜೇಡಿಮಣ್ಣಿನ ಕಲೆ, ಕಾಳುಗಳಿಂದ ಚಿತ್ರರಚನೆ, ಒಂದು ದಿನದ ಪ್ರವಾಸ, ಮಕ್ಕಳ ಸಂತೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಪವಾಡ ರಹಸ್ಯ ಬಯಲು, ಪೇಪರ್ ಕ್ರಾಫ್ಟ್, ಹಾಡು, ನೃತ್ಯ, ನಾಟಕಗಳು, ಗಣ್ಯ ವ್ಯಕ್ತಿಗಳೊಡನೆ ಸಂವಾದ ಹೀಗೆ ಹತ್ತು ಹಲವು ಕಾರ್ಯಕ್ರಮವಿರುತ್ತವೆ. ಶಿಬಿರದ ಕೊನೆಯ ದಿನ ಶಿಬಿರಾರ್ಥಿಗಳಿಂದ ಹಾಡು, ನೃತ್ಯ, ನಾಟಕಗಳ ಪ್ರದರ್ಶನಗಳಿರುತ್ತವೆ. ಹೆಚ್ಚಿನ ವಿವರಗಳಿಗೆ ಚಂದ್ರಶೇಖರಾಚಾರ್ (9448739365), ಗುರುಸ್ವಾಮಿ (9945472541), ಮಂಜುನಾಥ (91649 91992), ಶಕುಂತಲಾ ಹೆಗಡೆ (86607 50218), ಜೀವನ್‌ಕುಮಾರ್ (98801 01305), ಪ್ರಶಾಂತ್ (97314 26011) ಸಂಪರ್ಕಿಸಿ.

ರಾಜ್ಯದಲ್ಲೇ ಅತೀ ಹೆಚ್ಚು ಇಂಜಿನಿಯರಿಂಗ್ ವಸ್ತು ರಫ್ತಿನಲ್ಲಿ ಮೈಸೂರಿಗೆ 2ನೇ ಸ್ಥಾನ

● ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್ ಮಾಹಿತಿ ● ಭವಿಷ್ಯದಲ್ಲಿ ಈ ಪ್ರಮಾಣ ಹೆಚ್ಚಿಸಲು ಕೈಗಾರಿಕೆಗಳಿಗೆ ಸಲಹೆ



ಮೈಸೂರಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ 'ಗಡಿಯಾಚೆಗಿನ ಇ–ಕಾಮರ್ಸ್ ಮತ್ತು ಇಂಜಿನಿಯರಿಂಗ್ ರಫ್ತು ಅವಕಾಶಗಳ' ಕುರಿತ ವಿಚಾರ ಸಂಕಿರಣ ನಡೆಯಿತು.

ಮೈಸೂರು, ಮಾ.13(ಎಂಕೆ)– ಬೆಂಗಳೂರಿನ ನಂತರ ಮೈಸೂರು ರಾಜ್ಯದಲ್ಲೇ ಅತೀ ಹೆಚ್ಚು ಇಂಜಿನಿಯರಿಂಗ್ ವಸ್ತುಗಳನ್ನು ತಯಾರಿಸಿ, ರಫ್ತು ಮಾಡುತ್ತಿರುವ ನಗರವಾಗಿದ್ದು, ಮುಂದಿನ ದಿನಗಳಲ್ಲಿಯೂ ಹೆಚ್ಚೆಚ್ಚು ರಫ್ತು ಮಾಡುವತ್ತಾ ಕೈಗಾರಿಕೆಗಳು ಗಮನಹರಿಸಬೇಕು ಎಂದು ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್ ಸಲಹೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯ, ಇಇಪಿಸಿಇಂಡಿಯಾ, ಅಮೆಜಾನ್ ಹಾಗೂ ಡಿಹೆಚ್‌ಎಲ್ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ 'ಗಡಿಯಾಚೆಗಿನ ಇ–ಕಾಮರ್ಸ್ ಮತ್ತು ಇಂಜಿನಿಯರಿಂಗ್ ರಫ್ತು ಅವಕಾಶಗಳ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ರಫ್ತು ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವುದು ಸೂಕ್ತವಾಗಿದ್ದು, ಮೈಸೂರಿನ ಕೈಗಾರಿಕೆಗಳಿಗೂ ರಫ್ತು ಹೆಚ್ಚಳ ಕುರಿತು ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ ಸಲಹೆಗಳನ್ನು ನೀಡುತ್ತಿದೆ ಎಂದರು.

ಬೆಂಗಳೂರು ಬಿಟ್ಟರೆ, ಮೈಸೂರು ಅತೀ ಹೆಚ್ಚು ರಫ್ತು ಮಾಡುವ ಜಿಲ್ಲೆಯಾಗಿದ್ದು, ಇದನ್ನು ಮುಂದಿನ ದಿನಗಳಲ್ಲಿಯೂ ಉಳಿಸಿಕೊಳ್ಳಬೇಕಿದೆ. ಮೈಸೂರಿನಲ್ಲಿ 100ಕ್ಕೂ ಹೆಚ್ಚು ಕೈಗಾರಿಕೆಗಳು ರಫ್ತು ಮಾಡುತ್ತಿದ್ದು, ತಮ್ಮ ಕಾರ್ಯವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬೇಕು. ಇದರಿಂದ ರಫ್ತು ಹೆಚ್ಚಾಗುವುದರ ಜೊತೆಗೆ ಕೈಗಾರಿಕಾ ಅಭಿವೃದ್ಧಿಯೂ ಸಾಧ್ಯವಾಗುತ್ತದೆ ಎಂದರು.

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಉಪ ನಿರ್ದೇಶಕಿ ಎಲ್.ಮೇಘಲಾ ಮಾತನಾಡಿ, ಕೈಗಾರಿಕೋದ್ಯಮಿಗಳನ್ನು ಉತ್ತೇಜಿಸುವ ದೃಷ್ಟಿಯಿಂದ ವಿಟಿಪಿಸಿ ವತಿಯಿಂದ ಒಂದು ದಿನ ಹಾಗೂ ಒಂದು ವಾರದ ಪ್ರೇರಣಾತ್ಮಕ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಕೈಗಾರಿಕೋದ್ಯಮಿಗಳು ಪರಿಸ್ಥಿತಿಗೆ ಅನುಗುಣವಾಗಿ ಅಪ್‌ಡೇಟ್ ಆಗಬೇಕಾಗಿದೆ. ರಫ್ತು ಮಾಡಬೇಕು ಎನ್ನುವ ಉದ್ದೇಶವನ್ನು ಪೂರ್ಣಗೊಳಿಸಬೇಕು. ಯಶಸ್ಸು ಕಾಣಲು ಹಲವು ಅಡೆತಡೆಗಳು ಸಹಜ. ಆದರೆ, ನಿಖರ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ನಂತರ ಡಿಜಿಎಫ್‌ಟಿ ಸಹಾಯಕ ನಿರ್ದೇಶಕ ಕೆ.ಆದರ್ಶ್, ಇಇಪಿಸಿ ಇಂಡಿಯಾ ಉಪ ನಿರ್ದೇಶಕ ವಿ.ಸಿ.ರವೀಶ್, ಅಮೇಜಾನ್ ಬಿಸಿನೆಸ್ ಡೆವಲಪ್‌ಮೆಂಟ್ ಮ್ಯಾನೇಜರ್ ಪ್ರಜ್ವಲ್, ಡಿಹೆಚ್‌ಎಲ್ ಬಿಸಿನೆಸ್ ಡೆವಲಪ್‌ಮೆಂಟ್ ಮ್ಯಾನೇಜರ್ ರೋಹಿನ್ ಜಾರ್ಜ್ ಥಾಮಸ್ ತಮ್ಮ ಸಂಸ್ಥೆಗಳಿಂದಾಗುತ್ತಿರುವ ರಫ್ತು ಕುರಿತು ಮಾಹಿತಿ ನೀಡಿದರು. ಎಂಡಿಎಸ್‌ಎಸ್‌ಐಎ ಮೈಸೂರು ವಿಭಾಗದ ಕಾರ್ಯದರ್ಶಿ ಸಿ.ಎಂ.ಸುಬ್ರಹ್ಮಣ್ಯ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.03.2025 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025ರಿಂದ 16.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸಯಾಟಿಕ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಯೋಗಿನಾರೇಯಣ ಬಣಜಿಗ (ಬಲಿಜ) ಸಂಘ :** ಶ್ರೀ ಕೈವಾರ ತಾತಯ್ಯನವರ 299ನೇ ಜಯಂತ್ಯುತ್ಸವ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ. ನಾರಾಯಣ, ಸ್ಥಳ: ಸಂಘದ ಪ್ರಾರ್ಥನಾ ಮಂದಿರದ ಆವರಣ, ಸರಸ್ವತಿಪುರಂ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ನಗರ ಹಳೇ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ 9.30 ರಿಂದ ಶ್ರೀ ಮದ್ದಿವ್ಯರಥಾರೋಹಣ, ಸಂಜೆ ಹಂಸವಾಹನೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್ :** ಸುಸ್ಥಿರ ಮತ್ತು ಅಂತರ್ಗತ ಜಗತ್ತಿಗೆ ನವೀನ ಮತ್ತು ಸೃಜನಶೀಲ ಕಲಿಕೆ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಎಡ್ವರ್ಡ್ ವಿಲಿಯಂ ಸಾಲ್ಡಾನಾ, ಮುಖ್ಯ ಅತಿಥಿಗಳು : ಡಾ. ಎಂ. ಪ್ರಭಾವತಿ, ನವೀನ್ ಕುಮಾರ್, ಸೆಬಿ ಮಾವೆಲಿ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 9.45ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಪ್ರಜಾಪಿತ ಬ್ರಹ್ಮಕುಮಾರೀ ಈಶ್ವರೀಯ ವಿಶ್ವವಿದ್ಯಾಲಯ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಆಶು ಭಾಷಣ ಸ್ಪರ್ಧೆ, ಭಾವಗೀತೆ, ಭಕ್ತಿಗೀತೆ, ಆಟೋಟ ಸ್ಪರ್ಧೆ, ಸ್ಥಳ: ಜ್ಞಾನ ಪ್ರಕಾಶ ಭವನ, ಯಾದವಗಿರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ :** ಸರಣಿ ಉಪನ್ಯಾಸ ಮಾಲಿಕೆ, ಡಾ. ಸಿ. ನಾಗಣ್ಣ ಅವರಿಂದ ಮಡಿವಾಳ ಮಾಚಯ್ಯನವರ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಸ್ಥಳ: ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮಧ್ಯಾಹ್ನ 2.30ಕ್ಕೆ.

■ **ವ್ಯವಸ್ಥಾಪಕರು :** ಪಾವನ ಮೆಲೋಡಿಸ್ ಅವರಿಂದ ರಾಜ್ ವಿಷ್ಣು ಗಾನೋತ್ಸವ, ಜನಪ್ರಿಯ ಗೀತೆಗಳ ಕರೋಕೆ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4 ರಿಂದ.

■ **ಗಾನಭಾರತೀ:** ವಿದುಷಿ ಸ್ಮಿತಾ ಶ್ರೀ ಕಿರಣ್ ಅವರಿಂದ ಕೊಳಲು ವಾದನ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ಸುನಿಲ್ ಸುಬ್ರಹ್ಮಣ್ಯ–ಮೃದಂಗ, ಸ್ಥಳ: ವೀಣೆಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲ ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಸ್.ಸಂಗೀತಾ, ಟಿ. ಎನ್. ಅಶ್ವಿನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 KABHI ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಗ್ಲಾಕೋಮಾ ಸಪ್ತಾಹದ ಸಂಬಂಧವಾಗಿ ಗ್ಲಾಕೋಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ರವಿಶಂಕರ್ ಕೆ.ವಿ.ಅವರೊಂದಿಗೆ ಮಾತುಕತೆ ಮತ್ತು ವಿಶ್ವ ಮೂತ್ರಪಿಂಡಗಳ ಜಾಗೃತಿ ದಿನಾಚರಣೆಯ ಸಂಬಂಧವಾಗಿ ಮೂತ್ರಪಿಂಡಗಳ ಆರೈಕೆ ಕುರಿತು ಮೈಸೂರಿನ ಡಾ.ವಿ. ಶಿವಕುಮಾರ್ ಹಾಗೂ ಡಾ. ಶಶಿಕಿರಣ್. ಕೆ.ಬಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್.ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು. ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಅಗ್ನಿಪಥ್ ಯೋಜನೆ ಕುರಿತು ಕೆ.ಪಿ. ಪ್ರದ್ಯುಮ್ನ ಅವರಿಂದ ಭಾಷಣ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ವಿಜುವಲ್ ಕಮ್ಯುನಿಕೇಷನ್ ವಿಷಯದಲ್ಲಿ ಇರುವ ಅಧ್ಯಯನ ಹಾಗೂ ವೃತ್ತಿಪರ ಅವಕಾಶಗಳು ಕುರಿತು ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನ ವಿಜುವಲ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥರಾದ ಡಾ. ಮೌಲ್ಯಾ ಬಾಲಾಡಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಟೊಮ್ಯಾಟೋ ಬೆಳೆಯ ಸಮಗ್ರ ಕೀಟ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ–ತೋಟಗಾರಿಕಾ ವಿಜ್ಞಾನಿ ಗಳಾದ ಡಾ. ಜಿ.ಕೆ. ಸುದರ್ಶನ್ ಮತ್ತು ಡಾ. ಜಿ.ಪಿ. ಮುತ್ತುರಾಜ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ : ಮೈಸೂರಿನ ಯರಗನಹಳ್ಳಿಯ ಸಿದ್ಧಮ್ಮ ಮತ್ತು ಸಂಗಡಿಗರಿಂದ ಚಾಮುಂಡಮ್ಮನ ಹಾಡು ಮತ್ತು ಮಾದೇಶ್ವರನ ಹಾಡು, 10.30 ಸವಿನೆನಪು

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–277, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಮೈಸೂರು ಎಂ.ನಾಗರಾಜ್ ಮತ್ತು ವಿದ್ವಾನ್ ಮೈಸೂರು ಎನ್. ಕಾರ್ತಿಕ್ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಡೆಲ್ಲಿ ಎಸ್. ಸಾಯಿರಾಂ –ಮೃದಂಗ, ವಿದ್ವಾನ್ ವಿ. ಅನಿರುದ್ಧ ಆತ್ರೇಯ–ಖಂಜಿರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್, ಜವಳಿ ಸಚಿವಾಲಯದ ಅಭಿವೃದ್ಧಿ ಆಯುಕ್ತರು, ತ್ರಿಪುರ ಸರ್ಕಾರದ ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ :** ಗಾಂಧಿ ಶಿಲ್ಪ ಬಜಾರ್ ಮೇಳ, ಉದ್ಘಾಟನೆ : ಜಿಪಂ ಸಿಇಓ ಎಸ್. ಉಕೇಶ್ ಕುಮಾರ್, ಅಧ್ಯಕ್ಷತೆ : ಎಡಿಸಿ ಡಾ. ಪಿ. ಶಿವರಾಜ್, ಮುಖ್ಯ ಅತಿಥಿಗಳು : ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯದ ನಿರ್ದೇಶಕ ಆರ್. ಅರುಣ್ ಕುಮಾರ್, ಜವಳಿ ಮಂತ್ರಾಲಯದ ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್‌ರಾವ್ ಅತುಕುರಿ, ಸಹಾಯಕ ನಿರ್ದೇಶಕ ಕೆ.ಎಸ್. ಸುನಿಲ್ ಕುಮಾರ್, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರಸ್ತೆ, ಸಂಜೆ 4ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 14 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 324 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ದುಬೈನಿಂದ ಚಿನ್ನ ಅಕ್ರಮ ಸಾಗಾಣೆ

ರನ್ಯಾ ರಾವ್ ವಿರುದ್ಧ ಸಿಬಿಐ, ಇಡಿ ಪ್ರತ್ಯೇಕ ಪ್ರಕರಣ ದಾಖಲು

• ರನ್ಯಾ ಮನೆ, ಕಚೇರಿ ಸೇರಿ 8 ಕಡೆ ಇಡಿ ದಾಳಿ; ಪರಿಶೀಲನೆ • ಸರ್ಕಾರಿ ಅಧಿಕಾರಿಗಳೇ ಸಹಕರಿಸಿರುವ ಶಂಕೆ





ಗುರುವಾರ ನಟಿ ರನ್ಯಾ ರಾವ್ ಅವರ ಈ ಮನೆ ಮೇಲೆ ಇಡಿ ದಾಳಿ ನಡೆಸಿತು.

ಬೆಂಗಳೂರು, ಮಾ.13(ಕೆಎಂಶಿ)– ಅಕ್ರಮ ಚಿನ್ನ ಸಾಗಾಣೆ ಪ್ರಕರಣದಲ್ಲಿ ನಟಿ ರನ್ಯಾ ರಾವ್ ವಿರುದ್ಧ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ.) ಪ್ರತ್ಯೇಕ ಎಫ್‌ಐಆರ್ ದಾಖಲಿಸಿವೆ.

ಕೇಂದ್ರ ಕಂದಾಯ ಗುಪ್ತಚರ ವಿಭಾಗ ನೀಡಿದ ಮಾಹಿತಿ ಆಧರಿಸಿ ಸಿಬಿಐ ಪ್ರಕರಣ ದಾಖಲು ಮಾಡಿಕೊಂಡಿತ್ತು, ಇದೀಗ ರನ್ಯಾ ವಿರುದ್ಧ ಎಫ್‌ಐಆರ್ ದಾಖಲಿಸಿ, ಜೈಲಿನಲ್ಲಿರುವ ಅವರಿಂದ ಕೆಲವು ಮಾಹಿತಿ ಪಡೆದಿದೆ. ಹಣ ವರ್ಗಾವಣೆ ಆರೋಪದ ಮೇಲೆ ಇ.ಡಿ. ಆಕೆ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ಮನೆ ಸೇರಿದಂತೆ ನಗರದ 8 ಕಡೆಗಳಲ್ಲಿ ದಾಳಿ ನಡೆಸಿ ತನಿಖೆ ಮುಂದುವರೆಸಿದೆ.

ರನ್ಯಾ ರಾವ್ ವಿರುದ್ಧ ಸಿಬಿಐ, ಶಿಕ್ಷಾರ್ಹ ಅಪರಾಧ ಒಳಸಂಚು, ಭ್ರಷ್ಟಾಚಾರ ತಡೆ ಕಾಯ್ದೆ ಸೆಕ್ಷನ್ 7 ಹಾಗೂ 12ರಡಿ ಎಫ್‌ಐಆರ್ ದಾಖಲಿಸಿದೆ. ಭ್ರಷ್ಟಾಚಾರ ತಡೆ ಕಾಯ್ದೆ ಪ್ರಕಾರ 7 ವರ್ಷ ಜೈಲು ಶಿಕ್ಷೆ, 12 ರಡಿ 3ರಿಂದ 7 ವರ್ಷ ಜೈಲು ಶಿಕ್ಷೆ ಹಾಗೂ ದಂಡ. ಸರ್ಕಾರಿ ಅಧಿಕಾರಿಗಳು ಈಕೆಗೆ ಸಹಕರಿಸಿರುವ ಸಂಶಯದ ಹಿನ್ನೆಲೆಯಲ್ಲಿ ಪಿಸಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಚಿನ್ನ ಸಾಗಾಣೆಯಲ್ಲಿ ಪ್ರಭಾವಿಗಳು ಭಾಗಿ: ಕರ್ನಾಟಕ ಸರ್ಕಾರದ ಅಧಿಕಾರಿಗಳಲ್ಲದೆ, ಕಸ್ಟಮ್‌ನ ಹಿರಿಯ ಅಧಿಕಾರಿಗಳು ಒಳಸಂಚಿನಲ್ಲಿ ಭಾಗಿಯಾಗಿರುವ ಶಂಕೆ ಇದೆ. ಅಲ್ಲದೆ, ದೇಶದ ವಿವಿಧೆಡೆ ಸಿಂಡಿಕೇಟ್ ಇರುವ ಬಗ್ಗೆ ಪ್ರಾಥಮಿಕ ತನಿಖೆಯಿಂದ ಮಾಹಿತಿ ಲಭ್ಯವಾಗಿದ್ದು ಇದರಡಿಯೂ ತನಿಖೆ ಕೈಗೆತ್ತಿಕೊಳ್ಳಲಾಗಿದೆ.

ರನ್ಯಾ ತನಿಖಾ ತಂಡದ ಮುಂದೆ ನೀಡಿರುವ ಮಾಹಿತಿಯಂತೆ ಡಿಜಿಪಿ ರಾಮಚಂದ್ರ ರಾವ್, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರೋಟೋ ಕಾಲ್ ಕೊಡಿಸಿದ್ದರು. ತಮ್ಮ ತಂದೆಯಿಂದ ಪ್ರೋಟೋಕಾಲ್ ಅಧಿಕಾರಿ ಬಸಪ್ಪ ಅಲಿಯಾಸ್ ಬಸವರಾಜುಗೆ ಕರೆ ಮಾಡಿಸಿ, ಮಗಳು ಮತ್ತು ಕುಟುಂಬದವರು ಬಂದಾಗ ಪ್ರೋಟೋಕಾಲ್ ನೀಡುವಂತೆ ಸೂಚಿಸಿದ್ದರಂತೆ. ಅವರ ಸೂಚನೆಯಂತೆ ಈ ಹಿಂದೆ 3ರಿಂದ 4 ಬಾರಿ ರನ್ಯಾ ರಾವ್‌ಗೆ ಪ್ರೋಟೋಕಾಲ್ ನೀಡಲಾಗಿದೆ.

ಆದರೆ, ಈ ಬಾರಿ, ತನಗೆ ಪ್ರೋಟೋಕಾಲ್ ಬೇಕು ಎಂದು ಕರೆ ಮಾಡಿದ್ದ ರನ್ಯಾ ರಾವ್, ತಾನು ದುಬೈನಿಂದ ಬರುತ್ತಿದ್ದು, ಸಂಜೆ 6–20ಕ್ಕೆ ರೀಚ್ ಆಗುತ್ತೇನೆ, ತಾವು ಬನ್ನಿ ಎಂದು ಪ್ರೋಟೋಕಾಲ್ ಅಧಿಕಾರಿಗೆ ಕರೆ ಮಾಡಿದ್ದರು. ರನ್ಯಾ ರಾವ್‌ಗೆ ಈ ಹಿಂದೆಯೂ ಪ್ರೋಟೋಕಾಲ್ ನೀಡಿದ್ದ ಬಸವರಾಜ್, ಈ ವೇಳೆ ಅಲ್ಲಿಯೇ ಕೆಲಸ ಮಾಡುವ ಇಂಟಲಿಜೆನ್ಸ್ ಅಧಿಕಾರಿ ಧನುಷ್ ರನ್ನೂ ಜೊತೆಗೆ ಕರೆದುಕೊಂಡು ಹೋಗಿದ್ದರು. ಧನುಷ್ ಬಾ ಒಳಗೆ ಹೋಗಿ ಬರುವ ಎಂಬುದಾಗಿ ಹೇಳಿ ಬಸವರಾಜ್ ಕರೆದು ಕೊಂಡು ಹೋಗಿದ್ದರಾದರೂ, ಇವರಿ ಬ್ಬರಿಗೂ ಚಿನ್ನ ಸಾಗಣೆ ಬಗ್ಗೆ ಮಾಹಿತಿ ಇರಲಿಲ್ಲವಂತೆ.

ರನ್ಯಾ ರಾವ್‌ಗೆ ಟಾಸ್ಕ್ ನೀಡಲಾಗಿತ್ತು: ವಿಮಾನ ನಿಲ್ದಾಣದಿಂದ ಚಿನ್ನ ಸಹಿತ ಹೊರ ಬಂದ ಬಳಿಕ ■6ನೇ ಪುಟಕ್ಕೆ

ಬಿಜೆಪಿ ಲಿಂಗಾಯತ ಬಣ ಸಭೆಗಳಿಗೆ ಹೈಕಮಾಂಡ್ ಬ್ರೇಕ್

ಬಿ.ವೈ.ವಿಜಯೇಂದ್ರ ವಿರುದ್ಧ ಅಮಿತ್ ಶಾಗೆ ಲಿಂಬಾವಳಿ ದೂರು



ರೇಣುಕಾಚಾರ್ಯ



ಅಮಿತ್ ಶಾ



ಯತ್ನಾಳ್

ನವದೆಹಲಿ, ಮಾ.13– ರಾಜ್ಯ ಬಿಜೆಪಿಯಲ್ಲಿನ ಗೊಂದಲ ಶಮನಕ್ಕೆ ಕೊನೆಗೂ ಹೈಕಮಾಂಡ್ ಮುಂದಾಗಿದೆ. ಬಿಜೆಪಿಯಲ್ಲಿ ನಡೆಯುತ್ತಿದ್ದ ಲಿಂಗಾಯತ ವರ್ಸಸ್ ಲಿಂಗಾಯತ ಸಮರಕ್ಕೆ ಹೈಕಮಾಂಡ್ ಬ್ರೇಕ್ ಹಾಕಿದೆ. ಈ ಬೆನ್ನಲ್ಲೇ ಎರಡೂ ಬಣಗಳ ಸಭೆಗಳಿಗೂ ತಡೆ ಬಿದ್ದಿದೆ. ಮೊನ್ನೆಯಷ್ಟೇ ದೆಹಲಿಗೆ ಹೋಗಿದ್ದ ಅರವಿಂದ ಲಿಂಬಾವಳಿ ನೇರವಾಗಿ ಅಮಿತ್ ಶಾ ಅವರನ್ನು ಭೇಟಿ ಮಾಡಿ ವಿಜಯೇಂದ್ರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಇತ್ತೀಚೆಗೆ ರಾಜ್ಯಕ್ಕೆ ಬಂದಿದ್ದ ಅಮಿತ್ ಶಾ ಇದೀಗ ಬಿಜೆಪಿ ಮನೆ ರಿಪೇರಿಗೆ ಕೈ ಹಾಕಿದ್ದಾರೆ. ದೆಹಲಿಯಿಂದಲೇ ಖಡಕ್ ಸಂದೇಶ ರವಾನಿಸಿರುವ ಅಮಿತ್ ಶಾ, ಪ್ರತ್ಯೇಕ ಸಭೆಗಳನ್ನು ನಡೆಸದಂತೆ ಎಚ್ಚರಿಕೆ ನೀಡಿದ್ದಾರೆ.

ಅಮಿತ್ ಶಾ ಎಚ್ಚರಿಕೆ ಬೆನ್ನಲ್ಲೇ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದ್ದಾರೆ. ಲಿಂಗಾಯತ ಅಸ್ತ್ರ ಮುಂದಿಟ್ಟುಕೊಂಡು ಯಾವುದೇ ಕಾರಣಕ್ಕೂ ಭವಿಷ್ಯದಲ್ಲಿ ಸಭೆ ಹಾಗೂ ಶಕ್ತಿ ಪ್ರದರ್ಶನ ನಡೆಸದಂತೆ ಮಾಜಿ ಶಾಸಕ ರೇಣುಕಾಚಾರ್ಯಗೆ ಬಿಎಸ್‌ವೈ ಅವರು ಖಡಕ್ ಸಂದೇಶ ನೀಡಿದ್ದಾರೆ. ಬುಧವಾರ ರಾತ್ರಿ ತಮ್ಮ ಧವಳಗಿರಿ ನಿವಾಸಕ್ಕೆ ರೇಣುಕಾಚಾರ್ಯ ಅವರನ್ನು ಕರೆಸಿಕೊಂಡು ಮಾತಾಡಿರುವ ಯಡಿಯೂರಪ್ಪ ವಿಜಯೇಂದ್ರ ಬೆಂಬಲಿಸಿ ಲಿಂಗಾಯತರು ಯಾವುದೇ ಸಭೆ ನಡೆಸದಂತೆ ಸೂಚನೆ ನೀಡಿದ್ದಾರೆ. ಯಡಿಯೂರಪ್ಪ ಸೂಚನೆ ಹಿನ್ನೆಲೆಯಲ್ಲಿ ಸದ್ಯಕ್ಕೆ ಸುಮ್ಮನಿದ್ದರೂ ಸಮುದಾಯದ ಮಹಾಸಂಗಮ ಸಮಾವೇಶ ನಡೆಸುವುದಾಗಿ ರೇಣುಕಾಚಾರ್ಯ ತಿಳಿಸಿದ್ದಾರೆ.

ರೆಬೆಲ್ ನಾಯಕ ಯತ್ನಾಳ್ ಸಹ ಮಾ. 22ರಂದು ನಡೆಸಬೇಕಿದ್ದ ಲಿಂಗಾಯತ ಸಮಾವೇಶವನ್ನು ■6ನೇ ಪುಟಕ್ಕೆ

ಶೀಘ್ರವೇ ಸರ್ಕಾರಿ ಪದವಿ ಕಾಲೇಜುಗಳ 2000 ಬೋಧಕ ಹುದ್ದೆಗೆ ನೇಮಕಾತಿ



ಸುಧಾಕರ್

ಬೆಂಗಳೂರು, ಮಾ.13(ಕೆಎಂಶಿ)–ಸರ್ಕಾರಿ ಪದವಿ ಕಾಲೇಜುಗಳ 2000 ಬೋಧಕರ ಹುದ್ದೆಗಳ ನೇಮಕಾತಿಗೆ ಅನುಮೋದನೆ ದೊರೆತಿದ್ದು, ಶೀಘ್ರವೇ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ವಿಧಾನಸಭೆಗಿಂದು ತಿಳಿಸಿದ್ದಾರೆ.

ಬಸನಗೌಡ ಪಾಟೀಲ್ ಯತ್ನಾಳ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಸರ್ಕಾರಿ ಪದವಿ ಕಾಲೇಜುಗಳಿಗೆ ಮಂಜೂರಾಗಿರುವ 412 ಪ್ರಾಂಶುಪಾಲರ ಹುದ್ದೆಗಳು ಪೂರ್ಣ ಖಾಲಿ ಇವೆ. ಉನ್ನತ ಶಿಕ್ಷಣ ಇಲಾಖೆಯಡಿ 440 ಸರ್ಕಾರಿ ಪದವಿ ಕಾಲೇಜುಗಳಿವೆ. 412 ಪ್ರಾಂಶುಪಾಲರ ಹುದ್ದೆಗಳು ಮಂಜೂರಾಗಿವೆ ಎಂದರು. ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಬೋಧಕರನ್ನು ಬೇರೆ ಕಡೆ ಹುದ್ದೆಗಳಿಗೆ ನಿಯೋಜನೆ ಮೇಲೆ ಕಳುಹಿಸಲು ಭಾರಿ ಒತ್ತಡವಿದೆ. ಆದರೆ, ನಾನು ಅವಕಾಶ ನೀಡುತ್ತಿಲ್ಲ. ಇದರಿಂದ ಬಹಳಷ್ಟು ಶಾಸಕರು, ಸಂಸದರಿಗೆ ನನ್ನ ಮೇಲೆ ಅಸಮಾಧಾನವಿದೆ.

ಕಳೆದ 2022ರಲ್ಲಿ 310 ಪ್ರಾಂಶುಪಾಲರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ನಿಯಮಾನುಸಾರ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿತ್ತು. ಆದರೆ, ಕೆನೆಪದರ ಪದ್ಧತಿಯಲ್ಲಿನ ಗೊಂದಲ, ಕಂದಾಯ ಇಲಾಖೆ ಹಾಗೂ ಹಿಂದುಳಿದ ■6ನೇ ಪುಟಕ್ಕೆ

ಐಶ್ವರ್ಯಾಗೌಡಗೆ ಅಕ್ರಮವಾಗಿ ಮೊಬೈಲ್ ಕರೆಗಳ ವಿವರ ನೀಡಿದ ಪೊಲೀಸರ ಬಂಧನ




ಐಶ್ವರ್ಯಾಗೌಡ

ಬೆಂಗಳೂರು, ಮಾ.13– ಸಿಡಿಆರ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಂಚಕಿ ಐಶ್ವರ್ಯಾಗೌಡಗೆ ಅಕ್ರಮವಾಗಿ ಮೊಬೈಲ್ ಕರೆಗಳ ವಿವರ ನೀಡಿದ ಆರೋಪದ ಮೇರೆಗೆ ಹೆಡ್ ಕಾನ್‌ಸ್ಟೆಬಲ್ ಸೇರಿ ಇಬ್ಬರು ಪೊಲೀಸರನ್ನು ಬಂಧಿಸಲಾಗಿದೆ.

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕಿನ ಅಕ್ಕೂರು ಪೊಲೀಸ್ ಠಾಣೆ ಹೆಡ್‌ಕಾನ್‌ಸ್ಟೆಬಲ್ ಸುನೀಲ್ ಹಾಗೂ ಮಂಗಳವಾರಪೇಟೆಯ ಪವನ್ ಬಂಧಿತರಾಗಿದ್ದು, ವಂಚಕಿ ಐಶ್ವರ್ಯಾಗೌಡಳ ಸಂಪರ್ಕ ಜಾಲವನ್ನು ಶೋಧಿಸಿದಾಗ ಸಿಡಿಆರ್ ಕೃತ್ಯದ ಹಿಂದೆ ಹೆಡ್ ಕಾನ್‌ಸ್ಟೇಬಲ್ ಮತ್ತು ಇತರೆ ಸಿಬ್ಬಂದಿಯ ಪಾತ್ರ ಬಯಲಾಗಿದೆ. ಬ್ಯಾಟರಾಯನಪುರ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಭರತ್ ಎಸ್ ರೆಡ್ಡಿ ಅವರು ಕಳೆದ ತಿಂಗಳು ಬ್ಯಾಟರಾಯನಪುರ ■6ನೇ ಪುಟಕ್ಕೆ

ಬೆಂಗಳೂರು ಅರಮನೆ ಭೂಮಿ ಬಳಕೆ, ನಿಯಂತ್ರಣ ನಿರ್ಧಾರ ಇನ್ನು ರಾಜ್ಯ ಸರ್ಕಾರದ್ದು

• ಈ ಸಂಬಂಧಿತ ಕಾಯ್ದೆ ಜಾರಿ • ರಾಜ್ಯಪಾಲರಿಂದ ಅನುಮೋದನೆ; ಗೆಜೆಟ್‌ನಲ್ಲಿ ಪ್ರಕಟ
• ಟಿಡಿಆರ್ ನೀಡುವುದರಿಂದ ಬಚಾವಾಗಲು ಸರ್ಕಾರ ಸುಗ್ರೀವಾಜ್ಞೆ ಮೂಲಕ ಕಾಯ್ದೆ ತಂದಿತ್ತು



ಬೆಂಗಳೂರು, ಮಾ.13– ಬೆಂಗಳೂರು ಅರಮನೆ ಭೂಬಳಕೆ, ನಿಯಂತ್ರಣ ಕುರಿತ ಕಾಯ್ದೆ ಅಧಿಕೃತವಾಗಿ ಜಾರಿಗೆ ಬಂದಿದೆ.

ಬುಧವಾರವಷ್ಟೇ ಸರ್ಕಾರ ಕಳಿಸಿದ್ದ ವಿಧೇಯಕಕ್ಕೆ ರಾಜ್ಯಪಾಲರು ಅನುಮೋದನೆ ನೀಡಿದ್ದರು. ಇಂದು ಸರ್ಕಾರ ಕಾಯ್ದೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಗೆ ಬಂದಿದೆ. ಆ ಮೂಲಕ ಅರಮನೆ ಮೈದಾನ ಭೂಮಿಯಲ್ಲಿ ಕಾಮಗಾರಿ ನಡೆಸುವುದು ಇಲ್ಲವೇ ಕೈ ಬಿಡುವ ಹಕ್ಕನ್ನು ರಾಜ್ಯ ಸರ್ಕಾರ ಹೊಂದಲಿದೆ. ಕಾಯ್ದೆ ಮೂಲಕ ಬೆಂಗಳೂರು ಅರಮನೆ ಮೈದಾನದ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಬಳಸಿಕೊಳ್ಳಲು ಅವಕಾಶ ಸಿಕ್ಕಿದೆ.

ಈಗಾಗಲೇ ಅರಮನೆ ಮೈದಾನದ ಭೂಮಿ ಸರ್ಕಾರಕ್ಕೆ ಸೇರಿದ್ದು ಎಂದು ರೂಪಿಸಲಾದ ಕಾಯ್ದೆಗೆ ಹೈಕೋರ್ಟ್ ಮಾನ್ಯತೆ ನೀಡಿದ್ದು, ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಹೀಗಾಗಿ 472.16 ಎಕರೆ ಭೂಮಿಯು ತಾಂತ್ರಿಕವಾಗಿ ಸರ್ಕಾರಕ್ಕೇ ಸೇರಿದ್ದಾಗಿದೆ. ಅದರ ನಡುವೆ ಸುಪ್ರೀಂ ಕೋರ್ಟ್ ಟಿಡಿಆರ್ ನೀಡುವಂತೆ ಆದೇಶಿಸಿದ್ದು, ಅದನ್ನು ನೀಡದಿದ್ದರೆ ನ್ಯಾಯಾಂಗ ನಿಂದನೆಯಾಗಲಿದೆ. ಹೀಗಾಗಿ ಅದರಿಂದ ತಪ್ಪಿಸಿಕೊಳ್ಳಲು ಹಾಗೂ ಭವಿಷ್ಯದ ದುಷ್ಪರಿಣಾಮಗಳಿಂದ ಬಚಾವಾಗಲು, ರಸ್ತೆ ಅಗಲೀಕರಣಕ್ಕೆ ಭೂಮಿ ಬಳಸಲು ನೂತನ ಕಾಯ್ದೆ ತರಲಾಗಿದೆ.

ಬೆಂಗಳೂರು ಅರಮನೆಯ ಒಟ್ಟಾರೆ ವ್ಯಾಪ್ತಿಯ 472 ಎಕರೆ 16 ಗುಂಟೆ ಮೌಲ್ಯವನ್ನು 1996ರಲ್ಲಿ 11 ಕೋಟಿ ರೂ.ಗಳೆಂದು ನಿರ್ಧರಿಸಿರುವುದರಿಂದ ಈ ನಿರ್ಧಾರವನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿದ್ದು, ಅದಕ್ಕೆ ಸುಪ್ರೀಂಕೋರ್ಟ್ ಅಪೀಲಿನಲ್ಲಿ ಯಾವುದೇ ತಡೆಯಾಜ್ಞೆ ಇಲ್ಲದೇ ಇರುವುದರಿಂದ 2024ರ ಡಿ.10 ರಂದು ನ್ಯಾಯಾಂಗ ನಿಂದನಾ ಪ್ರಕರಣದಲ್ಲಿ ■6ನೇ ಪುಟಕ್ಕೆ

ರಾಜ್ಯ ಸರ್ಕಾರ ಮೊದಲು ಸುಗ್ರೀವಾಜ್ಞೆ ತಂದು, ನಂತರ ಕಾಯ್ದೆಯನ್ನು ವಿಧಾನಮಂಡಲದಲ್ಲಿ ಮಂಡಿಸಿ, ಅಂಗೀಕಾರ ಪಡೆಯುವುದರೊಂದಿಗೆ ಮೈಸೂರು ಮಹಾರಾಜರಿಗೆ ಸೇರಿದ ಬೆಂಗಳೂರು ಅರಮನೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿದೆ. ಇದಕ್ಕೆ ನಮ್ಮ ವಿರೋಧವಿದೆ. ಈ ಹಿಂದೆಯೂ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಅದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಿತ್ತು. ಯದುವೀರ್ ಬಿಜೆಪಿ ಸಂಸದರಾದ ನಂತರ ರಾಜಕೀಯ ದ್ವೇಷಕ್ಕೆ ಈ ತೀರ್ಮಾನವನ್ನು ಕೈಗೊಳ್ಳಲಾಗಿದೆ.
- ಬಿ. ಶ್ರೀರಾಮುಲು, ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ.


ರಾಜ್ಯದಲ್ಲಿ 7 ಪಿಯು ಕಾಲೇಜು ಆರಂಭ




ಮಧು ಬಂಗಾರಪ್ಪ

ಬೆಂಗಳೂರು, ಮಾ.13(ಕೆಎಂಶಿ)–ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲೂಕುಗಳಲ್ಲಿ 7 ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ, ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಇದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ವಿಧಾನಸಭೆಗಿಂದು ತಿಳಿಸಿದ್ದಾರೆ.

ವಿಶ್ವಾಸ್ ವಸಂತ ವೈದ್ಯ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ನಿರ್ದೇಶಕರು ಕಳೆದ ಡಿಸೆಂಬರ್ 9 ರಂದು ಪ್ರಸ್ತಾವನೆ ಸಲ್ಲಿಸಿದ್ದು, ಆರ್ಥಿಕ ಇಲಾಖೆ ಅನುಮತಿ ದೊರೆತ ಕೂಡಲೇ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದರು. ಬಜೆಟ್‌ನಲ್ಲಿ ಘೋಷಿಸಿರುವಂತೆ ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸುವುದಾಗಿ ಸಚಿವರು ತಿಳಿಸಿದರು.





ನಕ್ಕರೆ ಅದೇ ಸ್ವರ್ಗ

ಕೈದಿ : ನೀನೇಕೆ ಜೈಲೊಳಗೆ ಬಂದೆ?
ಹೊಸ ಕೈದಿ : ಅಂಗಡಿ ಓಪನ್ ಮಾಡಿದ್ದಕ್ಕೆ ಜೈಲಿಗೆ ಹಾಕಿದ್ದಾರೆ.
ಕೈದಿ : ಅರೆ, ಅದರಲ್ಲಿ ತಪ್ಪೇನಿದೆ?
ಹೊಸ ಕೈದಿ : ಇನ್ನೊಬ್ಬರ ಅಂಗಡಿಯ ಬೀಗವನ್ನು ಸುತ್ತಿಗೆಯಲ್ಲಿ ಹೊಡೆದು ಓಪನ್ ಮಾಡಿದ್ದೆ!

ಮೈಸೂರು ಮಿತ್ರ

ಶುಕ್ರವಾರ, 14 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಗುರುವಿನಿಂದ ಜ್ಞಾನವನ್ನು, ತಂದೆಯಿಂದ ಶಿಸ್ತನ್ನು, ತಾಯಿಯಿಂದ ಸಂಸ್ಕಾರವನ್ನು ಕಲಿಯಿರಿ... ಉಳಿದಿದ್ದೆಲ್ಲಾ ಈ ಜಗತ್ತು ಕಲಿಸುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು

ನಿಮ್ಮ ಪತ್ರಗಳು

■ ಇ-ಸ್ವತ್ತಿಗೆ ಸಾರ್ವಜನಿಕರ ಅಸಹಕಾರ ಎನ್ನುವುದು ಸರಿಯೇ

ಮಾನ್ಯರೆ,

ಕರ್ನಾಟಕ ಸರ್ಕಾರ ಇ-ಸ್ವತ್ತು ಕಡ್ಡಾಯ ಎಂದು ಹೊರಡಿಸಿದ ಆದೇಶದಿಂದಲೇ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ನೋಂದಣಿ ಪ್ರಕ್ರಿಯೆಗಳು ಸಂಪೂರ್ಣವಾಗಿ ಕುಸಿತಗೊಂಡಿತು.

ಇ-ಸ್ವತ್ತಿನ ಬಗ್ಗೆ ಸಾರ್ವಜನಿಕರ ಮನವೊಲಿಸಲು ಮನೆ ಬಾಗಿಲಿಗೆ ಹೋದಾಗ ದಢಾರ್ ಎಂದು ಬಾಗಿಲು ಹಾಕಿಕೊಳ್ಳುತ್ತಾರೆ ಮತ್ತು ನಮ್ಮ ಸಿಬ್ಬಂದಿಗಳಿಗೆ ಉತ್ತಮ ಸ್ಪಂದನೆ ನೀಡುತ್ತಿಲ್ಲ ಎಂದು ಮಹಾನಗರ ಪಾಲಿಕೆಯ ವಲಯ ಆಯುಕ್ತರ ಕಚೇರಿ-3 ರವರು ಹೇಳಿದ ಮಾತು ಒಂದೆರಡು ತಿಂಗಳ ಹಿಂದೆ ಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದೆ. ಈ ಅಧಿಕಾರಿ ಮಾತಿಗೆ ಸಭೆಯಲ್ಲಿಯೇ ಉತ್ತರ ಸಿಕ್ಕಿದೆ. ಸಭೆ ಸೇರಿದವರಲ್ಲಿ ಕೆಲವರು ಇ-ಸ್ವತ್ತು ಮಾಡಿಸಿಕೊಳ್ಳಲು 3 ರಿಂದ 4 ಸಾವಿರ ರೂ. ಬೇಡಿಕೆ ಇಡುತ್ತಾರೆ. ನಮ್ಮ ಪಕ್ಕದ ಮನೆಯವರು ನಿಮ್ಮ ಸಹವಾಸ ಬೇಡ ಎಂದು 6-7 ಸಾವಿರ ಲಂಚ ನೀಡಿ ಇ-ಸ್ವತ್ತು ಮಾಡಿಸಿಕೊಂಡಿದ್ದಾರೆ ಎಂದು ನೇರವಾಗಿ ಹೇಳಿದ್ದಾರೆ. ಈ ರೀತಿ ಹೇಳುವಾಗ ಸಾರ್ವಜನಿಕರ ಅಸಹಕಾರ ಎಂದು ಹೇಳಿದ ಅಧಿಕಾರಿ ಕೂಡಲೇ ತಮ್ಮ ಸಿಬ್ಬಂದಿಗಳನ್ನು ಕರೆದು ವಿಚಾರಣೆ ಮಾಡಿ ವಿಷಯ ನಿಜಾಂಶವಾಗಿದ್ದರೆ ಶಿಸ್ತು-ಕ್ರಮ ಕೈಗೊಳ್ಳಬಹುದಿತ್ತು. ಯಾವುದೇ ವಿಚಾರಣೆ ಮಾಡದೇ ತಮ್ಮ ಅಧಿಕಾರಕ್ಕೆ ಎಲ್ಲಿ ಕುತ್ತು ಬರುತ್ತದೆ ಎಂದು ಜನರ ಅಸಹಕಾರ ಎನ್ನುವುದು ಸರಿಯೇ?

ಪ್ರತಿಯೊಂದು ವಲಯ ಕಚೇರಿಗಳಲ್ಲಿ ಇ-ಖಾತಾಗೆ ಅರ್ಜಿ ಸಲ್ಲಿಸಿದ ದಿನಾಂಕಗಳನ್ನು ಗಮನಿಸಲಿ. ಸಾಮಾನ್ಯವಾಗಿ ಬರವಣಿಗೆಯಲ್ಲಿರುವ ಹಳೆಯ ಖಾತಾ ಪತ್ರಗಳಿಗೆ (ಮ್ಯುಟೇಶನ್ ಇಲ್ಲದ) 8 ರಿಂದ 10 ದಿನಗಳ ಒಳಗೆ ಇ-ಸ್ವತ್ತು ವರ್ಗಾಯಿಸಿ ಕೊಡಬೇಕು. ಖಾತಾ ವರ್ಗಾವಣೆ ಸಲ್ಲಿಸಿದ ಅರ್ಜಿದಾರನಿಗೆ ಸಿಬ್ಬಂದಿಗಳ ಮಾತು ಎಂದರೆ:-45 (ರಜಾ ದಿನ ಹೊರತುಪಡಿಸಿ) ದಿನ ಬೇಕಾಗುತ್ತದೆ ಎಂದು ಹೇಳುತ್ತಾರೆ. 45 ದಿನದಿಂದ ಒಂದೆರಡು ವರ್ಷಗಳಾದರೂ ಆಗಬಹುದು. ಇಲ್ಲಿಂದ ಬೇಡಿಕೆ ಸೃಷ್ಟಿಯಾಗುತ್ತದೆ. ಇದನ್ನು ಸಭೆಯಲ್ಲಿದ್ದ ಸಾರ್ವಜನಿಕರು ಮುಕ್ತವಾಗಿ ಹೇಳಿದ್ದಾರೆ. ಜನರ ಅಸಹಕಾರ ಎನ್ನುವ ಬದಲು ಇ-ಸ್ವತ್ತಿಗೆ ಅರ್ಜಿ ಸಲ್ಲಿಸಿದರೆ ವರ್ಗಾಯಿಸಿಕೊಡಲು ನಿಗದಿಯಾಗಿರುವ ದಿನಗಳ ಬಗ್ಗೆ ತಿಳಿಸಲಿ, ಹಾಗೆಯೆ ಖಾತಾ-ಪತ್ರದಲ್ಲಿ ಅರ್ಜಿ ವಿತರಿಸಿದ ದಿನಾಂಕ ಮಾತ್ರ ನಮೂದಾಗಿರುತ್ತದೆ. ಇದೇ ರೀತಿ ಅರ್ಜಿ ಸಲ್ಲಿಸಿದ ದಿನಾಂಕ ಕೂಡ ನಮೂದಾಗಲಿ. ಅರ್ಜಿ ಸಲ್ಲಿಸಿದ ದಿನಾಂಕ ಕೂಡ ನಮೂದಿಸಿದರೆ ಮೊದಲ ಮತ್ತು ತಡವಾಗಿ ಸಲ್ಲಿಸಿದ ಅರ್ಜಿಗಳ ವ್ಯತ್ಯಾಸ ತಿಳಿದುಕೊಳ್ಳಲು ಅರ್ಜಿದಾರರಿಗೆ ಅನುಕೂಲವಾಗುತ್ತದೆ.

-ಎಂ.ಎನ್.ಧರಣಿ ವೆಂಕಟೇಶ, ಸ್ಥಿರಾಸ್ತಿಗಳ ಜಿಲ್ಲಾ ಪತ್ರ ಬರಹಗಾರರು, ಮೈಸೂರು.

■ ಸೂರ್ಯ ಬೇಕರಿ ಸರ್ಕಲ್ ಅಗಲೀಕರಣಗೊಳಿಸಿ



ಮಾನ್ಯರೆ,

ಇದು, ಮೈಸೂರಿನ ಕುಂಬಾರಕೊಪ್ಪಲು, ಹೆಬ್ಬಾಳು, ವಿಜಯ ನಗರ ಎರಡನೇ ಹಂತ ಮತ್ತು ಮಂಚೇಗೌಡನಕೊಪ್ಪಲು ಸೇರುವ 'ಸೂರ್ಯ ಬೇಕರಿ' ಸರ್ಕಲ್. ಇದು ಇತ್ತೀಚೆಗೆ ಮೈಸೂರು ನಗರದಲ್ಲೇ ಅತ್ಯಂತ ಹೆಚ್ಚು ಜನದಟ್ಟಣೆ ಪ್ರದೇಶವಾಗಿದೆ. ಸೂರ್ಯ ಬೇಕರಿ ಸರ್ಕಲ್ ಅತ್ಯಂತ ಕಿರಿದಾಗಿದ್ದು, ಅತೀ ಹೆಚ್ಚು ವಾಹನಗಳು ಇಲ್ಲಿ ಸಂಚರಿಸುವುದರಿಂದ ವಾಹನ ಸವಾರರು ಈ ಸರ್ಕಲ್‌ನಲ್ಲಿ ಸಾಗುವುದೇ ದೊಡ್ಡ ಸಾಹಸ. ಇದೊಂದು ರೀತಿಯಲ್ಲಿ ಸರ್ಕಸ್ ಸಾಹಸವೇ ಸರಿ. ದಿನವೂ ಒಂದಲ್ಲಾ ಒಂದು ಲಘು ಅಪಘಾತ ಸಂಭವಿಸುತ್ತಲೇ ಇವೆ. ಇಲ್ಲಿರುವ ಅಂಗಡಿ ಮುಂಗಟ್ಟುಗಳ ಮಾಲೀಕರು ತಮ್ಮ ಪದಾರ್ಥಗಳನ್ನು ಫುಟ್‌ಪಾತ್‌ನಲ್ಲಿ ಇಡುವುದರಿಂದ ಮತ್ತಷ್ಟು ಸಮಸ್ಯೆ ಸೃಷ್ಟಿಯಾಗಿದೆ. ವೃತ್ತದ ಎರಡು ಕಡೆಯ ಅಂಗಡಿಯವರು ತಡೆಗೋಡೆ ನಿರ್ಮಿಸಿರುವುದು ಸಹ ಪಾದಚಾರಿಗಳಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಇನ್ನು ಈ ಸರ್ಕಲ್ ಅನ್ನು ಅಗಲೀಕರಣ ಮಾಡುವುದೊಂದೇ ಇದಕ್ಕೆ ಪರಿಹಾರ. ಅಲ್ಲಿಯ ತನಕ ವಾಹನ ಸಂಚಾರ ದಟ್ಟಣೆ ಇರುವ ಬೆಳಿಗ್ಗೆ ಮತ್ತು ಸಂಜೆ ಒಂದಿಬ್ಬರು ಸಂಚಾರಿ ಪೊಲೀಸರನ್ನು ಇಲ್ಲಿ ನಿಯೋಜಿಸಲಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಬನ್ನಿಮಂಟಪ ನಿಲ್ದಾಣದ ಕನಸು ನನಸಾಗಿಸುವ ಅಗತ್ಯವಿಲ್ಲ

ಮಾನ್ಯರೆ,

'ಮೈಸೂರು ಮಿತ್ರ'ದಲ್ಲಿ [ಮಾರ್ಚ್ 7ರ ಮುಖಪುಟ] ಖ್ಯಾತ ಅಭಿಯಂತರ ಎಂ.ಎಸ್. ವಿಜಯಶಂಕರರು ಬನ್ನಿಮಂಟಪದಲ್ಲಿ ಕಟ್ಟಲು ಯೋಜಿಸಿರುವ ನೂತನ ಬಸ್ ನಿಲ್ದಾಣದ ಹೊರವಿನ್ಯಾಸವು ಅರಮನೆಯ ನಕಲಿನಂತೆ ತೋರುವುದರಿಂದ ಅಸೂಕ್ತವೆಂದು ದನಿಯೆತ್ತಿದ್ದಾರೆ.

ಯೋಜಿತ ಹೊಸ ನಿಲ್ದಾಣವು ಈಗಾಗಲೇ ಇರುವ ಸಬರ್ಬನ್ ಬಸ್ ನಿಲ್ದಾಣದಷ್ಟೆ ವಿಶಾಲವಾದದ್ದು ಎನಿಸುತ್ತದೆ. ಅದೂ ಕೇವಲ ಎರಡು ಕಿಮೀ ಅಂತರದಲ್ಲಷ್ಟೇ! ನಗರವು ಎಲ್ಲಾ ದಿಶೆಗಳಲ್ಲೂ ಬೆಳೆಯುತ್ತಿದೆ. ಈಗಂತೂ ಔಟರ್-ವರ್ತುಲ ಮಾರ್ಗ ನಿರ್ಮಿಸುವ ಯೋಜನೆಯೂ ಇದೆ.

ನಗರದ ಕೇಂದ್ರದ ಮೇಲಿನ ವಾಹನ, ಜನಸಂದಣಿಯನ್ನು ತಗ್ಗಿಸಬೇಕಾದ್ದು ಜರೂರು ಅಗತ್ಯವಾಗಿದೆ. ಹೀಗಾಗಿ ನಗರಕ್ಕೆ ಅಗತ್ಯವಿರುವುದು 4 ಇಲ್ಲವೆ 5 ಮಿನಿ ಬಸ್ ನಿಲ್ದಾಣಗಳು ನಗರದ ವಿವಿಧ ದಿಕ್ಕುಗಳಲ್ಲಿ (ವರ್ತುಲ ಮಾರ್ಗವನ್ನು ಲಕ್ಷ್ಯಕ್ಕೆ ತೆಗೆದುಕೊಂಡು) ಪ್ರತ್ಯೇಕ ನಿಲ್ದಾಣಗಳನ್ನು ನಿರ್ಮಾಣ ಮಾಡಿಸಿದಲ್ಲಿ ನಗರ-ಕೇಂದ್ರದ ಮೇಲಿನ ಒತ್ತಡವು ತಗ್ಗುತ್ತದೆ. ವಿವಿಧ ಬಡಾವಣೆಗಳ ನಡುವೆ ನೇರವಾಗಿ (ನಗರ-ಕೇಂದ್ರಕ್ಕೆ ಬಾರದೆ)ಜನ, ವಾಹನಗಳು ಚಲಿಸಲು ಅನುವಾಗುವುದು. ಕೆಲವು ನಗರದ ಹೊರಗಿನಿಂದ ಬರುವ ಹಿರಿಯ, ಕಿರಿಯ ವಾಹನಗಳು ಬೇಡದಿದ್ದರೂ, ಅರಮನೆ ದರ್ಶನ ಮಾಡಬೇಕಾದ್ದಿಲ್ಲ. ಬೇಕಾದರೆ, ಈ ಮಿನಿ ನಿಲ್ದಾಣಗಳನ್ನು ಉಪನಗರ-ನಿಲ್ದಾಣಗಳು ಎಂದು ಕರೆಯಬಹುದು. ಅಂದರೆ, ಬನ್ನಿಮಂಟಪ ನಿಲ್ದಾಣದ ಕನಸು ನನಸಾಗಿಸುವ ಅಗತ್ಯವಿಲ್ಲ.

-ಡಿ.ವಿ.ಎಂ.ಪ್ರಕಾಶ್, ಗೋಕುಲ ರಸ್ತೆ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಭಾರತದಲ್ಲಿ ಬಹುತ್ವಕ್ಕೆ ಮನ್ನಣೆ ನೀಡುವುದೇ ಔಚಿತ್ಯಪೂರ್ಣ...

ನಮ್ಮ ದೇಶ ಆರಿಸಿಕೊಂಡಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನ. ಇದರ ಪ್ರಧಾನ ಗುಣವೆಂದರೆ ಬಹುಮತಕ್ಕೆ ಮಾನ್ಯತೆ ನೀಡುವಂತಹುದು. ದರಂತೆ ಹೆಚ್ಚು ಜನರು ಪಡುವ ಇಷ್ಟಕ್ಕೆ ಮಾನ್ಯತೆ ಸಿಗುತ್ತದೆ ಹಾಗೂ ಸಿಗಬೇಕು ಎಂಬುದು.

ಇದೇ ತತ್ವವನ್ನು ನಮ್ಮ ನ್ಯಾಯಾಲಯಗಳೂ ಅನುಸರಿಸುತ್ತವೆ. ಉಚ್ಚ ನ್ಯಾಯಾಲಯವಾಗಲಿ, ಸರ್ವೋಚ್ಚ ನ್ಯಾಯಾಲಯದಲ್ಲಾಗಲಿ ಒಂದಕ್ಕಿಂತ ಹೆಚ್ಚು ನ್ಯಾಯಾಧೀಶರಿರುವ ಪೀಠಗಳಲ್ಲಿ ಯಾವುದಾದರೂ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಾಗ, ಅದರಲ್ಲಿ ಐವರು ನ್ಯಾಯಾಧೀಶರಿದ್ದರೆ ಅವರಲ್ಲಿ ಮೂವರು ನೀಡಿದ ತೀರ್ಪನ್ನೇ ನ್ಯಾಯಾಲಯದ ತೀರ್ಪು ಎಂದು ಪರಿಗಣಿಸಲಾಗುತ್ತದೆ. ಹಾಗೆಂದು ಉಳಿದಿಬ್ಬರು ಆ ತೀರ್ಪಿಗೆ ಬಗ್ಗೆ ಅಸಮ್ಮತಿ ವ್ಯಕ್ತಪಡಿಸಿದಾಗ ಅದನ್ನು ತಿರಸ್ಕರಿಸುವುದಿಲ್ಲ. ಬದಲಾಗಿ ವ್ಯತಿರಿಕ್ತ/ಅಸಮ್ಮತಿ ಅಭಿಪ್ರಾಯ (ಡಿಸ್ಸೆಂಟ್) ಎಂದೇ ಪರಿಗಣಿಸಿ ದಾಖಲಿಸಲಾಗುತ್ತದೆ. ಅಂದರೆ ಅಲ್ಲಿಯೂ ಬಹುಮತದ ಅಭಿಪ್ರಾಯವನ್ನೇ ಪರಿಗಣಿಸಲಾಗುತ್ತದೆ.

ಈ ಹಿಂದೆ ಇದರ ಬಗ್ಗೆ ಓದಿದ ಒಂದು ವಿಡಂಬನಾ ಪ್ರಕರಣದಲ್ಲಿ ಒಂದು ವಿದ್ಯಾರ್ಥಿ ನಿಲಯದಲ್ಲಿ ಪ್ರತಿದಿನ ವಿದ್ಯಾರ್ಥಿಗಳಿಗೆ ತಿಂಡಿ ನೀಡುವ ವ್ಯವಸ್ಥೆ ಇರುತ್ತದೆ. ಅಲ್ಲಿದ್ದದ್ದು 40 ವಿದ್ಯಾರ್ಥಿಗಳು. ಅಲ್ಲಿ ವಾರದಲ್ಲಿ ನಾಲ್ಕು ದಿನ ತಿಂಡಿಗೆ ಉಪ್ಪಿಟ್ಟು ನೀಡಲಾಗುತ್ತಿತ್ತು. ಇದು ಹಲವು ವಿದ್ಯಾರ್ಥಿಗಳಿಗೆ ಬೇಸರ ತರಿಸಿತ್ತು. ಅವರು, ವಾರದ ನಾಲ್ಕು ದಿನ ಉಪ್ಪಿಟ್ಟು ಮಾಡದೆ ಬೇರೆ ತಿಂಡಿ ಮಾಡಬೇಕೆಂದು ಒತ್ತಾಯಿಸಿದ್ದರು. ಅಲ್ಲಿನ 40 ವಿದ್ಯಾರ್ಥಿಗಳ ಪೈಕಿ 15 ಜನರಿಗೆ ಉಪ್ಪಿಟ್ಟು ಇಷ್ಟ, ಉಳಿದವರು ಬೇರೆಬೇರೆ ತಿಂಡಿ ಬೇಕೆನ್ನುತ್ತಾರೆ. ಈ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಿಸುವುದೆಂದು ತೀರ್ಮಾನವಾಯಿತು. ಹೆಚ್ಚು ಜನರು ಇಷ್ಟಪಡುವ ತಿಂಡಿಯನ್ನು ಮಾಡುವ ತೀರ್ಮಾನವಾಗುತ್ತದೆ. ಅದರಂತೆ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹ ಮಾಡಲಾಗುತ್ತದೆ. ಎಲ್ಲರೂ ಅಭಿಪ್ರಾಯ ತಿಳಿಸಿದ ನಂತರ ಅದನ್ನು ಲೆಕ್ಕ ಹಾಕಿದಾಗ 15 ವಿದ್ಯಾರ್ಥಿಗಳು ಉಪ್ಪಿಟ್ಟು ಬೇಕೆಂದು, ಉಳಿದಂತೆ 8 ಜನರು ರೊಟ್ಟಿ, 6 ಜನರು ಚಪಾತಿ, 7 ಜನರು ದೋಸೆ, 4 ಜನರು ಬಾತ್ ಬೇಕೆಂದು ಅಭಿಪ್ರಾಯ ಮಂಡಿಸುತ್ತಾರೆ. ಆದರೆ 15 ಜನರು ಉಪ್ಪಿಟ್ಟು ಬೇಕೆಂದು ಕೇಳಿದ್ದು ಮಾನ್ಯವಾಗುತ್ತದೆ. ಉಳಿದ 25 ಜನರು ತಮಗೆ ಬೇಕಾದ್ದನ್ನು ಕೇಳಿದರೂ ಬಹುಮತ ಇಲ್ಲದ್ದರಿಂದ ಹಿಂದಿನಂತೆಯೇ ವಾರದಲ್ಲಿ ಉಳಿದ ನಾಲ್ಕು ದಿನ ಉಪ್ಪಿಟ್ಟು ಮುಂದುವರೆಯುತ್ತದೆ. ಇದು ಒಂದು ರೀತಿ ಪ್ರಜಾಪ್ರಭುತ್ವದ ವಿವರಣೆ. ಇದು ಒಂದು ರೀತಿ ವಿಡಂಬನೆಯೂ ಹೌದು. ಆದರೆ ಪ್ರಜಾಪ್ರಭುತ್ವ ಬಹುಮತಕ್ಕೆ ಬೆಂಬಲ ನೀಡುತ್ತದೆ.

ಈ ವಿಷಯ ನೆನಪಾಗಿದ್ದು ಇತ್ತೀಚೆಗೆ ಪ್ರಯಾಗರಾಜ್‌ನಲ್ಲಿ ಮುಕ್ತಾಯಗೊಂಡ (ಈಗಲೂ ನಡೆಯುತ್ತಿರುವ) ಮಹಾಕುಂಭ ಮೇಳ ವಿಷಯದ ಬಗ್ಗೆ ಬಂದಂತಹ ವಿಭಿನ್ನ ನೆಲೆಗಟ್ಟಿನ ವಿಚಾರಗಳ ಬಗ್ಗೆ. ಅಲ್ಲಿ ಸೇರಿದ್ದು 66 ಕೋಟಿ ಜನರು ಎಂದು ಹೇಳಲಾಗುತ್ತದೆ. ಬಹುಮತದಂತೆ ಇಷ್ಟು ಜನರು ಧನಾತ್ಮಕವಾಗಿ ಯೋಚಿಸಿ ಮಹಾಕುಂಭಮೇಳದ ಪವಿತ್ರ ಸ್ನಾನದಲ್ಲಿ ಪಾಲ್ಗೊಂಡರು. ಅಂದರೆ ದೇಶದ ಸುಮಾರು ಅರ್ಧದಷ್ಟು ಜನರು ಇದರಲ್ಲಿ ಪಾಲ್ಗೊಂಡರು ಎಂದು ಹೇಳಬಹುದು. ಅದರಲ್ಲೂ ನಾಗಾ ಸನ್ಯಾಸಿಗಳ ಬಹುದೊಡ್ಡ ಸಮೂಹ ಸೇರಿದ್ದು ಬಹು ವಿಶೇಷ. ಅಲ್ಲದೆ ದೇಶದ ಎಲ್ಲಾ ಭಾಗಗಳ ಸಾಧು ಸಂತರು, ಆಚಾರ್ಯರು ಸೇರಿದಂತೆ ಬಹುದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದು. ಇದಕ್ಕಾಗಿ ಉತ್ತರ ಪ್ರದೇಶದ ಸರ್ಕಾರ ಹಾಗೂ ಕೇಂದ್ರ ಸರ್ಕಾರ ವೆಚ್ಚ ಮಾಡಿದ್ದು ಸುಮಾರು 12,500 ಕೋಟಿ ರೂ.ಗಳು. ಇದನ್ನೇ ಪರಿಗಣಿಸಿ ಇಷ್ಟೊಂದು ಹಣ ವೆಚ್ಚ ಮಾಡುವ ಅಗತ್ಯ ಇರಲಿಲ್ಲ ಎಂದು ಕೆಲವರು ವಿರೋಧ ವ್ಯಕ್ತಪಡಿಸಿದರು. ಆದರೆ ಅವರು ಮುಂದಿನ ಭಾಗವನ್ನು ಗಮನಿಸಲಿಲ್ಲ. ಈ ಮಹಾಕುಂಭ ಮೇಳದಿಂದಾಗಿ ಸುಮಾರು ಎರಡು ಲಕ್ಷ ಕೋಟಿ ರೂಪಾಯಿಗಳಷ್ಟು ವ್ಯವಹಾರ ಆ ಭಾಗದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸುಮಾರು ಎಂಟು ಲಕ್ಷ ಉದ್ಯೋಗ ಸೃಷ್ಟಿಯಾಗಿತ್ತು. ಸರ್ಕಾರದ ಆದಾಯವೇ ಸುಮಾರು 3 ಲಕ್ಷ ಕೋಟಿಗೂ ಹೆಚ್ಚು ಎಂದು ಹೇಳಲಾಗುತ್ತದೆ. ಅಂತಹುದೇ ಒಂದಷ್ಟು ಲಾಭ ಅಕ್ಕಪಕ್ಕದ ರಾಜ್ಯಗಳಿಗೂ ಆಯಿತು. ದೇಶದ ವಿವಿಧ ಭಾಗಗಳಿಂದ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಅಲ್ಲಿಗೆ ಭೇಟಿ ನೀಡಿದ್ದರು. ಇನ್ನೂ ಹೋಗಿಬರುವವರ ಸಂಖ್ಯೆ ಹೆಚ್ಚಾಗೇ ಕಂಡುಬರುತ್ತಿದೆ.

ಈ ಮಹಾಕುಂಭ ಮೇಳಕ್ಕೆ ಮಾಡಿದ ಪ್ರಚಾರವೇನು? ಅದಕ್ಕಾಗಿ ಸರ್ಕಾರಗಳು ಜಾಹೀರಾತಿಗಾಗಿ ಖರ್ಚು ಮಾಡಿತು? ಎಂಬುದನ್ನು ಗಮನಿಸಿದಾಗ ಈ ರೀತಿಯ ವೆಚ್ಚವೇ ಆಗಿಲ್ಲ. ನಮ್ಮ ಪಂಚಾಂಗದಲ್ಲಿ ಬರೆದ ಒಂದು ಸಣ್ಣ ಸಾಲು ಮಾತ್ರವೇ ಪ್ರಚಾರ ಸಾಧನವಾಗಿತ್ತು. ಬೇರಾವ ಜಾಹೀರಾತನ್ನೂ ಸರ್ಕಾರಗಳು ನೀಡಲಿಲ್ಲ. ಹಾಗೆ ನೋಡಿದರೆ ಉತ್ತರ ಪ್ರದೇಶ ಸರ್ಕಾರ ಈ ಮಹಾಕುಂಭಮೇಳಕ್ಕೆ ಸುಮಾರು 45 ಕೋಟಿ ಜನರು ಬರಬಹುದೆಂದು ಅಂದಾಜಿಸಿತ್ತು. ಆದರೆ ಅದರ ನಿರೀಕ್ಷೆಗೂ ಮೀರಿ ಜನಪ್ರವಾಹ ಹರಿದುಬಂದಿತು ಹಾಗೂ ಮಹಾಕುಂಭ ಮೇಳ ಯಶಸ್ವಿಯಾಯಿತು. ಪ್ರಪಂಚದ ಇತರೆ ಹಲವಾರು ದೇಶಗಳ (ಭಾರತ ಹಾಗೂ ಚೀನಾ ಹೊರತುಪಡಿಸಿ) ಜನಸಂಖ್ಯೆಗಿಂತ ಹೆಚ್ಚಿನ ಜನರು ಭಾಗವಹಿಸಿದ್ದು ಒಂದು ರೀತಿಯ ವಿಶ್ವ ದಾಖಲೆ ಎಂದೇ ಹೇಳಬಹುದು. ಮತ್ತೊಂದು ವಿಶೇಷ ಎಂದರೆ ಕೇವಲ ಭಾರತದ ಜನರು ಮಾತ್ರ ಭಾಗವಹಿಸಿದ್ದಲ್ಲ. ವಿಶ್ವದ ಹಲವಾರು ದೇಶಗಳ ಜನರೂ ಬಂದು ಪ್ರಯಾಗ ರಾಜ್‌ನಲ್ಲಿ ಸ್ನಾನ ಮಾಡಿದರು ಎಂಬುದು ವಿಶೇಷ. ನಮ್ಮ ದೇಶದವರಿಗೆ ಇಂತಹ ನಂಬಿಕೆ ಸಾಮಾನ್ಯ. ಆದರೆ ವಿದೇಶದವರೂ ಭಾಗವಹಿಸಿದ್ದರು ಎಂದರೆ ಅದರ ಪ್ರಮುಖ್ಯತೆ ಎಷ್ಟು ಎಂದು ತಿಳಿಯುತ್ತದೆ.



> 144 ವರ್ಷಗಳ ನಂತರ ಮಹಾಕುಂಭ ನಡೆಯುತ್ತದೆ ಎಂದಾಗ ಅದರಲ್ಲಿ ಪಾವಿತ್ರ್ಯತೆ ಇರುವುದಾಗಿ ನಂಬುವ ಜನರು ಭಾಗಿಯಾಗಿದ್ದಾರೆ. ಅದು ಅವರ ನಂಬಿಕೆ. ಅದನ್ನು ವಿರೋಧಿಸುವುದು ಸೂಕ್ತ ಎನಿಸುವುದಿಲ್ಲ. ನಮ್ಮಲ್ಲಿ ಮೊದಲಿನಿಂದಲೂ ದೇಶ ಸುತ್ತು ಕೋಶ ಓದು ಎಂದೇ ಹೇಳಲಾಗುತ್ತದೆ. ಯಾತ್ರೆ ನೆಪದಲ್ಲಾದರೂ ನಾವು ದೇಶ ಸುತ್ತಬೇಕು. ಅಲ್ಲಿನ ಜೀವನ ಪದ್ಧತಿಗಳನ್ನು ಅರಿಯಬೇಕು. ಹೀಗಾದಾಗ ನಮ್ಮ ಜ್ಞಾನ ವೃದ್ಧಿಯಾಗುತ್ತದೆ ಎಂಬುದು ಇದರ ಉದ್ದೇಶ.

ಅಲ್ಲಿಗೆ ಹೋದರೆ ಟ್ರಾಫಿಕ್ ಜಾಮ್ ಆಗುತ್ತದೆ. ದಿನಗಟ್ಟಲೇ ಕಾಯಬೇಕಾಗುತ್ತದೆ ಎಂದೆಲ್ಲಾ ಋಣಾತ್ಮಕ ಪ್ರಚಾರವೂ ಆಯಿತು. ಆಗಿರಬಹುದು, ಅಷ್ಟೊಂದು ಜನರು, ಅಷ್ಟೊಂದು ವಾಹನ ಬಂದಾಗ ಟ್ರಾಫಿಕ್ ಜಾಮ್ ಆಗುವುದು ಸಹಜ. ಅದು ಗೊತ್ತಿದ್ದರೂ ಜನರು ಹೋದರು ಎಂದರೆ ಅವರಲ್ಲಿನ ಧಾರ್ಮಿಕ ಭಾವನೆ ಎಷ್ಟೊಂದು ಗಟ್ಟಿಯಾಗಿತ್ತು ಎಂಬುದು ಅರಿವಾಗುತ್ತದೆ. ಬಹಳಷ್ಟು ಜನರು ಮುಂಚೆಯೇ ಆಲೋಚನೆ ಮಾಡಿ ಅಲ್ಲಿಗೆ ಹೋದರು ಎಂದೇನಿಲ್ಲ. ಅಲ್ಲಿನ ವಿದ್ಯಮಾನಗಳನ್ನು ಪತ್ರಿಕೆ ಹಾಗೂ ದೂರದರ್ಶನ ವಾಹಿನಿಗಳಲ್ಲಿ ವೀಕ್ಷಿಸಿದವರು ತಕ್ಷಣವೇ ನಿರ್ಧಾರ ಮಾಡಿ ಹೋದರು. ನನ್ನ ಸ್ನೇಹಿತರೊಬ್ಬರು ಸರಗೂರಿನಲ್ಲಿ ಇದ್ದಾರೆ. ಒಮ್ಮೆ ಅವರೊಂದಿಗೆ ಮಾತನಾಡಲು ದೂರವಾಣಿ ಕರೆ ಮಾಡಿದಾಗ ನಾವು ಪ್ರಯಾಗರಾಜ್‌ಗೆ ಬಂದಿದ್ದು ಇದೀಗ ವಾಪಸ್ಸು ಬರುತ್ತಿದ್ದೇವೆ. ನಾಳೆ ರಾತ್ರಿಯೊಳಗೆ ಊರು ಸೇರುತ್ತೇವೆ ಎಂದರು. ಯಾವಾಗ ಹೊರಟಿರಿ ಎಂದಾಗ ನಾವು ನಾಲ್ಕಾರು ಜನರು ಈ ಬಗ್ಗೆ ಮಾತನಾಡುತ್ತಿದ್ದೆವು. ಒಬ್ಬರು ನಾವೂ ಏಕೆ ಹೋಗಬಾರದು ಎಂದರು, ಎಲ್ಲರೂ ಒಪ್ಪಿದರು. ಒಂದು ಟೆಂಪೋಟ್ರಾವೆಲ್ ಮಾಡಿಕೊಂಡು ಮರುದಿನವೇ ಹೊರಟೆವು. ಎಲ್ಲಾ ಚೆನ್ನಾಗಿತ್ತು, ಈಗ ವಾಪಸ್ಸು ಬರುತ್ತಿದ್ದೇವೆ ಎಂದರು. ಇಂತಹ ನೂರಾರು ಉದಾಹರಣೆಗಳು ನಮಗೆ ಕಂಡುಬರುತ್ತವೆ.

ನಮ್ಮಲ್ಲಿ ಮೊದಲಿನಿಂದಲೂ ನದಿ ಸ್ನಾನ ಹಾಗೂ ಸಮುದ್ರ ಸ್ನಾನದ ಬಗ್ಗೆ ನಂಬಿಕೆ ಇದೆ. ಇದು ಮೌಢ್ಯವಲ್ಲ. ಒಂದು ರೀತಿಯಲ್ಲಿ ವೈಜ್ಞಾನಿಕ ವಿಚಾರವೂ ಹೌದು. ಆಗಾಗ್ಗೆ ಹರಿಯುವ ನದಿ ನೀರಿನಲ್ಲಿ ಸ್ನಾನ ಮಾಡಬೇಕು. ಹಾಗೇ ಸಾಧ್ಯವಾದಾಗಲೆಲ್ಲಾ ಸಮುದ್ರ ಸ್ನಾನ ಮಾಡಬೇಕು. ಇದರಿಂದ ದೇಹದ ಆರೋಗ್ಯ ಉತ್ತಮವಾಗಿರುತ್ತದೆ ಎಂದು ಹೇಳಲಾಗುತ್ತದೆ. 'ಬಲವಂತದ ಮಾಘಸ್ನಾನ' ಎಂಬುದು ಮತ್ತೊಂದು ಮಾತು. ಮಾಘ ಮಾಸ ಬರುವುದು ಚಳಿಗಾಲದಲ್ಲಿ. ಅಂದಾಜು ಜನವರಿ ತಿಂಗಳು ಎಂದು ಹೇಳಬಹುದು. ಅಂತಹ ಚಳಿಗಾಲದಲ್ಲೂ ನದಿ ಸ್ನಾನ ಮಾಡುವುದು ದೇಹದ ಆರೋಗ್ಯದ ದೃಷ್ಟಿಯಿಂದ ಉತ್ತಮ ಎಂದು ಹೇಳಲಾಗುತ್ತದೆ. ಚಳಿ ಇರುವುದರಿಂದ ಮನಸ್ಸು ನದಿ ಸ್ನಾನಕ್ಕೆ ಒಪ್ಪುವುದಿಲ್ಲ. ಆದರೆ ಬಲವಂತವಾಗಿಯಾದರೂ ಆ ಸಮಯದಲ್ಲಿ ನದಿ ಸ್ನಾನ ಮಾಡಬೇಕು ಎಂದು ಹೇಳಲಾಗುತ್ತದೆ. ನಮ್ಮ ಪೂರ್ವಜರಿಗೆ ನಮ್ಮ ಶರೀರ ರಚನಾ ಶಾಸ್ತ್ರ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಇಂತಹ ಪದ್ಧತಿ ಜಾರಿಗೆ ತಂದಿದ್ದರು. ಮನೆಗಳಲ್ಲಿ ಇರುತ್ತಿದ್ದ ಭಾವಿಗಳಲ್ಲಿ ನೀರು ಸೇದಿಕೊಂಡು ಸ್ನಾನ ಮಾಡುವುದು ಈಗ್ಗೆ ನಾಲ್ಕಾರು ದಶಕಗಳ ಹಿಂದಿನವರೆಗೂ ನಡೆದುಕೊಂಡುಬಂದಿತ್ತು. ಇಂತಹುದನ್ನು ಪಾಲಿಸುತ್ತಿದ್ದುದರಿಂದ ಜನರಿಗೆ ಈಗ ಬರುತ್ತಿರುವ, ಆದರೆ ಆಗ ಈ ಹೆಸರೇ ಗೊತ್ತಿಲ್ಲದ, ಖಾಯಿಲೆಗಳು ಬರುತ್ತಿರಲಿಲ್ಲ. ಇಂದಿಗೂ ಅದೇ ಪದ್ಧತಿ ಇಟ್ಟುಕೊಂಡಿರುವ ಜನರು ಸಿಗುತ್ತಾರೆ. ನಮ್ಮ ಮನೆಗೂ ಕಾವೇರಿ ನೀರೇ ನಲ್ಲಿಯಲ್ಲಿ ಬರುತ್ತದೆ. ನಾವು ಅದರಲ್ಲಿಯೇ ನಿತ್ಯ ಸ್ನಾನ ಮಾಡುತ್ತೇವೆ. ಹಾಗಿರುವಾಗ ನದಿಗೇ ಹೋಗಿ ಏಕೆ ಸ್ನಾನ ಮಾಡಬೇಕು ಎಂದು ಕೇಳುವ ಜನರೂ ನಮ್ಮ ನಡುವೆ ಇದ್ದಾರೆ. ಆದರೆ ಇತ್ತೀಚಿನ ಸಂಶೋಧನೆ ಹೇಳುವುದೇನೆಂದರೆ; ನದಿಯ ನೀರನ್ನು ದೂರದೂರಕ್ಕೆ ವಿದ್ಯುತ್ ಸಂಪರ್ಕದಿಂದ ಕೊಳವೆಗಳ ಮೂಲಕ ಹರಿಸಿದಾಗ ಅದು ತನ್ನ ಸತ್ವ ಕಳೆದುಕೊಳ್ಳುತ್ತದೆ ಎಂದು. ನದಿಯ ನೀರು ಹರಿಯುವ ನೀರು. ಅದರಲ್ಲಿ ಸತ್ವವಿರುತ್ತದೆ.

ಇಂತಹ ನಂಬಿಕೆ ನಮ್ಮಲ್ಲಿ ಬಹುಕಾಲದಿಂದ ಇರುವಂತಹುದು. ಅದರಲ್ಲೂ ಹಬ್ಬಗಳ ಸಮಯದಲ್ಲಿ, ಗ್ರಹಣಗಳಾದಾಗ, ಮುಖ್ಯ ಪರ್ವದ ದಿನಗಳಲ್ಲಿ ನದಿ ಸ್ನಾನ ಮಾಡುವುದು ಮೊದಲಿನಿಂದಲೂ ಜಾರಿಯಲ್ಲಿರುವಂತಹುದು. ಅಂತಹುದರಲ್ಲಿ 144 ವರ್ಷಗಳ ನಂತರ ಮಹಾಕುಂಭ ಮೇಳ ನಡೆಯುತ್ತದೆ ಎಂದಾಗ ಅದರಲ್ಲಿ ಪಾವಿತ್ರ್ಯತೆ ಇರುವುದಾಗಿ ನಂಬುವ ಜನರು ಭಾಗಿಯಾಗಿದ್ದಾರೆ. ಅದು ಅವರ ನಂಬಿಕೆ. ಅದನ್ನು ವಿರೋಧಿಸುವುದು ಸೂಕ್ತ ಎನ್ನಿಸುವುದಿಲ್ಲ. ನಮ್ಮಲ್ಲಿ ಮೊದಲಿನಿಂದಲೂ 'ದೇಶ ಸುತ್ತು ಕೋಶ ಓದು' ಎಂಬ ರೂಢಿ ಮಾತಿದೆ. ಯಾತ್ರೆ ನೆಪದಲ್ಲಾದರೂ ನಾವು ದೇಶ ಸುತ್ತಬೇಕು, ಅಲ್ಲಿನ ಜೀವನ ಪದ್ಧತಿಗಳನ್ನು ಅರಿಯಬೇಕು. ಹೀಗಾದಾಗ ನಮ್ಮ ಜ್ಞಾನ ವೃದ್ಧಿಯಾಗುತ್ತದೆ ಎಂಬುದು ಇದರ ಉದ್ದೇಶ.

ಪ್ರಯಾಗರಾಜ್ ಮೂರು ನದಿಗಳ ಸಂಗಮ ಸ್ಥಾನ. ಅದರಲ್ಲೂ ಈ ದೇಶದ ಪ್ರಮುಖ ನದಿಗಳವು. ಗಂಗಾ, ಯಮುನಾ ಹಾಗೂ ಸರಸ್ವತಿ ನದಿಗಳ ಸಂಗಮ ಸ್ಥಾನ ಅದು. ಸರಸ್ವತಿ ನದಿ ಗುಪ್ತವಾಗಿ ಹರಿಯುವಂತಹುದು. ಅದನ್ನು ಬದರಿಯ ಹತ್ತಿರ ನೋಡಬಹುದಾಗಿದೆ. ಅಲ್ಲಿ ಭೋರ್ಗರೆದೂ ಹರಿಯುವ ನದಿ ಸ್ವಲ್ಪವೇ ದೂರದಲ್ಲಿ ನೆಲದೊಳಗೆ ಹುದುಗಿಬಿಡುತ್ತದೆ. ಒಂದು ರೀತಿಯ ವಿಸ್ಮಯ. ಎಲ್ಲಾ ನದಿಗಳೂ ಸಾಗರ ಸೇರಲೇಬೇಕು. ಹಾಗೇ ಸರಸ್ವತಿಯೂ ನೆಲದೊಳಗೇ ಹರಿದು, ಪ್ರಯಾಗ್‌ರಾಜ್‌ನಲ್ಲಿ ಉಳಿದೆರಡು ನದಿಗಳೊಡನೆ ಬೆರೆತು ಸಾಗರದತ್ತ ಸಾಗುತ್ತದೆ. ಅದೂ ವೈಜ್ಞಾನಿಕವಾಗಿ ಕಂಡುಬಂದಿರುವಂತಹುದು. ಇದನ್ನು ಈ ಸಲದ ಮಹಾಕುಂಭಮೇಳಕ್ಕೆ ಹೋಗಿದ್ದವರಿಗೆ ಅಲ್ಲಿನ ದೋಣಿ ನಡೆಸುವವರೂ ಮನದಟ್ಟು ಮಾಡಿಕೊಟ್ಟಿದ್ದಾರೆ.

ಸರಸ್ವತಿ ನದಿಯ ಬಗ್ಗೆ ಇತ್ತೀಚೆಗೆ ಒಂದಷ್ಟು ಸಂಶೋಧನೆಗಳು ನಡೆದಿವೆ. ಈ ನದಿಯ ತೀರದಲ್ಲೇ ಜಗತ್ತಿನ ಮೊದಲ ಸಾಹಿತ್ಯವಾದ ವೇದಗಳ ರಚನೆಯಾಯಿತು ಎಂದು ಹೇಳಲಾಗುತ್ತದೆ. ಇದು ಗುಪ್ತಗಾಮಿನಿಯಾದ ಬಗ್ಗೆ ವೈಜ್ಞಾನಿಕ ಕಾರಣ ಕಂಡುಹಿಡಿಯುವ ಬಗ್ಗೆಯೂ ಸಂಶೋಧನೆ ನಡೆದಿದೆ. ಇದೊಂದು ಪ್ರಾಚೀನವಾದ ನದಿ. ಅದರ ಉಗಮದಿಂದ ಅದು ಸಮುದ್ರದಲ್ಲಿ ಸೇರುವವರೆಗಿನ ಸಂಭಾವ್ಯ ಸ್ಥಾನಗಳಲ್ಲಿ ಪ್ರಯೋಗಗಳಾಗಿವೆ. ಅಲ್ಲೆಲ್ಲಾ ಕೊಳವೆ ಭಾವಿಗಳನ್ನು ಕೊರೆಸಿ ಬಂದ ನೀರು ಸರಸ್ವತಿ ನದಿಯದ್ದೇ ಎಂದು ಗುರುತಿಸಲಾಗಿದೆ. ಸರಸ್ವತಿ ನದಿ ಹಲವು ಕವಲುಗಳಾಗಿ ಹರಿಯುತ್ತದೆ. ಅದರಲ್ಲಿ ಒಂದು ಪ್ರಯಾಗರಾಜ್‌ನಲ್ಲೂ ಕಂಡುಬರುತ್ತದೆ ಎಂದು ಹೇಳಲಾಗುತ್ತದೆ. ಅದೇ ಹಿನ್ನೆಲೆಯಲ್ಲಿ ಅದನ್ನು ತ್ರಿವೇಣಿ ಸಂಗಮ ಎಂದು ಹೇಳಲಾಗುತ್ತದೆ.

ಪ್ರಯಾಗ್‌ರಾಜ್ ಜನಸಂಖ್ಯೆ ಸುಮಾರು 12 ಲಕ್ಷ. ಅಂದರೆ ಅಲ್ಪ-ಸ್ವಲ್ಪ ನಮ್ಮ ಮೈಸೂರು ನಗರದಷ್ಟು, ನಮ್ಮಲ್ಲಿ ದಸರಾ ಸಮಯದಲ್ಲಿ ನಾಲ್ಕಾರು ಲಕ್ಷ ಜನರು ಬಂದರೆ ಏನೆಲ್ಲಾ ಸಮಸ್ಯೆಗಳು ಉದ್ಭವಿಸುತ್ತವೆ. ಅಂತಹ ನಗರವೊಂದು 66 ಕೋಟಿ ಜನರನ್ನು ಕೇವಲ ಒಂದೂವರೆ ತಿಂಗಳಲ್ಲಿ ಸುಧಾರಿಸಿದೆ ಎಂದರೆ ಆಶ್ಚರ್ಯವಾಗುತ್ತದೆ. ಇಂತಹುದನ್ನ ಒಂದು ರೀತಿ ಪವಾಡ ಎನ್ನಬೇಕಾಗುತ್ತದೆ. ಅದನ್ನು ಮನ್ನಿಸಬೇಕೆ ವಿನಃ ವಿನಾಕಾರಣ ಟೀಕಿಸಬಾರದು. ಬಹುಜನರ ಅಭಿಪ್ರಾಯಕ್ಕೆ ಬೆಲೆ ನೀಡಬೇಕು. ಅದೇ ಪ್ರಜಾಪ್ರಭುತ್ವ ಅಲ್ಲವೇ...!

ಶೇ.25ರಷ್ಟು ರಿಯಾಯಿತಿ ಕೊಡುಗೆ

ಮೈಸೂರು ಸಿಲ್ಕ್ ಸೀರೆ ಖರೀದಿಗೆ ನೂಕು-ನುಗ್ಗಲು





ಮೈಸೂರಿನ ಮಾನಂದವಾಡಿ ರಸ್ತೆಯ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಆವರಣದಲ್ಲಿ ಸಾವಿರಾರು ಮಹಿಳೆಯರು ಜಮಾಯಿಸಿರುವುದು.

ಮೈಸೂರು,ಮಾ.13(ಆರ್‌ಕೆ)-ಶೇಕಡ 25ರಷ್ಟು ರಿಯಾಯಿತಿ ದರದಲ್ಲಿ ಮೈಸೂರು ಸಿಲ್ಕ್ ಸೀರೆ ಖರೀದಿಸಲು ಮೈಸೂರಿನ ಮಾನಂದವಾಡಿ ರಸ್ತೆಯ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ (KSIC) ಆವರಣದಲ್ಲಿ ಸಾವಿರಾರು ಮಂದಿ ಮಹಿಳೆಯರು ಜಮಾಯಿಸಿದ್ದರು.

ರಂಜಾನ್, ಯುಗಾದಿ ಹಬ್ಬಗಳು ಸಮೀಪಿಸುತ್ತಿರುವ ಸಂದರ್ಭ ಕೆಎಸ್‌ಐಸಿಯು ಇಂದಿನಿಂದ 3 ದಿನಗಳ ಕಾಲ ಶೇ.25ರ ರಿಯಾಯಿತಿ ದರದಲ್ಲಿ ಸೆಕೆಂಡ್ಸ್ ರೇಷ್ಮೆ ಸೀರೆಗಳನ್ನು ಮಾರಾಟ ಮಾಡುತ್ತಿದೆ. ಕಡಿಮೆ ದರದಲ್ಲಿ ತಮ್ಮ ಅಚ್ಚುಮೆಚ್ಚಿನ ಮೈಸೂರ್ ಸಿಲ್ಕ್ ಸೀರೆಗಳನ್ನು ಖರೀದಿಸಲು ಸಾವಿರಾರು ಮಂದಿ ಮುಂದಾಗಿರುವುದರಿಂದ ಕಾರ್ಖಾನೆ ಆವರಣದ ಶತಮಾನೋತ್ಸವ ಭವನದಲ್ಲಿ ನೂಕು-ನುಗ್ಗಲು ಉಂಟಾಗಿತ್ತು.

ವಿಶೇಷ ರಿಯಾಯಿತಿ ಕೊಡುಗೆ ಪ್ರಕಟಿಸಿರುವುದರಿಂದ ಮೈಸೂರು ನಗರ ಮತ್ತು ಸುತ್ತಮುತ್ತಲ ಗ್ರಾಮಗಳ ಮಹಿಳೆಯರು ಇಂದು ಮುಂಜಾನೆ 4 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತಿದ್ದರು. ಮಾರ್ಚ್ 15ರವರೆಗೆ ಪ್ರತೀ ದಿನ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಸೀರೆ ಮಾರಾಟ ಮಾಡಲಾಗುವುದು. ಹಬ್ಬ-ಹರಿದಿನಗಳು, ಮದುವೆ, ಜನ್ಮದಿನ, ವಿವಾಹ ವಾರ್ಷಿಕೋತ್ಸವದಂತಹ ಶುಭ ಸಮಾರಂಭಗಳಲ್ಲಿ ಧರಿಸಲು ಮೈಸೂರು ಸಿಲ್ಕ್ ಸೀರೆ ಖರೀದಿಗೆ ಮುಗಿಬಿದ್ದಿರುವ ಮಹಿಳೆಯರು, ರೇಷ್ಮೆ ಝರಿ ಮತ್ತು ಪ್ರಿಂಟೆಡ್ ನಾನ್ ಝರಿ ಸೀರೆಗಳನ್ನು ಶೇ.25ರ ರಿಯಾಯಿತಿ ದರದಲ್ಲಿ ನೇರವಾಗಿ ಕಾರ್ಖಾನೆಯಿಂದ ಕೊಂಡುಕೊಳ್ಳುತ್ತಿದ್ದಾರೆ.

ಪತಿ ಮತ್ತು ಕುಟುಂಬದ ಸದಸ್ಯರೊಂದಿಗೆ ತಂಡೋಪತಂಡವಾಗಿ ಆಗಮಿಸಿ ತಮ್ಮ ಮೆಚ್ಚಿನ ಸಿಲ್ಕ್ ಸೀರೆ ಖರೀದಿಸುತ್ತಿರುವ ಮಹಿಳೆಯರಿಗೆ ಕೆಎಸ್‌ಐಸಿ ಆವರಣದ ಶತಮಾನೋತ್ಸವ ಭವನದಲ್ಲಿ ಶಾಮಿಯಾನ, ಚೇರ್‌ಗಳನ್ನು ಹಾಕಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಲಾಗಿದೆ. ಬ್ಯಾರಿಕೇಡ್ ಅಳವಡಿಸಿರುವುದರಿಂದ ಸರತಿ ಸಾಲಿನಲ್ಲಿ ಬಂದು ತಮಗಿಷ್ಟವಾದ ಸೀರೆ ಖರೀದಿಸುತ್ತಿರುವುದರಿಂದ ಸ್ಥಳದಲ್ಲಿರುವ ಮಹಿಳಾ ಪೊಲೀಸರು ಒಬ್ಬೊಬ್ಬರನ್ನಾಗಿ ಕಳುಹಿಸುತ್ತಿದ್ದಾರೆ. ದಿನಕ್ಕೆ 1 ಸಾವಿರದಂತೆ 3 ದಿನಗಳವರೆಗೆ ಕಾರ್ಖಾನೆಯಲ್ಲಿ ಲಭ್ಯವಿರುವ ಸುಮಾರು 3 ಸಾವಿರ ಮೈಸೂರ್ ಸಿಲ್ಕ್ ಸೆಕೆಂಡ್ ಸೀರೆಗಳನ್ನು ಮಾರಾಟ ಮಾಡಲಾಗುತ್ತಿದೆ.

18 ಸಾವಿರದಿಂದ 2 ಲಕ್ಷ ರೂ.ವರೆಗಿನ ಝರಿ ಸೀರೆ ಹಾಗೂ 9 ಸಾವಿರ ರೂ. ಬೆಲೆಯ ನಾನ್ ಝರಿ ಪ್ರಿಂಟೆಡ್ ಸೀರೆಗಳನ್ನು ಶೇ.25ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಒಬ್ಬರು 2 ಸೀರೆಗಳನ್ನು ಮಾತ್ರ ಖರೀದಿಸಬಹುದಾಗಿದ್ದು, ಹೆಚ್ಚುವರಿ ಬಿಲ್ಲಿಂಗ್ ಕೌಂಟರ್, ಹಣ ಪಾವತಿಗೆ ಸ್ಕ್ಯಾನಿಂಗ್ ಸೌಲಭ್ಯ ಒದಗಿಸಲಾಗಿದೆ.

ಸಮವಸ್ತ್ರಧರಿಸಿ ಕೆಎಸ್‌ಐಸಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾರಿ ರಿಯಾಯಿತಿ ದರದ ಮೈಸೂರು ಸಿಲ್ಕ್ ಸೀರೆ ಮಾರಾಟ ಮಾಡಿ ಸೆಕೆಂಡ್ಸ್ ವಿಲೇವಾರಿ ಪ್ರಕ್ರಿಯೆ ನಡೆಯುತ್ತಿದ್ದು, ಸ್ಥಳದಲ್ಲಿ ಸಿಸಿ ಕ್ಯಾಮರಾ, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ.

ಶ್ರೀ ಕಪ್ಪಡಿ ಜಾತ್ರೆಯ ಬಗ್ಗೆ ಗೊಂದಲ ಸೃಷ್ಟಿಸದಂತೆ ಆಗ್ರಹ

ಮೈಸೂರು, ಮಾ.13(ಎಂಟಿವೈ)- ವೈದಿಕ ಪರಂಪರೆ ವಿರೋಧಿಸಿದ ಮಂಟೇಸ್ವಾಮಿ ಪರಂಪರೆಯ ತಾಣ ಕಪ್ಪಡಿ ಕ್ಷೇತ್ರದ ಜಾತ್ರೆಗೆ ಸಂಬಂಧಿಸಿದಂತೆ ಪ್ರಾಣಿ ದಯಾ ಸಂಘದ ದಯಾನಂದಸ್ವಾಮಿ ಗೊಂದಲದ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಮಂಟೇಸ್ವಾಮಿ ಪರಂಪರೆ ರಕ್ಷಣಾ ಸಮಿತಿ ಅಧ್ಯಕ್ಷ ಉಗ್ರನರಸಿಂಹೇಗೌಡ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಪ್ಪಡಿ ಜಾತ್ರೆಯಲ್ಲಿ ಪ್ರಾಣಿ ಬಲಿ ನೀಡಲಾಗುತ್ತಿದೆ ಎಂದು ಆರೋಪಿಸಿ ಪ್ರತಿ ವರ್ಷವೂ ಪ್ರಾಣಿದಯಾ ಸಂಘದ ದಯಾನಂದಸ್ವಾಮಿ ಹೇಳಿಕೆ ನೀಡುವ ಮೂಲಕ ಗೊಂದಲ ಉಂಟು ಮಾಡುತ್ತಲೇ ಇದ್ದಾರೆ. ಮಂಟೇಸ್ವಾಮಿ ಪದ್ಧತಿಯನ್ನು ವಿರೋಧಿಸುವ ನೈತಿಕತೆ ಯಾರಿಗೂ ಇಲ್ಲ. ಸಾತ್ವಿಕ ಆಹಾರ ಸೇವಿಸುವಂತೆ ಒತ್ತಾಯಿಸುವುದು ಸರಿಯಲ್ಲ. ಕಪ್ಪಡಿಯಲ್ಲಿ ಯಾವುದೇ ಬಲಿಪೀಠವೂ ಇಲ್ಲ, ಅಲ್ಲಿ ಪ್ರಾಣಿ ಬಲಿ ನೀಡುವ ಪದ್ಧತಿಯೂ ಇಲ್ಲ. ಬದಲಾಗಿ ಮಂಟೇಸ್ವಾಮಿ ಪರಂಪರೆಯಂತೆ ಪಂಕ್ತಿ ಸೇವೆ ನಡೆಯುತ್ತಿದೆ. ಇಲ್ಲಿ ಪುರೋಹಿತಶಾಹಿಗಳಿಗೆ ಪ್ರವೇಶವಿಲ್ಲ. ವೈದಿಕ ಪದ್ಧತಿ ವಿರೋಧಿಯಾಗಿದೆ. ಹೀಗಾಗಿ ಕಪ್ಪಡಿ ಜಾತ್ರೆ ವಿರೋಧದ ಹಿಂದೆ ದೊಡ್ಡ ಷಡ್ಯಂತ್ರವಿದೆ ಎಂದು ಆರೋಪಿಸಿದರು.

ಮಾಂಸಾಹಾರ ಸೇವನೆ ಹಲವರ ಆಹಾರ ಪದ್ಧತಿ. ಹೀಗಿರುವಾಗ ಅದು ಪ್ರಾಣಿ ಬಲಿ ಎಂದು ಇವರೊಡನೆ ಜೈನ ಸಮಾಜದವರು ಆರೋಪಿಸುತ್ತಿದ್ದಾರೆ. ಆದರೆ ಪ್ರಾಣಿಗಳ ಬದಲು ಇವರು ಮನುಷ್ಯರ ರಕ್ತವನ್ನು ಬಡ್ಡಿ, ವ್ಯಾಪಾರಗಳ ಮೂಲಕ ಹೀರುತ್ತಾರೆ. ಇದು ಸರಿಯೇ ಎಂದು ಪ್ರಶ್ನಿಸಿದರು. ನಂತರ, ನ್ಯಾಯಾಲಯದ ಆದೇಶವನ್ನು ತಾಲೂಕು ಆಡಳಿತ, ಪೊಲೀಸ್ ಇಲಾಖೆ ಸ್ಪಷ್ಟವಾಗಿ ಓದಿ ಅರಿವು ಮೂಡಿಸಿಕೊಳ್ಳುವ ಮೂಲಕ ಕಪ್ಪಡಿ ಜಾತ್ರೆ ವೇಳೆ ಯಾವುದೇ ಅಡ್ಡಿಯುಂಟು ಮಾಡಬಾರದೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಂಟೇಸ್ವಾಮಿ ಪರಂಪರೆ ರಕ್ಷಣಾ ಸಮಿತಿ ಕಾರ್ಯದರ್ಶಿ ಶಂಭುಲಿಂಗಸ್ವಾಮಿ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಶುಕ್ರವಾರ 14 ಮಾರ್ಚ್ 2025

ವಿಧಾನಮಂಡಲ ಕಲಾಪ

ಕಾಲೇಜು ಅಭಿವೃದ್ಧಿ ಸಮಿತಿ ಪಟ್ಟಿಗೆ ಅನುಮೋದನೆ ಗೊಂದಲ

ಶಾಸಕ ಜಿಡಿಹೆಚ್ ಬೇಸರ



ಹುಣಸೂರು, ಮಾ.13– ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನೂತನವಾಗಿ ರಚಿಸಿರುವ 'ಕಾಲೇಜು ಅಭಿವೃದ್ಧಿ ಸಮಿತಿ(ಸಿಡಿಸಿ)'ಗಳಿಗೆ ಅನುಮೋದನೆ ನೀಡುವಲ್ಲಿ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ (ಜಿಡಿಹೆಚ್) ಬೇಸರ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ತಾಲೂಕಿನ ವಿವಿಧ ಪದವಿ ಕಾಲೇಜುಗಳಲ್ಲಿ 20 ತಿಂಗಳ ಹಿಂದೆಯೇ ನೂತನ ಸಿಡಿಸಿಗಳನ್ನು ರಚಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿದರೂ ಅನುಮೋದನೆ ನೀಡಿಲ್ಲ. ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರ ಕೊರತೆ ಹಾಗೂ ಪ್ರಾಂಶುಪಾಲರ ನೇಮಕದ ಬಗ್ಗೆ ಸದನದಲ್ಲಿ ಚರ್ಚೆ ನಡೆದಿದೆ. ಆದರೆ ಸರ್ಕಾರ 'ಡಿ' ಗ್ರೂಪ್ ನೌಕರರನ್ನು ನೀಡದಿರುವ ಕಾರಣ ಸಿಡಿಸಿ ವತಿಯಿಂದಲೇ ನೇಮಿಸಿಕೊಂಡು, ವೇತನ ನೀಡಲಾಗುತ್ತಿದೆ. ಸರ್ಕಾರ ಸಿಡಿಸಿಗೇ ಅನುಮೋದನೆ ನೀಡದಿರುವುದರಿಂದ ಡಿ ಗ್ರೂಪ್ ನೌಕರರ ಸಮಸ್ಯೆಯೂ ಉಂಟಾಗಿದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಅವರು ಕಾಲೇಜು ಕಟ್ಟಡ, ಪೀಠೋಪಕರಣ, ಗ್ರಂಥಾಲಯ ಮೇಲ್ವಿಚಾರಣೆ, ಸಂಪನ್ಮೂಲ ಕ್ರೋಢೀಕರಣದ ಉದ್ದೇಶಕ್ಕಾಗಿ ಸಿಡಿಸಿ ರಚಿಸಲಾಗುತ್ತದೆ. ಸಮಿತಿಗೆ ಇತರ ಸದಸ್ಯರನ್ನು ನೇಮಿಸುವ ಸಂದರ್ಭದಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರು, ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನಿರ್ಣಯಿಸಿದ ಬಳಿಕ ಆ ಪಟ್ಟಿಯನ್ನು ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದ ಮೇರೆಗೆ ಕಾಲೇಜು ಶಿಕ್ಷಣ ಇಲಾಖೆಗೆ ಸಲ್ಲಿಸಿ, ಅನುಮೋದನೆ ಪಡೆಯುವುದು ಮಾರ್ಗದರ್ಶಿ ಸೂತ್ರವಾಗಿದೆ ಎಂದು ತಿಳಿಸಿದ್ದಾರೆ. ಈ ನಡುವೆ 2023ರ ನ.11ರಂದು ಕಾಲೇಜಿಗೆ ಪತ್ರ ಬರೆದು, ಉಸ್ತುವಾರಿ ಸಚಿವರ ಅನುಮೋದನೆ ಸಿಗುವವರೆಗೆ ಯಾವುದೇ ಪ್ರಕ್ರಿಯೆಗಳನ್ನು ನಡೆಸದಂತೆ ಸೂಚಿಸಲಾಗಿದೆ. ಹೀಗಾದರೆ ನಾಲ್ಕೈದು ಸಾವಿರ ಸಂಬಳ ಪಡೆಯುವ 'ಡಿ' ಗ್ರೂಪ್ ನೌಕರರ ಪರಿಸ್ಥಿತಿ ಏನಾಗುವುದೆಂದು ಯೋಚಿಸಬೇಡವೇ ಎಂದು ಪ್ರಶ್ನಿಸಿದರು.

ಈ ಬಗ್ಗೆ ಸದನದಲ್ಲಿ ನಾನು ಪ್ರಶ್ನಿಸಿದ ನಂತರ ಮಾ.7ರಂದು ಸಿಡಿಸಿಗೆ ಅನುಮೋದನೆ ನೀಡಲಾಗಿದೆ. ಆದರೆ ಮಾರ್ಗದರ್ಶಿ ಸೂತ್ರದಂತೆ ವಿವಿಧ ಕ್ಷೇತ್ರಗಳಿಂದ ಸದಸ್ಯರನ್ನು ನೇಮಕ ಮಾಡಲಾಗಿದೆಯೇ? ಜಿಲ್ಲಾ ಉಸ್ತುವಾರಿ ಸಚಿವರು ಗಮನಿಸಿದ್ದಾರೆಯೇ? ತಿಳಿಸಿಲ್ಲ. ಪ್ರಾಂಶುಪಾಲರು ಪಟ್ಟಿ ಸಲ್ಲಿಸಿಲ್ಲವೆಂದು ಉಸ್ತುವಾರಿ ಸಚಿವರೇ ಹೇಳಿರುವಾಗ ಅನುಮೋದನೆ ನೀಡಿರುವುದು ಯಾರ ಪಟ್ಟಿಗೆ ಎನ್ನುವುದನ್ನು ಉನ್ನತ ಶಿಕ್ಷಣ ಸಚಿವರು ಸ್ಪಷ್ಟಪಡಿಸಬೇಕು ಎಂದು ಪಟ್ಟುಹಿಡಿದರು.

ಈ ವೇಳೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್, ಈ ಹಿಂದೆ ಉಸ್ತುವಾರಿ ಸಚಿವರು ಬೇರೆ ಪಟ್ಟಿ ಕಳುಹಿಸುವುದಾಗಿ ತಿಳಿಸಿದ್ದರು. ಅದರಂತೆ ಇದೀಗ ಹೊಸ ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಮಾರ್ಗದರ್ಶಿ ಸೂತ್ರದಂತೆ ಸದಸ್ಯರ ನೇಮಕವಾಗಿಲ್ಲ ಎನ್ನುವುದಾದರೆ ಆ ಬಗ್ಗೆ ಪರಿಶೀಲಿಸೋಣ ಎಂದರು.

ಸ್ಪೀಕರ್ ಮಧ್ಯೆ ಪ್ರವೇಶಿಸಿ, ನಾನು ಪಟ್ಟಿ ಕೊಟ್ಟಿಲ್ಲವೆಂದು ಪ್ರಾಂಶುಪಾಲರು ಬರೆದುಕೊಡಲಿ ಎಂದರು. ಅದನ್ನು ಸಚಿವರೇ ಸ್ಪಷ್ಟಪಡಿಸಲಿ ಎಂದು ಹರೀಶ್‌ಗೌಡ ಒತ್ತಾಯಿಸಿದರು. ಕಡೆಗೆ ಈ ಬಗ್ಗೆ ಪರಿಶೀಲಿಸಿ, ಮಾಹಿತಿ ನೀಡುವಂತೆ ಸ್ಪೀಕರ್ ಸೂಚಿಸಿದ್ದರಿಂದ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಮಾಹಿತಿ ನೀಡುವುದಾಗಿ ಸಚಿವ ಸುಧಾಕರ್ ತಿಳಿಸಿದರು.

ಜೈಲುಗಳಲ್ಲಿ ಅಕ್ರಮ ಚಟುವಟಿಕೆ ತಡೆಯಲು ವಿಶೇಷ ಕ್ರಮ

ಪರಿಷತ್‌ನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್





ಬೆಂಗಳೂರು, ಮಾ.13– ರಾಜ್ಯದ ಜೈಲುಗಳಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳ ನಿಯಂತ್ರಣಕ್ಕೆ ಗೃಹ ಇಲಾಖೆ ಕಠಿಣ ನಿಯಮಗಳನ್ನು ಜಾರಿ ಮಾಡಿದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಪ್ರತಾಪ್ ಸಿಂಹ ನಾಯಕ್ ಅವರು, ಜೈಲುಗಳ ಒಳಗೆ ಅಕ್ರಮ ಚಟುವಟಿಕೆಗಳು ಹೆಚ್ಚು ನಡೆಯುತ್ತಿವೆ. ಜೈಲಿನಲ್ಲಿ ಅಕ್ರಮ ತಡೆಯಲು ಆಗದೇ ಹೋದರೆ ಹೇಗೆ? ಅಕ್ರಮದಲ್ಲಿ ಭಾಗಿಯಾಗುತ್ತಿರುವವರ ಮೇಲೆ ಯಾವುದೇ ಕ್ರಮ ಆಗಿಲ್ಲ. ಪರಪ್ಪನ ಅಗ್ರಹಾರದಲ್ಲಿಯೇ ಡ್ರಗ್ಸ್ ಪೂರೈಕೆ ಆಗುತ್ತಿದೆ ಎಂಬ ಆರೋಪ ಇದೆ. ಇದಕ್ಕೆ ಗೃಹ ಇಲಾಖೆ ಕಠಿಣ ನಿಯಮ ಜಾರಿ ಮಾಡಬೇಕು ಎಂದು ಒತ್ತಾಯ ಮಾಡಿದರು.

ಇದಕ್ಕೆ ಸಚಿವ ಪರಮೇಶ್ವರ್ ಉತ್ತರ ನೀಡಿ, ಜೈಲಿನಲ್ಲಿ ಅಕ್ರಮ ಚಟುವಟಿಕೆಗಳು ನಡೆಯುವುದು ಹೊಸದಲ್ಲ. ಅನೇಕ ವರ್ಷಗಳಿಂದ ಇಂತಹ ಕೆಲಸ ನಡೆಯುತ್ತಿದೆ. ಇಡೀ ದೇಶದಲ್ಲಿ ಇಂತಹ ವ್ಯವಸ್ಥೆ ಇದೆ ಇದು ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕಾಗಿ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದರು.

ತಂತ್ರಜ್ಞಾನವನ್ನ ಬಳಕೆ ಮಾಡಿಕೊಂಡು ಇಂತಹ ಚಟುವಟಿಕೆಗಳು ನಡೆಯಲು ಕ್ರಮವಹಿಸಲಾಗಿದೆ. ಜೈಲಿನಲ್ಲಿ ಗಾರ್ಡ್ಸ್ ಇರುತ್ತಿದ್ದರು. ಅವರ ಮೇಲೆ ಆರೋಪ ಬಂತು. ಈಗ ಜೈಲಿನಲ್ಲಿ KSISಈ ಫೋರ್ಸ್ ನಿಯೋಜನೆ ಮಾಡಲಾಗಿದೆ. ಪರಪ್ಪನ ಅಗ್ರಹಾರ ಜೈಲಿಗೆ ಎರಡು ಬಾರಿ ಭೇಟಿ ಕೊಟ್ಟಿದ್ದೇನೆ. ಹೈ ರೆಸ್ಯುಲೇಷನ್ ಟವರ್ ಹಾಕಿದ್ದೇವೆ. ಜಾಮರ್ ಹಾಕಿದ್ದೇವೆ. ಕೇಂದ್ರ ಸರ್ಕಾರದಿಂದ ಜೈಲು ಆಧುನಿಕ ಮಾಡಲು ಹಣ ಬಂದಿದೆ. ಆ ಹಣವನ್ನು ಖರ್ಚು ಮಾಡಲಾಗುತ್ತಿದೆ. ಬೆಂಗಳೂರು ಜೈಲಿನಲ್ಲೇ 280 AI ಕ್ಯಾಮರಾ ಹಾಕಿದ್ದೇವೆ ಮೈಸೂರು, ಮಂಗಳೂರು ಸೇರಿ ಎಲ್ಲಾ ಜೈಲಿನಲ್ಲಿ AI ಕ್ಯಾಮರಾ ಹಾಕಿದ್ದೇವೆ ಎಂದರು.

ಜೈಲಿನಲ್ಲಿ ಡ್ರಗ್ಸ್ ಸಪ್ಲೈ ಆಗುತ್ತೆ ಅಂತ ನಮ್ಮ ಗಮನಕ್ಕೆ ಬಂದಿದೆ. ಇದಕ್ಕಾಗಿ ಶ್ವಾನದಳ ನಿಯೋಜನೆ ಮಾಡಿದ್ದೇವೆ. ಮೊಬೈಲ್ ಫೋನ್‌ಗಳನ್ನು ಹೇಗೇಗೋ ಜೈಲ್‌ಗೆ ತೆಗೆದುಕೊಂಡು ಹೋಗುತ್ತಾರೆ. ಹೀಗಾಗಿ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ 248 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಸಿಬ್ಬಂದಿಗಳ ಮೇಲೆ ಕ್ರಮ ಆಗಿದೆ. ಈವರೆಗೂ 22 ಅಧಿಕಾರಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಹಿಂಡಲಗಾ ಜೈಲಿನಿಂದ ಕೇಂದ್ರ ಸಚಿವರಿಗೆ ಬೆದರಿಕೆ ಕರೆ ಹೋಗಿತ್ತು ಅವರ ಮೇಲೂ ಕ್ರಮ ಕೈಗೊಳ್ಳಲಾಗಿದ್ದು ಮತ್ತಷ್ಟು ಕಠಿಣ ಕ್ರಮ ತೆಗೆದುಕೊಳ್ಳಲು ನಾವು ಮುಂದಾಗಿದ್ದೇವೆ ಅಂತ ತಿಳಿಸಿದರು.

ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದ ಸಿದ್ದರಾಮಯ್ಯ: ಆರ್.ಅಶೋಕ ವಾಗ್ದಾಳಿ



ಬೆಂಗಳೂರು, ಮಾ.13– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಸಾಲದ ಕೂಪಕ್ಕೆ ತಳ್ಳಿದ್ದಾರೆ. ಈ ರಾಜ್ಯ ಕಂಡ ಮುಖ್ಯಮಂತ್ರಿಗಳಲ್ಲಿ ಅತಿ ಹೆಚ್ಚು ಸಾಲದ ಹೊರೆ ಹೊರಿಸಿದ ಕೀರ್ತಿ ಇವರಿಗೇ ಸಲ್ಲುತ್ತದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಗುರುವಾರ ಪಾಲ್ಗೊಂಡು ಮಾತನಾಡಿದ ಅವರು, ಇವರ ಅವಧಿಯಲ್ಲಿ ರೂ.4.91 ಲಕ್ಷ ಕೋಟಿ ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಶೇ 63ರಷ್ಟು ಪಾಲು ಇವರದೇ ಎಂದರು.


ಸಾಲದ ಮೊತ್ತವನ್ನು ರೂ.1 ಲಕ್ಷ ಕೋಟಿ ಗಡಿ ದಾಟಿಸಿ,ರೂ.1.16 ಲಕ್ಷ ಕೋಟಿಗೆ ಹೆಚ್ಚಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನ ಮೇಲೆ ರೂ.1 ಲಕ್ಷ ಸಾಲದ ಹೊರೆ ಹೊರಿಸಿದ್ದಾರೆ. 2021–22ರಲ್ಲಿ ನಮ್ಮ ಸರ್ಕಾರ ಇದ್ದಾಗ ಕೋವಿಡ್ ಇತ್ತು. ಆಗ ಲಾಕ್‌ಡೌನ್ ಕಾರಣ ಸರ್ಕಾರಕ್ಕೆ ಯಾವುದೇ ಆದಾಯ ಇರಲಿಲ್ಲ. ಆಗ ಅನಿವಾರ್ಯವಾಗಿ ರೂ. 80,641 ಕೋಟಿ ಸಾಲ ತೆಗೆದುಕೊಳ್ಳಬೇಕಾಯಿತು. ಅದರ ನಂತರದ ವರ್ಷ ಸಾಲದ ಪ್ರಮಾಣ ಇಳಿಕೆ ಆಯಿತು. ಅಂದರೆ ರೂ.44,549 ಕೋಟಿ ಮಾತ್ರ ಪಡೆದದ್ದು. ಆದರೆ, 2023–24ರಲ್ಲಿ ಸಿದ್ದರಾಮಯ್ಯ ಸರ್ಕಾರ ರೂ90,280 ಕೋಟಿ, 2024–25ರಲ್ಲಿ ರೂ.1.07 ಲಕ್ಷ ಕೋಟಿ ಮತ್ತು ಈಗ ರೂ.1.16 ಲಕ್ಷ ಕೋಟಿ ಸಾಲ ಪಡೆಯಲು ಮುಂದಾಗಿದೆ. ಈ ವರ್ಷ ಕಳೆದ ವರ್ಷಕ್ಕಿಂತ ಶೇ.15ರಷ್ಟು ಹೆಚ್ಚು ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿದ್ದಾರೆ. ಅಲ್ಲದೆ, ಸರ್ಕಾರದ ಹೊಣೆಗಾರಿಕೆ 2022– 23ರಲ್ಲಿ ರೂ.5.23 ಲಕ್ಷ ಕೋಟಿ ಇದ್ದದ್ದು, 2025–26ರಲ್ಲಿ 7.65 ಲಕ್ಷ ಕೋಟಿಗೆ ಏರಿಕೆ ಆಗಿದೆ 2017ರಲ್ಲಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಸರ್ಕಾರ ಸಾಲ ಸಿಗುತ್ತದೆ ಎಂದು ಸಾಲ ತೆಗೆದುಕೊಳ್ಳಬಾರದು. ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸಾಲ ತೆಗೆದುಕೊಳ್ಳಬೇಕೇ ಹೊರತು ಸಾಮರ್ಥ್ಯವಿಲ್ಲದೇ ತೆಗೆದುಕೊಳ್ಳಬಾರದು. ತೆಗೆದುಕೊಂಡ ಸಾಲವನ್ನು ಆಸ್ತಿ ಸೃಜನೆಗೆ ಬಳಸಬೇಕು ಎಂದು ಹೇಳಿದ್ದರು.

ಕಳೆದ ವರ್ಷವೂ ಬಜೆಟ್‌ನಲ್ಲಿ ತೆರಿಗೆ ಹೊರೆ ಇಲ್ಲ ಎಂದರು. ಆಕರ್ಷಕ ಯೋಜನೆಗಳನ್ನು ಪ್ರಕಟಿಸಿ, ಮಾಧ್ಯಮಗಳಲ್ಲಿ ಅದ್ಭುತ ಬಜೆಟ್ ಎಂದು ಹೊಗಳಿಸಿಕೊಂಡರು. ಆ ನಂತರ ಒಂದರ ಮೇಲೆ ಮತ್ತೊಂದು ಬೆಲೆ ಏರಿಕೆ ಮಾಡಿದರು. ಬೆಲೆ ಏರಿಕೆಯಿಂದ ಆದಾಯ ಸಂಗ್ರಹವಾಗಿದೆ. ಈ ಮೂಲದಿಂದ ರೂ.41 ಸಾವಿರ ಕೋಟಿ ತೆರಿಗೆ ಸಂಗ್ರಹ ಮಾಡಿದರು. ಈ ವರ್ಷವೂ ಸಾರ್ವಜನಿಕರಿಗೆ ತೆರಿಗೆ ಏರಿಕೆಯ ಮಾರಿ ಹಬ್ಬ ಕಾದಿದೆ ಎಂದರು.

ಕೆಪಿಎಸ್‌ಸಿ ಬದಲು ಕೆಪಿಸಿಸಿ ಹಗರಣ ಎಂದ ಸಿಎಂ

ಸಿದ್ದರಾಮಯ್ಯರ ಕಾಲೆಳೆದ ವಿಪಕ್ಷಗಳು

ಬೆಂಗಳೂರು, ಮಾ.13– ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಕೆಪಿಎಸ್‌ಸಿ ಹಗರಣದ ಬಗ್ಗೆ ಮಾತನಾಡಲು ಹೋಗಿ ಸಿಎಂ ಸಿದ್ದರಾಮಯ್ಯ ಕೆಪಿಸಿಸಿ ಹಗರಣ ಎಂದು ಹೇಳುವ ಮೂಲಕ ಎಡವಟ್ಟು ಮಾಡಿಕೊಂಡ ಪ್ರಸಂಗ ನಡೆಯಿತು.



ಸದನದಲ್ಲಿ ಕಲಾಪ ನಡೆಯುತ್ತಿದ್ದಾಗ ಸಿಎಂ ಸಿದ್ದರಾಮಯ್ಯ ಕೆಪಿಎಸ್‌ಸಿ ಹಗರಣದ ಬಗ್ಗೆ ಮಾತನಾಡಲು ಆರಂಭಿಸಿದ್ದರು. ಈ ವೇಳೆ ಕರ್ನಾಟಕ ಲೋಕಸೇವಾ ಆಯೋಗ ಕೆಪಿಎಸ್‌ಸಿ ಎನ್ನುವ ಬದಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕೆಪಿಸಿಸಿ ಎಂದು ತಪ್ಪಾಗಿ ಹೇಳಿದರು. ಇದನ್ನೇ ಇಟ್ಟುಕೊಂಡು ಸಿಎಂ ಸಿದ್ದರಾಮಯ್ಯರನ್ನು ವಿಪಕ್ಷ ಬಿಜೆಪಿ ಸದಸ್ಯರು ಕಾಲೆಳೆದರು. ಸಿದ್ದರಾಮಯ್ಯನವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕೆಂದುಕೊಂಡಿದ್ದಾರೆ. ಅದನ್ನೇ ತಲೆಯಲ್ಲಿಟ್ಟುಕೊಂಡಿರುವ ಕಾರಣ ಕೆಪಿಸಿಸಿ ಎಂದೇ ಬರುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಾಲೆಳೆದರು. ಈ ವೇಳೆ ಕೊಂಚ ಗದ್ದಲವೇರ್ಪಟ್ಟಿತು.

ಆಗ ಮಧ್ಯಪ್ರವೇಶಿಸಿದ ಸ್ಪೀಕರ್ ಯು.ಟಿ.ಖಾದರ್ ಏನೋ ಬಾಯ್ತಪ್ಪಿ ಒಂದು ಅಕ್ಷರ ತಪ್ಪಾಯ್ತು. ಅದನ್ನೇ ಇಟ್ಟುಕೊಂಡು ಚರ್ಚೆ ಮಾಡಬೇಕಾ? ಮೊದಲೇ ಸಮಯವಿಲ್ಲ, ನೀವು ಮುಂದುವರಿಸಿ ಎಂದು ಸಿಎಂಗೆ ಮಾತು ಮುಂದುವರಿಸಲು ಸೂಚಿಸಿದರು. ತಕ್ಷಣ ಸಿದ್ದರಾಮಯ್ಯ ತಿರುಗೇಟು ನೀಡಿದರು. ವಿಜಯೇಂದ್ರ ಮತ್ತು ಬಿಜಾಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನಡುವಿನ ಗುಂಪುಗಾರಿಕೆಯನ್ನು ಉಲ್ಲೇಖಿಸಿ, ಶಿವಕುಮಾರ್ ಅವರನ್ನು ನಾವು ಕೆಪಿಸಿಸಿ ಅಧ್ಯಕ್ಷ ಎಂದು ಒಪ್ಪಿಕೊಳ್ಳುತ್ತೇವೆ, ಹಾಗೆಯೇ ನೀವು ವಿಜಯೇಂದ್ರ ಅವರನ್ನು ನಿಮ್ಮ ಅಧ್ಯಕ್ಷ ಎಂದು ಒಪ್ಪಿಕೊಳ್ಳುವಿರಾ ಎಂದು ಸಿದ್ದರಾಮಯ್ಯ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪ್ರಶ್ನಿಸಿದರು.

ಆಯುರ್ವೇದ ವಿವಿಯ ಯಾವುದೇ ಪದವಿ ತರಗತಿಯ ಸೀಟು ಕಡಿತ ಇಲ್ಲ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ



ಬೆಂಗಳೂರು, ಮಾ.13(ಕೆಎಂಶಿ)– ಮೈಸೂರು, ಬೆಂಗಳೂರು, ಶಿವಮೊಗ್ಗ ಹಾಗೂ ಬಳ್ಳಾರಿ ಆಯುರ್ವೇದ ವಿಶ್ವ ವಿದ್ಯಾಲಯಗಳ ಪೈಕಿ ಬಳ್ಳಾರಿಯಲ್ಲಿ ಮಾತ್ರ ಸಿಬ್ಬಂದಿ ಕೊರತೆ ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಜನಾರ್ದನ ರೆಡ್ಡಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೊರತೆ ನೀಗಿಸಲು ವಿಶೇಷ ಭತ್ಯೆ ನೀಡಲು ಪರಿಶೀಲನೆ ನಡೆಸಲಾಗುತ್ತಿದೆ, 150 ವರ್ಷಗಳ ಇತಿಹಾಸವಿರುವ ಬಳ್ಳಾರಿಯ ತಾರಾನಾಥ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುವುದು. ಬೇರೆ ಭಾಗದಲ್ಲಿನ ಸಿಬ್ಬಂದಿ ಹಾಗೂ ವೈದ್ಯರ ನಿಯೋಜನೆ ಬಗ್ಗೆಯೂ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪದವಿ ತರಗತಿಗಳಿಗೆ ಯಾವುದೇ ಸೀಟುಗಳ ಕಡಿತ ಮಾಡಿಲ್ಲ, ಸ್ನಾತಕೋತ್ತರ ಕೋರ್ಸ್ ಸೀಟುಗಳನ್ನು ಸಿಬ್ಬಂದಿ ಕೊರತೆ ಕಾರಣಕ್ಕಾಗಿ ಕಡಿತ ಮಾಡಲಾಗಿದೆ ಎಂದರು.

ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದ ಜನರಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸುವಲ್ಲಿ 1,032 ಔಷಧಿಗಳನ್ನು ಖರೀದಿಸಿ ಉಚಿತವಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆರೋಗ್ಯ ಇಲಾಖೆಯಲ್ಲಿ ಜೀವನಾವಶ್ಯಕ ಮತ್ತು ಅಪೇಕ್ಷಣೀಯ ಎಂಬ 2 ವಿಧಗಳಲ್ಲಿ ಒಟ್ಟು 475 ಔಷಧಿಗಳನ್ನು ಖರೀದಿಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿ 344 ಔಷಧಿಗಳು ದಾಸ್ತಾನಿದೆ. ಕೆಲವು ಔಷಧಿಗಳನ್ನು ಖರೀದಿಸಲು ಟೆಂಡರ್ ಕರೆದರೆ ಗುತ್ತಿಗೆದಾರರು ಔಷಧಿ ಪೂರೈಸಲು ಮುಂದೆ ಬರುತ್ತಿಲ್ಲ.

ಬೆಲೆ ಕಡಿಮೆ ಎಂಬ ಕಾರಣಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಕೇಂದ್ರ ಸರ್ಕಾರದ ಅನುದಾನದಲ್ಲಿ ಶೇ.80ರಷ್ಟು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ಸಂಸ್ಥೆಗೆ ಹಂಚಿಕೆಯಾಗಿದ್ದು, ಶೇ.20 ರಷ್ಟನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ನೀಡಿ ಬಳಕೆ ಮಾಡಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಈ ವರ್ಷ ಔಷಧಿ ಖರೀದಿಗೆ 989 ಕೋಟಿ ರೂ. ಮೀಸಲಿಡಲಾಗಿದೆ, ಔಷಧಿ ಲಭ್ಯತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಡಿ.ಜಿ.ಶಾಂತನಗೌಡ ಹಾಗೂ ವಿಜಯಾನಂದ ಕಾಶಪ್ಪನವರ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೊಸ 59 ತಾಲೂಕುಗಳಿಗೆ ಹಂತಹಂತವಾಗಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲೂಕು ಆಸ್ಪತ್ರೆಗಳನ್ನು ನಿರ್ಮಿಸಿಕೊಡಲಾಗುವುದು ಎಂದರು.

59 ತಾಲೂಕುಗಳ 11 ಕಡೆ ಮೊದಲ ಹಂತದಲ್ಲಿ ಸಮುದಾಯ ಆರೋಗ್ಯ ಕೇಂದ್ರ ನಿರ್ಮಿಸಲು ಬಜೆಟ್‌ನಲ್ಲಿ ಮಂಜೂರಾತಿ ನೀಡಲಾಗಿದೆ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ತಾಲೂಕು ಆಸ್ಪತ್ರೆಗಳ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಸೋಷಿಯಲ್ ಮೀಡಿಯಾ ಮಾನಿಟರ್‌ಗೆ ಪ್ರತಿ ಠಾಣೆಯಲ್ಲಿ ವಿಶೇಷ ವಿಭಾಗ ಸ್ಥಾಪನೆ



ಬೆಂಗಳೂರು, ಮಾ.13– ಸಾಮಾಜಿಕ ಜಾಲತಾಣಗಳ ದುರುಪಯೋಗ ನಿಲ್ಲಿಸಲು ದೇಶದಲ್ಲಿ ಮೊದಲ ಬಾರಿಗೆ ವಿಶೇಷ ಪೊಲೀಸ್ ವಿಭಾಗವನ್ನೇ ಕರ್ನಾಟಕ ಸರ್ಕಾರ ಮಾಡಿದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ನವೀನ್ ಪ್ರಶ್ನಿಸಿ, ಸಾಮಾಜಿಕ ಜಾಲತಾಣ ನಿಗಾವಹಿಸಲು ಪೊಲೀಸ್ ಇಲಾಖೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಪೊಲೀಸ್ ಇಲಾಖೆಗೆ ಸರ್ಕಾರ ಮತ್ತಷ್ಟು ಶಕ್ತಿಯನ್ನು ಕೊಡಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡಿ ಹೆಚ್ಚು ಗಲಭೆಗಳು ಆಗುತ್ತಿವೆ. ಸಾಮಾಜಿಕ ಜಾಲತಾಣ ನಿಯಂತ್ರಣಕ್ಕಾಗಿ ಗೃಹ ಇಲಾಖೆ ವಿಶೇಷ ಬಜೆಟ್ ನೀಡಬೇಕು. ಸಾಮಾಜಿಕ ಜಾಲತಾಣ ಮಾನಿಟರ್ ಮಾಡಲು ಕ್ರಮವಹಿಸಬೇಕು. ಇದಕ್ಕಾಗಿ ವಿಶೇಷ ಕಾನೂನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಪ್ರಶ್ನೆಗೆ ಉತ್ತರಿಸಿದ ಸಚಿವ ಪರಮೇಶ್ವರ್ ಅವರು, ಸೋಷಿಯಲ್ ಮೀಡಿಯಾ ಬಹಳ ಉಪಯೋಗ ಆಗುತ್ತಿದೆ. ಅಷ್ಟೇ ದುರುಪಯೋಗವೂ ಸಹ ಆಗುತ್ತಿದೆ. ಟೆಕ್ನಾಲಜಿ ಇಲ್ಲದೆ ಬದುಕಲು ಸಾಧ್ಯವಿಲ್ಲ ಎನ್ನುವ ಸ್ಥಿತಿಗೆ ನಾವು ತಲುಪಿದ್ದೇವೆ. ಫೇಸ್‌ಬುಕ್, ಎಕ್ಸ್, ಯೂಟ್ಯೂಬ್‌ಗಳನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಸುದ್ದಿ ಹಬ್ಬಿಸುವ ಕೆಲಸ ಆಗುತ್ತಿದೆ. ಇದನ್ನು ನಿಯಂತ್ರಣ ಮಾಡಲು ದೇಶದಲ್ಲೇ ಮೊದಲ ಬಾರಿಗೆ ಒಂದು ವಿಭಾಗ ಪ್ರಾರಂಭ ಮಾಡಿದ್ದೇವೆ ಎಡಿಜಿಪಿ ಸೈಬರ್ ಕ್ರೈಮ್ ವಿಭಾಗ ನೇಮಕ ಮಾಡಲಾಗಿದೆ. ಪ್ರತಿ ಠಾಣೆಯಲ್ಲಿ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್ ಮಾಡಿದ್ದೇವೆ. 247 ಪೊಲೀಸರು ಮಾನಿಟರ್ ಮಾಡುತ್ತಾರೆ. ಇಂತಹ ಕೇಸ್ ಕಂಡುಬಂದ ಕೂಡಲೇ ಸುಮೋಟೋ ಕೇಸ್ ಹಾಕುತ್ತಿದ್ದೇವೆ ಎಂದು ಹೇಳಿದರು.

ಫ್ಯಾಕ್ಟ್ ಚೆಕ್ ಮಾಡುವ ಆ್ಯಪ್ ಮಾಡಿದ್ದೇವೆ. ನಿತ್ಯ ಮಾನಿಟರ್ ಮಾಡುವ ಕೆಲಸ ಮಾಡುತ್ತಿದ್ದೇವೆ. ಸುಳ್ಳು ಸುದ್ದಿ ಬಂದರೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಪೊಲೀಸ್ ಠಾಣೆಯಲ್ಲಿ ಡೆಸ್ಕ್ ಮಾಡಿಕೊಂಡಿದ್ದೇವೆ. ಠಾಣೆಯಲ್ಲಿ ಮೀಡಿಯಾಗಾಗಿ ಒಂದು ಡೆಸ್ಕ್, ಲಾ ಅಂಡ್ ಆರ್ಡರ್‌ಗೆ ಒಂದು ಡೆಸ್ಕ್, ವೈಯಕ್ತಿಕ ಡೆಸ್ಕ್, ಸಂಘಟನೆ ಡೆಸ್ಕ್ ಅನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇವೆ ಎಂದು ನುಡಿದರು. ಡ್ರಗ್ಸ್ ಹಾವಳಿ, ಆರ್ಥಿಕ ಅಪರಾಧ ಜಾಸ್ತಿ ಆಗುತ್ತಿದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಸೈಬರ್ ಕ್ರೈಮ್ ಜಾಸ್ತಿ ಆಗಿದ್ದು, ಈ ವರ್ಷ 22,000 ಕೇಸ್ ದಾಖಲಾಗಿದೆ. ಕೊಲೆ, ರೇಪ್, ಪೋಕ್ಸೋ ಕೇಸ್ ಕಡಿಮೆ ಆಗಿದೆ. ಆದರೆ ಸೈಬರ್ ಕ್ರೈಮ್ ಕೇಸ್‌ಗಳು ಜಾಸ್ತಿ ಆಗುತ್ತಿದೆ. ಹೀಗಾಗಿ ಸರ್ಕಾರ ಇದೆಲ್ಲವನ್ನೂ ಗಂಭೀರವಾಗಿ ಪರಿಗಣಿಸಿ ಕ್ರಮಕ್ಕೆ ಮುಂದಾಗಿದೆ ಎಂದರು.

ನೇಕಾರರಿಗೆ ಉದ್ಯೋಗ ಒದಗಿಸಲು ಎಲ್ಲಾ ಕ್ರಮ



ಜವಳಿ ಸಚಿವ ಶಿವಾನಂದ ಪಾಟೀಲ

ಬೆಂಗಳೂರು, ಮಾ.13–ನೇಕಾರರಿಗೆ ಉದ್ಯೋಗ ನೀಡಲು ರಾಜ್ಯ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಂಡಿದ್ದು, ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳು, ಆರೋಗ್ಯ ಕೇಂದ್ರಗಳಿಗೆ ಬೆಡ್‌ಶೀಟ್ ಹಾಗೂ ಟವೆಲ್‌ಗಳನ್ನು ಪೂರೈಕೆ ಮಾಡಲು ಬೇಡಿಕೆ ಪಡೆಯಲಾಗುತ್ತಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ವಿಧಾನಸಭೆಗೆ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಶಾಸಕ ಸಿದ್ದು ಸವದಿ ಅವರ ಗಮನ ಸೆಳೆಯುವ ಸೂಚನೆ ನಿಯಮ 73ರ ವಿಷಯಕ್ಕೆ ಉತ್ತರಿಸಿದ ಸಚಿವರು, ನೇಕಾರರಿಗೆ ನೆರವಾಗಲು ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. 2025–26ನೇ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣ ಇಲಾಖೆಯ ಸಮವಸ್ತ್ರಕ್ಕೆ ಅಗತ್ಯವಾದ 21.15 ಲಕ್ಷ ಮೀಟರ್ ಬಟ್ಟೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ 3,567 ನೋಂದಾಯಿತ ನೇಕಾರರಿಂದ ತಯಾರಿಸಿ ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ವಿದ್ಯಾವಿಕಾಸ ಸಮವಸ್ತ್ರ ಸರಬರಾಜಿಗೆ ಅಗತ್ಯ ಒಟ್ಟು ಬಟ್ಟೆಯ ಪ್ರಮಾಣಕ್ಕೆ ಅನುಗುಣವಾಗಿ ಅಲ್ಲಿನ ಉಪಕೇಂದ್ರಗಳಲ್ಲಿ ಎಲ್ಲ ನೇಕಾರರಿಗೆ ನಿರಂತರ ನೂಲು ಸರಬರಾಜು ಮಾಡುತ್ತಿದ್ದು, ನೇಕಾರರು ನೇಯುವ ಬಟ್ಟೆಗೆ ನಿಗದಿತ ಪರಿವರ್ತನಾ ಶುಲ್ಕ ಪಾವತಿ ಮಾಡಲಾಗುವುದು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಬಾಗಲಕೋಟ ಜಿಲ್ಲೆಯ ತೇರದಾಳ ವ್ಯಾಪ್ತಿಯ ರಬಕವಿ, ಬನಹಟ್ಟಿ, ತೇರದಾಳ, ಚಿಮ್ಮಡ, ಕೆಂಗೇರಿಮಡಿ, ಮಹಾಲಿಂಗಪುರ, ಹೊಸೂರು ಮತ್ತು ನಾವಲಗಿಯಲ್ಲಿ ಉಪಕೇಂದ್ರಗಳನ್ನು ಹೊಂದಿದ್ದು, ಈ ಕೇಂದ್ರಗಳಲ್ಲಿ ವಿದ್ಯಾ ವಿಕಾಸ ಯೋಜನೆಯ ಸಮವಸ್ತ್ರ ಬಟ್ಟೆ ತಯಾರಿಸಲಾಗುತ್ತಿದೆ ಎಂದರು.

2024–25ನೇ ಸಾಲಿನಲ್ಲಿ 21 ಸಹಕಾರ ಸಂಘ ಹಾಗೂ ಸಹಕಾರ ಬ್ಯಾಂಕುಗಳ ಮೂಲಕ 752 ನೇಕಾರರಿಗೆ ಒಟ್ಟು 59.31 ಲಕ್ಷ ರೂ. ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ. ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರಿಗೆ ವಾರ್ಷಿಕ ಐದು ಸಾವಿರ ರೂ.ಗಳನ್ನು ಡಿಬಿಟಿ ಮೂಲಕ ಪಾವತಿಸಲಾಗುತ್ತಿದೆ. ಕೈಮಗ್ಗ ವಿಕಾಸ ಯೋಜನೆಯಡಿ ಕೈಮಗ್ಗ ಮತ್ತು ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಪ್ರತಿಶತ 50ರಷ್ಟು ಸಹಾಯಧನ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಕಚ್ಚಾ ಮಾಲ್ ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆಜಿಗೆ 15 ರೂ. ಸಹಾಯಧನ ನೀಡಲಾಗುವುದು. ನೇಕಾರಿಕೆಗೆ ಸಹಕಾರ ಸಂಘ ಮತ್ತು ಸಹಕಾರ ಬ್ಯಾಂಕುಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಪ್ರತಿಶತ ಒಂದರ ಬಡ್ಡಿ ದರದಲ್ಲಿ 2 ಲಕ್ಷ ಹಾಗೂ ಪ್ರತಿಶತ 3 ರ ಬಡ್ಡಿ ದರದಲ್ಲಿ 2 ರಿಂದ 5 ಲಕ್ಷದವರೆಗೆ ಸಾಲ ನೀಡಲಾಗುವುದು ಎಂದು ವಿವರಿಸಿದರು.

ಕೈಮಗ್ಗ ಉತ್ಪನ್ನಗಳ ಮಾರಾಟಕ್ಕಾಗಿ ರಾಷ್ಟ್ರೀಯ ಹಾಗೂ ರಾಜ್ಯ ಕೈಮಗ್ಗ ಮೇಳ ಆಯೋಜಿಸಲಾಗುತ್ತಿದೆ. ಇಲಕಲ್ ಸೀರೆ, ಗುಳೇದಗುಡ್ಡ ಖಣ, ಮೊಳಕಾಲ್ಮೂರು ರೇಷ್ಮೆ ಸೀರೆ ಮತ್ತು ಉಡುಪಿಯ ಕಾಟನ್ ಸೀರೆಗಳನ್ನು ಜಿಯಾಗ್ರಫಿಕಲ್ ಇಂಡಿಕೇಷನ್ ಕಾಯ್ದೆ ಅಡಿಯಲ್ಲಿ ನೋಂದಾಯಿಸಲಾಗಿದೆ ಎಂದು ತಿಳಿಸಿದರು.

ನಕಲಿ ಔಷಧಿ ಜಾಲ ತಡೆಗಟ್ಟಲು ಕ್ರಮ, ಕೇಂದ್ರ ಸರ್ಕಾರಕ್ಕೂ ಪತ್ರ: ಸಚಿವ ದಿನೇಶ್ ಗುಂಡೂರಾವ್



ಬೆಂಗಳೂರು, ಮಾ.13–ರಾಜ್ಯದಲ್ಲಿ ನಕಲಿ ಔಷಧ ಮಾರಾಟ ಜಾಲವನ್ನು ಹತ್ತಿಕ್ಕಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಔಷಧ ಮಾರಾಟಗಾರರ ವಿರುದ್ಧ ಕಾರ್ಯಾಚರಣೆ ನಡೆಸಿ 2023–24ನೇ ಸಾಲಿನಲ್ಲಿ 10 ಮೊಕದ್ದಮೆಗಳನ್ನು ಮತ್ತು 2024–25ನೇ ಸಾಲಿನಲ್ಲಿ 5 ಮೊಕದ್ದಮೆಗಳನ್ನು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳ ಅಡಿಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ ಹಾಗೂ 87 ಫಾರ್ಮಸಿಗಳನ್ನು ಸ್ಥಗಿತ ಮಾಡಿ 3 ಫಾರ್ಮಸಿಗಳನ್ನು ಮುಚ್ಚಲು ಕ್ರಮ ವಹಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗುರುವಾರ ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಡಾ.ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಉತ್ತರಿಸಿ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಉತ್ತರ ಖಂಡಗಳಲ್ಲಿ ಈ ನಕಲಿ ಔಷಧ ತಯಾರಿಕ ಘಟಕಗಳು ಇವೆ. ನಕಲಿ ಔಷದಿ ಜಾಲವು ರಾಜ್ಯದ ಸಮಸ್ಯೆಯಲ್ಲದೇ ರಾಷ್ಟ್ರಮಟ್ಟದ ಸಮಸ್ಯೆಯಾಗಿದ್ದು ಇದನ್ನು ಹತ್ತಿಕ್ಕುವ ಪ್ರಯತ್ನವನ್ನು ರಾಜ್ಯ ಸರ್ಕಾರ ನಡೆಸಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕೂಡ ಪತ್ರ ಬರೆಯಲಾಗಿದೆ ಎಂದು ಹೇಳಿದರು.


ರಾಜ್ಯದ ಕೆಎಸ್‌ಎಂಎಸ್ ಸಿಎಲ್ ಸಂಸ್ಥೆಗೆ ಆರೋಗ್ಯ ಇಲಾಖೆ ಸಲ್ಲಿಸಿರುವ ಹಿಂದಿನ Annual indent 2022–23 ಅನುಮೋದಿತವಾಗಿರುವ 732 ಔಷಧಿಗಳಲ್ಲಿ 475 ಔಷಧಿಗಳಿಗೆ ಖರೀದಿ ಆದೇಶ ನೀಡಿ ಔಷಧಗಳನ್ನು ಎಲ್ಲ ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗಿದೆ. ಉಗ್ರಾಣಕ್ಕೆ ಸರಬರಾಜುಗೊಂಡು ಆರೋಗ್ಯ ಸಂಸ್ಥೆಗಳ ಬೇಡಿಕೆಯಂತೆ ವಿತರಿಸಿ, ದಾಸ್ತಾನು ಕೊರತೆ ಆಗಿರುವ Essention-91, Desirable-40 ಸೇರಿ 131 ಔಷಧಿಗಳ ಕೊರತೆಯಾಗಿದೆ. ಜನಸಾಮಾನ್ಯರಿಗೆ ಔಷಧಿಯನ್ನು ನೀಡುವುದು ಮೂಲ ಜವಾಬ್ದಾರಿಯಾಗಿದ್ದು ಈಗಾಗಲೇ ಅಗತ್ಯವಿರುವ ಕಡೆಗೆ ಔಷಧಿಗಳನ್ನು ಸಬರರಾಜು ಮಾಡಲಾಗುತ್ತಿದೆ. ಕೆಲವೊಂದು ಕಡೆ ಔಷಧಗಳ ಕೊರತೆಯಾದರೆ ಬೇರೆ ಜಿಲ್ಲೆಗಳಿಂದ ಪಡೆದು ನೀಡಲು ಕ್ರಮ ವಹಿಸಲಾಗುತ್ತಿದೆ ಎಂದು ಉತ್ತರಿಸಿದರು.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಗೆ ಒಟ್ಟು 112 ಔಷಧ ಪರಿವೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 8 ಔಷಧ ಪರಿವೀಕ್ಷಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಉಳಿದ 104 ಹುದ್ದೆಗಳು ಖಾಲಿ ಇರುತ್ತವೆ. 2018ರಲ್ಲಿ 83 ಪರಿವೀಕ್ಷಕರ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿದ ಮೇರೆಗೆ 67 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ದಿನಾಂಕ: 23–06–2021ರಂದು ಇಲಾಖೆಗೆ ಆಯ್ಕೆಪಟ್ಟಿಯನ್ನು ಕಳುಹಿಸಲಾಗಿದೆ ಸದರಿ ಆಯ್ಕೆಪಟ್ಟಿಯನ್ನು ವಿವಿಧ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುತ್ತದೆ' ಎಂದು ವಿವರಿಸಿದರು.

ಇಲಾಖೆಯಲ್ಲಿ ಖಾಲಿ ಇರುವ ಔಷಧ ಪರಿವೀಕ್ಷಕರ ಹುದ್ದೆಗಳ ಪ್ರಭಾರವನ್ನು ವೃತ್ತ ಕಚೇರಿಯ ಸಹಾಯಕ ಔಷಧ ನಿಯಂತ್ರಕರಿಗೆ ವಹಿಸಲಾಗಿರುತ್ತದೆ. ಸಹಾಯಕ ಔಷಧ ನಿಯಂತ್ರಕರುಗಳು ಅವರ ಕರ್ತವ್ಯಗಳ ಜೊತೆಯಲ್ಲಿ ಔಷಧ ಪರಿವೀಕ್ಷಕರ ಕೆಲಸವನ್ನು ಸಮರ್ಪಕ ವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಪದ್ಧತಿ ಜಾರಿ ಮಾಡುತ್ತೇವೆ; ಸಮಯ ನಿಗದಿ ಮಾಡಲು ಆಗಲ್ಲ

ಪರಿಷತ್‌ನಲ್ಲಿ ಸಚಿವ ಬೋಸರಾಜು ಭರವಸೆ



ಬೆಂಗಳೂರು, ಮಾ.13– ರಾಷ್ಟ್ರೀಯ ಪಿಂಚಣಿ ಯೋಜನೆ ಇರುವ ಸರ್ಕಾರಿ ನೌಕರಿಗೆ ಓಪಿಎಸ್ ಜಾರಿ ಮಾಡುತ್ತೇವೆ. ಯಾವಾಗ ಮಾಡುತ್ತೇವೆ ಎಂದು ಸಮಯ ನೀಡಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಪರವಾಗಿ ವಿಧಾನ ಪರಿಷತ್‌ನಲ್ಲಿ ಸಭಾ ನಾಯಕ ಬೋಸರಾಜು ಉತ್ತರ ನೀಡಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ರಾಮೋಜಿಗೌಡೇ ಪ್ರಶ್ನೆ ಕೇಳಿದರು. ಸರ್ಕಾರಿ ಎನ್‌ಪಿಎಸ್ ನೌಕರರಿಗೆ ಓಪಿಎಸ್ ಯೋಜನೆ ಜಾರಿ ಮಾಡಬೇಕು. ಓಪಿಎಸ್ ಕೊಡುವುದಾಗಿ ಚುನಾವಣೆ ವೇಳೆ ನಮ್ಮ ಪ್ರಣಾಳಿಕೆಯಲ್ಲೂ ಸೇರಿಸಲಾಗಿತ್ತು. ಸರ್ಕಾರ ಬಂದು 1.5 ವರ್ಷ ಆದರೂ ಯಾವುದೇ ನಿರ್ಧಾರ ಆಗಿಲ್ಲ. ಇದು ಸರಿಯಲ್ಲ. ಸರ್ಕಾರ ಸಮಿತಿ ಮಾಡಿದೆ. ಸಮಿತಿಯಿಂದ ನಮಗೇನು ಲಾಭವಿಲ್ಲ. ಓಪಿಎಸ್‌ಗಾಗಿ ಹೋರಾಟ ನಡೆಯುತ್ತಿದೆ. ಕೂಡಲೇ ಓಪಿಎಸ್ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಸಿಎಂ ಸಿದ್ದರಾಮಯ್ಯ ಪರವಾಗಿ ಸಚಿವ ಬೋಸರಾಜು ಉತ್ತರ ನೀಡಿ, ರಾಜ್ಯದಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಅಡಿ 2,86,445. ಸರ್ಕಾರಿ ನೌಕರರು ಒಳಪಟ್ಟಿದ್ದಾರೆ. ಓಪಿಎಸ್ ಜಾರಿ ಮಾಡುವ ಸಂಬಂಧ ಸಮಿತಿ ರಚನೆ ಮಾಡಲಾಗಿದೆ. ಈಗಾಗಲೇ ಸಮಿತಿ ಎರಡು ಸಭೆ ಮಾಡಲಾಗಿದೆ. ಸಮಿತಿ ವರದಿ ಕೊಟ್ಟ ಬಳಿಕ ಪರಿಶೀಲನೆ ಮಾಡಿ ಓಪಿಎಸ್ ಜಾರಿ ಮಾಡುವ ಬಗ್ಗೆ ನಿರ್ಧಾರ ಮಾಡುತ್ತೇವೆ. ಓಪಿಎಸ್ ಕಾಲಮಿತಿ ನೀಡಲು ಆಗಲ್ಲ. ಆದಷ್ಟು ಬೇಗ ಈ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದರು.

ಸಮಾಜ ಸುಧಾರಣೆಯಲ್ಲಿ ರೇಣುಕಾಚಾರ್ಯರ ಪಾತ್ರ ಅಪಾರ



ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಮಾತನಾಡುತ್ತಿರುವುದು.

ಮಂಡ್ಯ,ಮಾ.13– ಜಗದ್ಗುರು ಬಸವಣ್ಣನವರಿಗಿಂತ ಮೊದಲೇ ಸಮಾಜ ಸುಧಾರಣೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರವರು ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಹೇಳಿದರು

ನಗರದ ಕರ್ನಾಟಕದ ಸಂಘ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಜಗದ್ಗುರು ರೇಣುಕಾಚಾರ್ಯರವರ ಸಿದ್ಧಾಂತ ಶಿಖಾಮಣಿ ಎಂಬ ಗ್ರಂಥದಲ್ಲಿ ಎಲ್ಲಾ ಧರ್ಮಗಳಿಗಿಂತ ಮಾನವ ಧರ್ಮ ಶ್ರೇಷ್ಠ ಎಂದು ಪ್ರತಿಪಾದಿಸಲಾಗಿದೆ ಎಂದರು.

ನಾವೆಲ್ಲರೂ ಕೇವಲ ಒಂದು ಜಾತಿ ಮತಕ್ಕೆ ಸೀಮಿತವಾಗದೆ ಜಗದ್ಗುರು ರೇಣುಕಾಚಾರ್ಯರ ಮಾನವೀಯತೆ ಸಿದ್ಧಾಂತಗಳನ್ನು ಪಾಲಿಸೋಣ, ಅವರ ಮಾರ್ಗದರ್ಶನದಂತೆ ಎಲ್ಲರೂ ಸಮಾನರು ಎಂದು ಮನೋಭಾವನೆಯ ಜೊತೆಗೆ ಬೆಳಕಿನೆಡೆಗೆ ಸಾಗೋಣ, ಮಂಡ್ಯ ಜಿಲ್ಲೆಯಲ್ಲೂ ಸಹ ಶ್ರೀ ರೇಣುಕಾಚಾರ್ಯರ ಪ್ರಭಾವಕ್ಕೊಳಗಾಗಿ ಅನೇಕ ಕ್ರಾಂತಿಗಳು ಜರುಗಿವೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣ ಚಂದ್ರವನ ಆಶ್ರಮ ಮತ್ತು ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳ ಮಠ ಬೇಬಿ ಗ್ರಾಮದ ಡಾ.ತ್ರಿನೇತ್ರ ಮಹಂತ ಶಿವಯೋಗಿಸ್ವಾಮೀಜಿ ಮಾತನಾಡಿದರು.

ನಂತರ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ. ಮಮತಾ ಸಾಲಿಮಠ, ಶ್ರೀ ಜಗದ್ಗುರು ರೇಣುಕಾಚಾರ್ಯರು, ಸಮಾಜದ ಒಳಿತಿಗಾಗಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಕೊಲ್ಲಿಪಾತಿಯಲ್ಲಿ ವಿವಿಧ ಸಮುದಾಯಗಳ 18 ಮಠಗಳ ನಿರ್ಮಿಸಿದ್ದಾರೆ. ಈಗಲೂ ಸಹ ಅವು ಕಾರ್ಯನಿರ್ವಹಿಸುತ್ತಿವೆ ಎಂದರು.

ಸಮಾರಂಭದಲ್ಲಿ ಮಳವಳ್ಳಿ ತಾಲೂಕು ಧನಗೂರು ಸಿಂಹಾಸನ ಸಂಸ್ಥಾನ ಮಠದ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಕೆ.ಆರ್.ಪೇಟೆ ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿ, ವಿಶೇಷ ಆಹ್ವಾನಿತರಾದ ಜಿಲ್ಲಾ ಬಸವ ಸಮಿತಿ ಅಧ್ಯಕ್ಷ ಎಂ.ಬಿ.ರಾಜಶೇಖರ್ ಇತರರು ಉಪಸ್ಥಿತರಿದ್ದರು.

ಸಿಎನ್‌ಸಿ ಅಧ್ಯಕ್ಷ, ಚಿತ್ರನಟಿ ರಶ್ಮಿಕಾ ಮಂದಣ್ಣ ವಿರುದ್ಧ ಮಂಡ್ಯ ಎಸ್ಪಿಗೆ ದೂರು

ಮಂಡ್ಯ,ಮಾ.13– ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಮತ್ತು ಚಿತ್ರನಟಿ ರಶ್ಮಿಕಾ ಮಂದಣ್ಣ ವಿರುದ್ಧ ವಿವಿಧ ಸಂಘಟನೆಗಳ ಮುಖಂಡರು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂದರ್ಭದಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಗಣಿಗ ಚಲನಚಿತ್ರೋತ್ಸವದಲ್ಲಿ ಚಿತ್ರರಂಗದ ಎಲ್ಲರೂ ಭಾಗಿಯಾಗಬೇಕು. ಅದೇ ರೀತಿ ಕನ್ನಡ ನಾಡು, ನುಡಿ, ಜಲ ವಿಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಹಲವರು ವಿಫಲರಾಗಿದ್ದಾರೆಂದು ಹೇಳಿಕೆ ನೀಡಿದ್ದರು, ಇದಕ್ಕೆ ಚಲನಚಿತ್ರ ನಿರ್ದೇಶಕ ಚಂದ್ರಚೂಡ್ ಆಕ್ಷೇಪ ವ್ಯಕ್ತಪಡಿಸಿದ್ದರು.

ಈ ಸಂದರ್ಭದಲ್ಲಿ ಕೊಡಗಿನ ಸಿಎನ್‌ಸಿ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ, ಚಿತ್ರನಟಿ ರಶ್ಮಿಕಾ ಮಂದಣ್ಣ ಹೆಸರು ಮುಂದಿಟ್ಟುಕೊಂಡು ಶಾಸಕರನ್ನು ತೇಜೋವಧೆ ಮಾಡಿದ್ದು, ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಲಾಗಿದೆ.

1.75 ಕೋ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಪಿ.ರವಿಕುಮಾರ್‌ಗೌಡ ಭೂಮಿಪೂಜೆ ನೆರವೇರಿಸಿದರು.

ಮಂಡ್ಯ,ಮಾ.13– ತಾಲೂಕಿನ ಬಸರಾಳು ಹೋಬಳಿಯ ಚೋಕನಹಳ್ಳಿ, ಹನಗನಹಳ್ಳಿ, ಬೇಬಿ, ಮಾಯಪ್ಪನಹಳ್ಳಿ ಹಾಗೂ ಚಿಕ್ಕಬಳ್ಳಿ ಗ್ರಾಮಗಳಲ್ಲಿ 1 ಕೋಟಿ 75 ಲಕ್ಷ ರೂ.ಗಳಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯ ಅನುದಾನದಲ್ಲಿ ಚೋಕನಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 50 ಲಕ್ಷ ರೂ., ಹನಗನಹಳ್ಳಿ ಗ್ರಾಮದ ಪರಿಶಿಷ್ಟಜಾತಿ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 25 ಲಕ್ಷ ರೂ., ಬೇಬಿ ಗ್ರಾಮದ ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 25 ಲಕ್ಷ ರೂ., ಮಾಯಪ್ಪನಹಳ್ಳಿ ಗ್ರಾಮದ ಪರಿಶಿಷ್ಟಜಾತಿ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 20 ಲಕ್ಷ ರೂ., ಚಿಕ್ಕಬಳ್ಳಿ ಗ್ರಾಮದ ಪರಿಶಿಷ್ಟ ಜಾತಿ, ಪಂಗಡ ಕಾಲೋನಿಗೆ 50 ಲಕ್ಷ ಅನುದಾನ ನೀಡುವ ಮೂಲಕ ಇನ್ನೊಂದು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸ ವ್ಯಕ್ತಪಡಿಸಿದರು.

ಇದೇ ತಿಂಗಳು 31ನೇ ತಾರೀಖಿನೊಳಗೆ ಮಂಡ್ಯ ನಗರದಲ್ಲಿ ಎಸ್‌ಸಿ ಎಸ್‌ಟಿ ಯೋಜನೆಯ ಅಡಿಯಲ್ಲಿ 8 ಕೋಟಿ ರೂ. ಗಳ ಅನುದಾನ ಮತ್ತು ಸಾಮಾನ್ಯ ಯೋಜನೆ ಅನುದಾನದಲ್ಲಿ ಗ್ರಾಮಾಂತರಕ್ಕಾಗಿ 10 ಕೋಟಿ ರೂ.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಮಂಡ್ಯ ನಗರಕ್ಕೆ 13 ಕೋಟಿ ಮಂಜೂರಾಗಿದ್ದು ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಬನ್ನೂರು ರಸ್ತೆ ಅಭಿವೃದ್ಧಿಗೆ 3 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು ಇನ್ನುಳಿದ 10 ಕೋಟಿ ಅನುದಾನದ ವಿವಿಧ ಕಾಮಗಾರಿಗೆ ಅತಿ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ವಿವಿಧ ಗ್ರಾಮಗಳ ಗ್ರಾಪಂ ಸದಸ್ಯರು, ಪಿಡಿಒಗಳು, ಅಧಿಕಾರಿಗಳು ಮತ್ತು ಗ್ರಾಮದ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ನಿಮಿಷಾಂಬ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾಗಿ ದಯಾನಂದ್ ಆಯ್ಕೆ



ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ದಯಾನಂದ್.

ಶ್ರೀರಂಗಪಟ್ಟಣ, ಮಾ.13– ಶ್ರೀ ನಿಮಿಷಾಂಬ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾಗಿ ಎಸ್.ಎನ್.ದಯಾನಂದ್ ಗುರುವಾರ ಅವಿರೋಧವಾಗಿ ಆಯ್ಕೆಯಾದರು.

ಗಂಜಾಂನ ಶ್ರೀ ನಿಮಿಷಾಂಬ ದೇವಾಲಯದ 9 ಮಂದಿ ಸಮಿತಿ ಸದಸ್ಯರ ಪೈಕಿ ಎಸ್.ಎನ್. ದಯಾನಂದ್ ಅವರನ್ನು ಒಮ್ಮತದಿಂದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ನಂತರ ನೂತನ ಅಧ್ಯಕ್ಷ ದಯಾನಂದ್ ಮಾತನಾಡಿ, ಪಟ್ಟಣದ ಶ್ರೀ ರಂಗನಾಥ ಸ್ವಾಮಿ ದೇವಾಲಯದಷ್ಟೆ ಗಂಗಾಧರೇಶ್ವರ ಸ್ವಾಮಿ ದೇವಾಲಯ ಪ್ರಸಿದ್ಧಿ ಹೊಂದಿದ್ದು, ಈ ಹಿಂದೆ ನಡುವಳೆಗಂಗಾಧರ ಎಂದೇ ಕರೆಯುತ್ತಿದ್ದರು. ದೇವಾಲಯದ ಸುತ್ತಲು ನದಿ ಹರಿಯುತ್ತಿತ್ತು, ಕೋಟೆ ನಿರ್ಮಿತವಾದ ನಂತರ ದೇವಸ್ಥಾನ ಪಟ್ಟಣದಲ್ಲಿ ಉಳಿದುಕೊಂಡಿದೆ. ಆ ದೇವಾಲಯವನ್ನು ಶ್ರೀ ನಿಮಿಷಾಂಬ ದೇವಾಲಯದ ವತಿಯಿಂದ ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲಾಗುವುದು. ಜೊತೆಗೆ ಭಕ್ತರ ಮೂಲಸೌಕರ್ಯ ಕುಡಿಯುವ ನೀರು, ಶೌಚಾಲಯ, ಬಟ್ಟೆ ಬದಲಾಯಿಸಿಕೊಳ್ಳುವರ ತಾತ್ಕಾಲಿಕ ಟೆಂಟ್‌ಗಳ ನಿರ್ಮಿಸುವುದ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುವುದು ಎಂದರು.

ಸರ್ಕಾರ ನದಿ ಬಳಿ ಸೋಪು, ಶಾಂಪು ಮಾರಾಟ ಮಾಡುವುದನ್ನ ನಿಷೇಧಿಸಿದ್ದು, ಭಕ್ತರು ಸಹ ಧಾರ್ಮಿಕವಾಗಿ ನದಿಯಲ್ಲಿ ಮುಳಗಿ ಬರಬೇಕೆ ವಿನಃ ಸೋಪು, ಶಾಂಪು ಬಳಸುವುದು, ನದಿಯಲ್ಲಿ ಬಟ್ಟೆಗಳನ್ನ ಬಿಟ್ಟು ಬರುವುದನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಲಾಗುವುದು ಎಂದು ಅವರು ತಿಳಿಸಿದರು.

ಈ ವೇಳೆ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಸಿ.ಬಿ.ಕೃಷ್ಣ ಸಮಿತಿ ಸದಸ್ಯರಾದ ಪಿ.ಬಾಲಸುಬ್ರಹ್ಮಣ್ಯ, ಟಿ.ಕೃಷ್ಣ, ಪೂರ್ಣಪ್ರಜ್ಞ ಮೂರ್ತಿ, ಎಸ್.ಕೃಷ್ಣ, ಭಾಗ್ಯಲಕ್ಷ್ಮಿ, ರಂಗಸ್ವಾಮಿ, ಸುಮಲತ, ಸೂರ್ಯನಾರಾಯಣ ಭಟ್ ಇತರರು ಇದ್ದರು.

ಅಂಬುಜಾಗೆ ಎರಡನೇ ಬಾರಿ ಒಲಿದ ಗ್ರಾಪಂ ಅಧ್ಯಕ್ಷ ಸ್ಥಾನ



ಕಿಕ್ಕೇರಿ: ಹೋಬಳಿಯ ಐಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಅಂಬುಜಾ ಉದಯಶಂಕರ್ ಎರಡನೇ ಬಾರಿ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷರಾಗಿದ್ದ ಎಚ್.ಕೆ.ಸುಧಾ ದೇವರಾಜು ತಮ್ಮ ಅಧ್ಯಕ್ಷ ಸ್ಥಾನಕ್ಕೆ ಒಡಂಬಡಿಕೆ ಸೂತ್ರದಂತೆ(ಒಳ ಒಪ್ಪಂದ) ರಾಜೀನಾಮೆ ನೀಡಲಾಗಿತ್ತು. ಗುರುವಾರ ಜರುಗಿದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಅಂಬುಜಾ ಉದಯಶಂಕರ್ ಹೊರತುಪಡಿಸಿ ಬೇರೆ ಯಾವುದೇ ಸದಸ್ಯರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯಾದರು.

ಚುನಾವಣಾಧಿಕಾರಿಯಾಗಿ ಕೃಷಿ ಇಲಾಖೆ ತಾ. ಸಹಾಯಕ ನಿರ್ದೇಶಕ ಸಂತೋಷ್ ಕುಮಾರ್, ತಾ.ಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಒ ಬಿ.ಎಸ್.ವಿಜಯ್, ಕಾರ್ಯದರ್ಶಿ ಪ್ರಭುನಂದ ಕರ್ತವ್ಯ ನಿರ್ವಹಿಸಿದರು.

ಅಂಬುಜಾ ಅವರಂತೆ ಇವರ ಪತಿ ಉದಯಶಂಕರ್ ಅವರು ಕೂಡ ಐಕನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ 2 ಬಾರಿ ಆಯ್ಕೆಯಾಗಿರುವುದು ಗ್ರಾಪಂ ಇತಿಹಾಸದಲ್ಲಿ ವಿಶೇಷವಾಗಿದೆ.

ಉಪವಿಭಾಗಾಧಿಕಾರಿಯಿಂದ ಅಪಮಾನ ಆರೋಪ

ಕಲಾಪದಿಂದ ಹೊರಗುಳಿದು ವಕೀಲರ ಪ್ರತಿಭಟನೆ



ಪಾಂಡವಪುರ ಉಪವಿಭಾಗಾಧಿಕಾರಿ ವಿರುದ್ಧ ವಕೀಲರು ಪ್ರತಿಭಟನೆ ನಡೆಸಿದರು.

ನಾಗಮಂಗಲ: ಪಾಂಡವಪುರ ಉಪವಿಭಾಗಾಧಿಕಾರಿ ವಕೀಲರೊಬ್ಬರ ಮೇಲೆ ದೌರ್ಜನ್ಯ ನಡೆಸುವ ಮೂಲಕ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ಗುರುವಾರ ನಾಗಮಂಗಲದ ವಕೀಲರುಗಳು ಅಧ್ಯಕ್ಷ ಮಹದೇವ ಅವರ ನೇತೃತ್ವದಲ್ಲಿ ನ್ಯಾಯಾಲಯದ ಕಾರ್ಯ ಕಲಾಪಗಳಿಂದ ಹೊರಗುಳಿದು ಮಿನಿ ವಿಧಾನ ಸೌಧದ ಮುಂದೆ ಪ್ರತಿಭಟನೆ ನಡೆಸಿದರು.

ಕೆಆರ್.ಪೇಟೆ ತಾಲೂಕಿನ ವಕೀಲ ಅಮಿತ್ ಪ್ರಕರಣವೊಂದರ ಸಂಬಂಧ ಮಾತುಕತೆ ನಡೆಸಲು ಪಾಂಡವಪುರ ಉಪವಿಭಾಗಾಧಿಕಾರಿಯವರ ಬಳಿ ಹೋಗಿದ್ದ ವೇಳೆ ಪೊಲೀಸರನ್ನು ಕರೆಸಿ ಆ ವಕೀಲರನ್ನು ಕಸ್ಟಡಿಗೆ ಕೊಟ್ಟು ಸುಮಾರು 8 ಘಂಟೆಗಳ ಕಾಲ ಠಾಣೆಯಲ್ಲಿರಿಸಿ ಅಪಮಾನ ಮಾಡಿದ್ದಾರೆ. ಅಲ್ಲೇ ಇದ್ದ ರೈತ ಸಂಘದ ಸದಸ್ಯರು ಮತ್ತು ಸಾರ್ವಜನಿಕರು ಪ್ರತಿಭಟನೆ ನಡೆಸಿ ಅಮಿತ್ ಅವರನ್ನು ಕಸ್ಟಡಿಯಿಂದ ಹೊರಗೆ ಕರೆತರುವಲ್ಲಿ ಯಶಸ್ವಿಯಾಗಿದ್ದಾರೆಂದು ಅಧ್ಯಕ್ಷ ಮಹದೇವ್ ತಿಳಿಸಿದರು.

ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ತಾಸೀನ್, ಉಮೇಶ್ ಹಡೇನಹಳ್ಳಿ, ರಾಜೇಶ್ವರಿ, ವಕೀಲರುಗಳಾದ ಪ್ರಭುಸ್ವಾಮಿ, ಗುರುಪ್ರಸಾದ್, ವಿವೇಕಾನಂದ, ಧನಂಜಯ್, ಮಂಜುಳ,ಮಹದೇವ,ಶಿವಲಿಂಗಯ್ಯ, ಮೋಹನ್‌ರಾಜ್, ರುಕ್ಮಿಣಿ ಕೆಂಪೇಗೌಡ, ಹರೀಶ್, ಮುಂತಾದವರಿದ್ದರು.

ಸಂತೇಬಾಚಹಳ್ಳಿ ಸೊಸೈಟಿ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ



ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮನ್‌ಮುಲ್ ನಿರ್ದೇಶಕ ಡಾಲುರವಿ ಬೆಂಬಲಿತ ಅಭ್ಯರ್ಥಿ ಬಿ.ಮೋಹನ್, ಉಪಾಧ್ಯಕ್ಷರಾದ ಹಡವನಹಳ್ಳಿ ಕುಮಾರ್ ಅವರನ್ನು ಸಂಘದ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಕೆಆರ್.ಪೇಟೆ, ಮಾ.13– ತಾಲೂಕಿನ ಸಂತೇಬಾಚಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮನ್‌ಮುಲ್ ನಿರ್ದೇಶಕ ಡಾಲುರವಿ ಬೆಂಬಲಿತ ಅಭ್ಯರ್ಥಿ ಬಿ.ಮೋಹನ್, ಉಪಾಧ್ಯಕ್ಷರಾಗಿ ಹಡವನಹಳ್ಳಿ ಕುಮಾರ್ ಅವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಸಂಘದ ನಿರ್ದೇಶಕರಾದ ಹಡವನಹಳ್ಳಿ ಗೋಪಾಲ್, ಛಾಯಾಕೃಷ್ಣ, ಲೋಕನಹಳ್ಳಿ ಎಂ.ಪುನೀತ್, ಹುಬ್ಬನಹಳ್ಳಿ ದಶರಥ, ದೊಡ್ಡಕ್ಯಾತನಹಳ್ಳಿ ಮಂಜೇಗೌಡ, ಎನ್.ಲಕ್ಷ್ಮೀ ಮಂಜೇಗೌಡ, ಹರೀಶ್, ಹುಬ್ಬನಹಳ್ಳಿ ಸುರೇಶ್, ಹಡವನಹಳ್ಳಿ ಕುಮಾರ್, ಲೋಕನಹಳ್ಳಿ ಎಲ್.ಎಸ್. ದಿನೇಶ್, ಹಡವನಹಳ್ಳಿ ಮಹಾದೇವಪ್ಪ, ಮುಖಂಡರಾದ ಹುಬ್ಬನಹಳ್ಳಿ ಕುಮಾರಸ್ವಾಮಿ, ಎಸ್.ಹೆಚ್.ಸುರೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಾಳಗೂರು ಜಗದೀಶ್, ಬಟ್ಟೆ ಅಂಗಡಿ ಮರೀಗೌಡ, ಡಿ.ಪಿ.ಪರಮೇಶ್, ಅರವಿಂದ್, ಉದ್ಯಮಿ ಹಳ್ಳಿಮನೆ ಯೋಗೇಶ್, ಗಿರೀಶ್, ಕೆ.ಎಸ್.ನಾರಾಯಣ್, ಮಂಜು, ಹುಬ್ಬನಹಳ್ಳಿ ಸೋಮಣ್ಣ, ಉಮೇಶ್, ಕ್ರಾಸ್ ಗಣೇಶ್, ಪಚ್ಚಿ, ನಾಗರಾಜು, ಮಾಳಗೂರು ಉಮೇಶ್, ಗೆಳೆಯರ ಬಳಗದ ಕಾರ್ಯದರ್ಶಿ ಎಸ್.ಹೆಚ್. ಕೃಷ್ಣ ಸೇರಿದಂತೆ ಸೊಸೈಟಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಮುಖಂಡರು ಹಾಗೂ ಯುವಕರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಪ್ರಕರಣ ದಾಖಲು

ಏನು ಮಾಡ ಬೇಕಿತ್ತು ಎಂಬ ಬಗ್ಗೆ ರನ್ಯಾ ರಾವ್‌ಗೆ ಮಾಹಿತಿ ನೀಡಲಾಗಿತ್ತು. ಚಿನ್ನ ತೆಗೆದುಕೊಂಡು ಟೋಲ್‌ಗೇಟ್ ಬಳಿಗೆ ಪೊಲೀಸ್ ಕಾರ್‌ನಲ್ಲಿ ಬರಬೇಕು. ನಂತರ ಸಿಗ್ನಲ್ ಪಾಸ್ ಮಾಡಿದ ಮೇಲೆ ಸರ್ವಿಸ್ ರೋಡ್‌ನಲ್ಲಿ ಆಟೋ ಹತ್ತಬೇಕು. ಚಿನ್ನವನ್ನು ಆಟೋದಲ್ಲಿಯೇ ಇಟ್ಟು ಹೋಗಬೇಕು ಎಂಬ ನಿರ್ದೇಶನ ವಿತ್ತು. ಆಟೋ ನಂಬರ್ ಸಹ ನೀಡಿರಲಿಲ್ಲ. ಬದಲಿಗೆ ಆಟೋದವನೇ ಖುದ್ದು ಸಿಗ್ನಲ್ ಪಾಸ್ ಮಾಡಿ, ಆಟೋ ಏರಿ ಗೋಲ್ಡ್ ಇಡುವಂತೆ ಸೂಚಿಸಲಾಗಿತ್ತು. ಇಷ್ಟಕ್ಕೆ ತಮ್ಮ ಟಾಸ್ಕ್ ಮುಗಿಯು ತ್ತಿತ್ತು ಎಂದು ತನಿಖಾಧಿ ಕಾರಿ ಮುಂದೆ ರನ್ಯಾರಾವ್ ಹೇಳಿಕೆ ನೀಡಿ ದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ನಿರ್ಧಾರ ಇನ್ನು ರಾಜ್ಯ ಸರ್ಕಾರದ್ದು

ರಸ್ತೆ ಅಗಲೀಕರಣದ ಉದ್ದೇಶಕ್ಕಾಗಿ ಗುರುತಿಸಲಾದ ಬೆಂಗಳೂರು ಅರಮನೆ ಭಾಗದ ಮೌಲ್ಯವನ್ನು ಅಕ್ಕಪಕ್ಕದ ಪ್ರದೇಶಗಳಲ್ಲಿ ಹಾಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಸಾರವಾಗಿ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು ಗಳನ್ನು ಮಂಜೂರು ಮಾಡುವಂತೆ ನಿರ್ದೇಶಿಸಿರುವುದರಿಂದ, ಸುಪ್ರೀಂ ಕೋರ್ಟ್ ತೀರ್ಪು ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಹಾಗೂ ಬೆಂಗಳೂರು ನಗರ ಯೋಜನೆಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರಲಿದೆ. ಇದಕ್ಕೆ ಸಂಬಂಧಿಸಿದಂತೆ ಸಿವಿಲ್ ಅಪೀಲುಗಳು ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವುದರಿಂದ ಮತ್ತು ಅಭಿವೃದ್ಧಿ ಹಕ್ಕುಗಳ ವರ್ಗಾವಣೆಯು ವಿಪರ್ಯಾಯಗೊಳ್ಳದಿರುವ ಪ್ರಕ್ರಿಯೆಯಾಗಿದ್ದು, ಅದು ರಾಜ್ಯದ ಮೇಲೆ ತೀವ್ರ ಸಂಕೀರ್ಣ ಪರಿಣಾಮ ಬೀರುವುದ ರಿಂದ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆ ಎಂದು ಅಧಿನಿಯಮದಲ್ಲಿ ಪ್ರಾಸ್ತಾವಿಕವಾಗಿ ಹೇಳಲಾಗಿದೆ. ಮತ್ತು ಈ ಅಧಿನಿಯಮವು 2025ರ ಜ.27 ರಿಂದ ಜಾರಿಗೆ ಬಂದಿರುವುದಾಗಿ ತಿಳಿಸಲಾಗಿದೆ. ಯಾವುದೇ ಮೂಲ ಸೌಕರ್ಯ ಯೋಜನೆ ಉದ್ದೇಶಕ್ಕಾಗಿ ಬೆಂಗಳೂರು ಅರಮನೆಯ ಯಾವುದೇ ಭಾಗವನ್ನು ಬಳಸಲು ಈ ಅಧಿನಿಯಮ ಅಧಿಕಾರ ಹೊಂದಿರುತ್ತದೆ. ಯಾವುದೇ ನ್ಯಾಯಾಲಯದ, ಯಾವುದೇ ತೀರ್ಪು ಅಥವಾ ಆದೇಶ ಹಾಗೂ ರಾಜ್ಯ ಸರ್ಕಾರ ಈ ಮೊದಲು ತೆಗೆದುಕೊಂಡ ಯಾವುದೇ ತೀರ್ಮಾನದಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರವು ಮೂಲ ಸೌಕರ್ಯ ಯೋಜನೆಗೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮುಂದುವರೆಯದಿರಲು ಅಧಿಕಾರ ಹೊಂದಿರತಕ್ಕದ್ದು. ತತ್ಕಾಲದಲ್ಲಿ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಅನುಸಾರ ರಾಜ್ಯ ಸರ್ಕಾರ ಕ್ಷೇಮುದಾರರಿಗೆ ನಷ್ಟ ಪರಿಹಾರ ಪಾವತಿಸತಕ್ಕದ್ದು. ಈ ಅಧಿನಿಯಮ ಜಾರಿಗೆ ಬರುವುದಕ್ಕೆ ಮೊದಲು ಮತ್ತು ಯಾವುದೇ ನ್ಯಾಯಾಲಯ ಯಾವುದೇ ತೀರ್ಪು ಅಥವಾ ಆದೇಶವನ್ನು ಪಾಲಿಸುವಲ್ಲಿ ರಾಜ್ಯ ಸರ್ಕಾರದ ಯಾವುದೇ ನಿರ್ಧಾರದ ಅನುಸಾರ ನಷ್ಟ ಪರಿಹಾರವನ್ನು ಈಗಾಗಲೇ ಪಾವತಿಸಿದ್ದರೆ, ಈ ಅಧಿನಿಯಮದಂತೆ ಅದು ಅನ್ವಯವಾಗತಕ್ಕದ್ದಲ್ಲ.

ಅಧಿನಿಯಮಕ್ಕೆ ವಿರುದ್ಧವಾಗಿ ಯಾವುದೇ ನ್ಯಾಯಾಲಯದ ತೀರ್ಪು ಅಥವಾ ಆದೇಶ ಹಾಗೂ ತತ್ಕಾಲದಲ್ಲಿ ಜಾರಿ ಇರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ ನಷ್ಟ ಪರಿಹಾರದ ಉದ್ದೇಶಕ್ಕಾಗಿ ಭೂಮಿಯ ಮಾರ್ಗಸೂಚಿ ಮೌಲ್ಯವು ಈ ಅಧಿನಿಯಮದ ಅನುಸಾರ ಇರತಕ್ಕದ್ದು. ನಷ್ಟ ಪರಿಹಾರದ ಲೆಕ್ಕಾಚಾರವು 1996ರಡಿ ಗೊತ್ತುಪಡಿಸಿದ ದಿನಾಂಕದಿಂದ ಕರ್ನಾಟಕದ ಸ್ಟಾಂಪ್ ಅಧಿನಿಯಮ 1957ರ 45–ಬಿ ಪ್ರಕರಣದಡಿ ಮಾರ್ಗಸೂಚಿ ಮೌಲ್ಯವೆಂದು ಭಾವಿಸತಕ್ಕದ್ದು ಎಂದು ಅಧಿನಿಯಮದಲ್ಲಿ ತಿಳಿಸಲಾಗಿದೆ. ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪು ಏನೇ ಇದ್ದರೂ ಈ ಅಧಿನಿಯಮದ ಮೂಲಕ ನಿಯಮಿಸಲಾದುದಕ್ಕೆ ಹೊರತಾಗಿ ಕ್ಷೇಮುದಾರರು ಯಾವುದೇ ಇತರ ನಷ್ಟ ಪರಿಹಾರದ ಹಕ್ಕನ್ನು ಹೊಂದಿರತಕ್ಕದ್ದಲ್ಲ. ಕ್ಷೇಮುದಾರರು ಮತ್ತು ಸರ್ಕಾರದ ನಡುವೆ ವಿವಾದಗಳಾದಾಗ ರಾಜ್ಯ ಸರ್ಕಾರವು ಈ ಅಧಿನಿಯಮದಡಿ ನಿರ್ಧರಿಸಬಹುದಾದ ನಷ್ಟ ಪರಿಹಾರವನ್ನು ಕಮಿಷ್ನರ್ ಮುಂದೆ ಠೇವಣಿ ಇಡತಕ್ಕದ್ದು. ಸಿವಿಲ್ ನ್ಯಾಯಾಲಯದ ಅಂತಿಮ ಡಿಕ್ರಿ ದೃಢೀಕೃತ ಪ್ರತಿಯನ್ನು ಕಮಿಷ್ನರ್‌ಗೆ ಒದಗಿಸದೇ ಕ್ಷೇಮುದಾರರು ಕಮಿಷ್ನರ್ ನಿಂದ ಯಾವುದೇ ನಷ್ಟ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ಸದ್ಭಾವನೆಯಿಂದ ಏನನ್ನಾದರೂ ಮಾಡಿರುವ ಅಥವಾ ಮಾಡಲು ಉದ್ದೇಶಿಸಿದ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಅದರ ಅಂಗ ಮಾಧ್ಯಮಗಳ ವಿರುದ್ಧ ಯಾವುದೇ ರೀತಿಯ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣಗಳನ್ನು ಹೂಡತಕ್ಕದ್ದಲ್ಲ. ಯಾವುದೇ ನ್ಯಾಯಾಲಯದ ಆದೇಶ ಅಥವಾ ತೀರ್ಪು ಏನೇ ಇದ್ದರೂ ಈ ಅಧಿನಿಯಮದ ಅನುಸಾರ ಸದ್ಭಾವನೆಯಿಂದ ಏನನ್ನಾದರೂ ಮಾಡಿರುವ ಅಥವಾ ಮಾಡಲು ಉದ್ದೇಶಿಸಿದ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಅಂಗ ಮಾಧ್ಯಮಗಳು ಶಿಕ್ಷೆಗೆ ಹೊಣೆಯಾಗತಕ್ಕದ್ದಲ್ಲ ಎಂದು ಅಧಿನಿಯಮದಲ್ಲಿ ತಿಳಿಸಲಾಗಿದೆ.

ಹೈಕಮಾಂಡ್ ಬ್ರೇಕ್

ಮುಂದೂಡಿದ್ದಾರೆ. ಬುಧವಾರ ತಂಡದ ಪ್ರಮುಖರ ಸಭೆ ನಡೆಸಿದ್ದ ಯತ್ನಾಳ್ ಹಾಗೂ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಲಿಂಗಾಯತ ಸಮಾವೇಶ ಸದ್ಯಕ್ಕೆ ನಡೆಸದಿರುವ ತೀರ್ಮಾನಕ್ಕೆ ಬಂದಿದ್ದಾರೆ.

ಈ ನಡುವೆ ವಿಜಯೇಂದ್ರಗೆ ಕೊಂಚ ಹಿನ್ನಡೆಯಾಗುವ ವಿದ್ಯಮಾನ ನಡೆದಿದೆ. ರಾಜ್ಯಾಧ್ಯಕ್ಷ ಸ್ಥಾನದಲ್ಲಿ ವಿಜಯೇಂದ್ರರನ್ನು ಮುಂದುವರೆಸದಂತೆ ನೇರವಾಗಿ ಅಮಿತ್ ಶಾ ಅವರಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಮಾ. 11ರಂದು ಅರವಿಂದ ಲಿಂಬಾವಳಿ, ಅಮಿತ್ ಶಾ ಬುಲಾವ್ ಮೇರೆಗೆ ದೆಹಲಿಗೆ ಹೋಗಿದ್ದರು. ದೆಹಲಿಯ ಸಂಸತ್ ಭವನದಲ್ಲಿ ಸುಮಾರು 15 ನಿಮಿಷಗಳ ಕಾಲ ಅಮಿತ್ ಶಾ ಜತೆ ಅರವಿಂದ ಲಿಂಬಾವಳಿ ಮಾತುಕತೆ ನಡೆಸಿ, ರಾಜ್ಯ ಬಿಜೆಪಿಯ ಪ್ರಸಕ್ತ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದಾರೆ. ವಿಜಯೇಂದ್ರರನ್ನು ರಾಜ್ಯಾಧ್ಯಕ್ಷರಾಗಿ ಮುಂದುವರೆಸದಂತೆ ಕಾರಣ ಸಹಿತ ದೂರು ಕೊಟ್ಟು ಬಂದಿದ್ದಾರೆ ಎನ್ನಲಾಗಿದೆ. ರಾಜ್ಯ ಬಿಜೆಪಿಯತ್ತ ಹೈಕಮಾಂಡ್ ಈಗ ಗಮನ ಕೊಡುತ್ತಿರುವುದು ನಿಷ್ಠ ಬಿಜೆಪಿಗರಲ್ಲಿ ಸಮಾಧಾನ ತಂದಿದೆ.

ಪೊಲೀಸರ ಬಂಧನ

ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅಕ್ರಮವಾಗಿ ಮೊಬೈಲ್ ಕರೆಗಳ ವಿವರ (ಸಿಡಿಆರ್)ವನ್ನು ವಂಚನೆ ಪ್ರಕರಣದ ಆರೋಪಿ ಐಶ್ವರ್ಯಾಗೌಡ ಪಡೆದ ಕೇಸ್‌ನ ಸಂಬಂಧ ರಾಮನಗರ ಜಿಲ್ಲೆಯ ಪೊಲೀಸ್ ಕಾನ್‌ಸ್ಟೇಬಲ್ ಸೇರಿದಂತೆ ಇಬ್ಬರನ್ನು ವಿಜಯನಗರ ಉಪ ವಿಭಾಗದ ಪೊಲೀಸರು ಬಂಧಿಸಿ ದ್ದಾರೆ. ಪ್ರಸ್ತುತ ನಗರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ತನಿಖೆ ಸಲುವಾಗಿ ಈ ಇಬ್ಬರು ಆರೋಪಿಗಳನ್ನು ಆರು ದಿನಗಳ ಕಾಲ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಐಶ್ವರ್ಯ ವಿರುದ್ಧ ಐಪಿಸಿಯ ಸೆಕ್ಷನ್ 120 ಬಿ (ಕ್ರಿಮಿನಲ್ ಪಿತೂರಿಗಾಗಿ ಶಿಕ್ಷೆ) ಮತ್ತು ಸೆಕ್ಷನ್ 409 (ಸಾರ್ವಜನಿಕ ಸೇವಕರಿಂದ ಕ್ರಿಮಿನಲ್ ನಂಬಿಕೆ ಉಲ್ಲಂಘನೆ) ಜೊತೆಗೆ ಐಟಿ ಕಾಯ್ದೆಯ ಸೆಕ್ಷನ್ 72 ಮತ್ತು ದೂರಸಂಪರ್ಕ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಎಸಿಪಿ ಚಂದನ್ ಕುಮಾರ್ ತಂಡ ನಿಯೋಜನೆ: ಸಿಡಿಆರ್ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ವಿಜಯನಗರ ಉಪ ವಿಭಾಗದ ಎಸಿಪಿ ಚಂದನ್ ಕುಮಾರ್ ನೇತೃತ್ವದ ತಂಡವು, ಐಶ್ವರ್ಯಗೌಡ ಳಿಂದ ಜಪ್ತಿಯಾಗಿದ್ದ ಮೊಬೈಲ್‌ಗಳನ್ನು ಪರಿಶೀಲಿಸಿದಾಗ ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿದೆ. ಕೊನೆಗೆ ತಾಂತ್ರಿಕ ಮಾಹಿತಿ ಆಧರಿಸಿ ಸುನೀಲ್ ಹಾಗೂ ಮಧ್ಯವರ್ತಿ ಪವನ್‌ನನ್ನು ಎಸಿಪಿ ತಂಡ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ತು–ಮಹತ್ತು ಎರಡು ದೃಷ್ಟಿಯಲೂ 'ಕಾನೂರು ಹೆಗ್ಗಡತಿ' ಮಹಾನ್ ಕಾದಂಬರಿ

ಮೈಸೂರು ವಿವಿ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಆರ್.ರಾಮಕೃಷ್ಣ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಚಿತ್ರಕೂಟ ಸಭಾಂಗಣದಲ್ಲಿ ಗುರುವಾರ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಆರ್.ರಾಮಕೃಷ್ಣ ಮಾತನಾಡಿದರು.

ಮೈಸೂರು, ಮಾ.13(ಪಿಎಂ)– ಬೃಹತ್ತು ಮತ್ತು ಮಹತ್ತು ಎರಡು ದೃಷ್ಟಿಯಿಂದಲೂ 'ಕಾನೂರು ಹೆಗ್ಗಡತಿ' ಮಹಾನ್ ಕಾದಂಬರಿಯಾಗಿದೆ ಎಂದು ಮೈಸೂರು ವಿವಿ ಮಾನಸ ಗಂಗೋತ್ರಿಯ ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಆರ್. ರಾಮಕೃಷ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಚಿತ್ರಕೂಟ ಸಭಾಂಗಣದಲ್ಲಿ ಸಂಸ್ಥೆ ಮತ್ತು ವಿವಿಯ ಕುವೆಂಪು ಕಾವ್ಯಾಧ್ಯಯನ ಪೀಠದ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಕಾನೂರು ಹೆಗ್ಗಡತಿ ಕಾದಂಬರಿ ಸ್ವರೂಪ' ಕುರಿತು ಮಾತನಾಡಿದರು.

ಕುವೆಂಪು ಮತ್ತು ಪ್ರಕೃತಿಗೂ ನಿಕಟ ಸಂಬಂಧ ಹಾಗಾಗಿ ಈ ಕಾದಂಬರಿಯಲ್ಲಿಯೂ ಕುವೆಂಪು ಪ್ರಾಕೃತಿಕ ಸೌಂದರ್ಯ ವರ್ಣಿಸಿದ್ದಾರೆ. ಇಲ್ಲಿ ಮಲೆನಾಡಿನ ಚಿತ್ರಣವು ಚಿತ್ತಾಕರ್ಷಕವಾಗಿ ಮೂಡಿಬಂದಿದೆ. ಜೊತೆಗೆ ಇಲ್ಲಿನ ಪ್ರತಿಯೊಂದು ಅಂಶದಲ್ಲೂ ಕಾದಂಬರಿಕಾರರ ಸೂಕ್ಷ್ಮ ಹಾಗೂ ತೀಕ್ಷ್ಣ ದೃಷ್ಟಿ ಗೋಚರಿಸುತ್ತದೆ ಎಂದು ತಿಳಿಸಿದರು.

ಬದುಕಿಗೆ ಮಾರ್ಗದರ್ಶನ ನೀಡುವ ಅಂಶಗಳು ಕಾದಂಬರಿಯಲ್ಲಿ ಒಳಗೊಂಡಿವೆ. ಇದೊಂದು ಬದುಕಿನ ಪ್ರತಿಬಿಂಬ. ಬದುಕು ಯಾವ ರೀತಿ ಇದೆ ಎಂಬುದನ್ನು ತಿಳಿಸುವುದಷ್ಟೇ ಅಲ್ಲದೆ, ಉತ್ತಮ ಬದುಕು ಹೇಗೆ ಇರಬೇಕೆಂಬ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿಕೊಡುತ್ತದೆ. ಆದರ್ಶ, ಕನಸು, ವಾಸ್ತವಗಳ ಮಧುರ ಮಿಲನವಾದಾಗ, ಉತ್ತಮ ಕೃತಿ ಹೊರಹೊಮ್ಮುತ್ತದೆ. ಅಂತಹ ಸಾಲಿನ ಕಾದಂಬರಿ, 'ಕಾನೂರು ಹೆಗ್ಗಡತಿ' ಆಗಿದೆ ಎಂಬುದು ವಿಮರ್ಶಕರ ಮಾತು ಎಂದರು.

ಕಾದಂಬರಿಯಲ್ಲಿ ಆದರ್ಶ ಮತ್ತು ವಾಸ್ತವ ಎರಡೂ ಇದೆ. ಆದರ್ಶ ಒಳಗೊಂಡ ದೃಷ್ಟಿಯಿಂದ ಕಾದಂಬರಿ ಸೋಲುತ್ತದೆ ಎಂದು ಹೇಳುವ ವಿಮರ್ಶಕರೂ ಇದ್ದಾರೆ. ಆದರೆ ಅದನ್ನೆಲ್ಲಾ ಮೀರಿ ಈ ಕಾದಂಬರಿ ನಿಲ್ಲುತ್ತದೆ. ಏಕೆಂದರೆ ಇಲ್ಲಿರುವ ಅಂಶಗಳು ಸಾರ್ವತ್ರಿಕವಾಗಿವೆ. ಯಾವುದೇ ಸಮಾಜ, ಸಂಸ್ಕೃತಿ ತೆಗೆದುಕೊಂಡರೂ ಈ ಕಾದಂಬರಿಯಲ್ಲಿರುವ ಎಲ್ಲಾ ವಿಚಾರಗಳು ಇರುವಂತದ್ದೇ. ಆ ದೃಷ್ಟಿಯಿಂದ ಇದನ್ನು ಪ್ರಾದೇಶಿಕ ಸ್ವರೂಪದ ಕಾದಂಬರಿ ಎಂದು ಕರೆಯುವುದು ಸರಿಯಲ್ಲ ಎಂದು ವಿಮರ್ಶಕರು ಪ್ರಾತಿಪಾದಿಸಿದ್ದಾರೆ ಎಂದು ತಿಳಿಸಿದರು.

ವರ್ಗೀಕರಿಸುವುದು ತಪ್ಪೆಂದಿದ್ದ ಕುವೆಂಪು: ಇದು ಉತ್ತಮ ಹಾಗೂ ಶ್ರೇಷ್ಠ ಕಾದಂಬರಿ. ಕುವೆಂಪು ಅವರನ್ನು ಒಮ್ಮೆ ನಾನು ಭೇಟಿಯಾದಾಗ, ಅವರು ಹೇಳಿದ್ದು ನೆನಪಿದೆ. ಕಾದಂಬರಿಯನ್ನು ವಿವಿಧ ಪ್ರಕಾರಗಳಾಗಿ ವರ್ಗೀಕರಿಸುವುದು ತಪ್ಪೆಂದು ಅವರು ಹೇಳಿದ್ದರು. ಕಾದಂಬರಿ ಬರೆಯಬೇಕಾದಾಗ, ಅದರಲ್ಲಿ ಎಲ್ಲವೂ ಒಳಗೊಂಡಿರುತ್ತದೆ. ಒಂದು ಸಂಸ್ಕೃತಿ ದಾಖಲಿಸುವಾಗ ಅದರಲ್ಲಿ ಇತಿಹಾಸ, ಭೂಗೋಳಿಕ ವ್ಯಾಪ್ತಿ ಇರುತ್ತದೆ. ಜೊತೆಗೆ ಅದರಲ್ಲಿ ದ್ವೇಷ, ಕ್ರೌರ್ಯ, ಅಸೂಹೆ, ಈರ್ಷೆ ಎಲ್ಲವೂ ಒಳಗೊಂಡಿರುತ್ತದೆ. ಆ ದೃಷ್ಟಿಯಿಂದ ಯಾವುದೇ ಕಾದಂಬರಿಯನ್ನು ಪ್ರಾದೇಶಿಕ, ಚಾರಿತ್ರಿಕ, ಪೌರಾಣಿಕ ಎಂದು ವರ್ಗೀಕರಿಸುವುದು ಬೇಡವೆಂದು ಕುವೆಂಪು ಹೇಳಿದ್ದರು ಎಂದು ಸ್ಮರಿಸಿದರು.

ಈಗ ವರ್ಗೀಕರಿಸಲಾಗುತ್ತಿದೆ: ಕಾದಂಬರಿಯನ್ನು ಈಗ ಚಾರಿತ್ರಿಕ, ಪೌರಾಣಿಕ, ಕೌಟುಂಬಿಕ ಇತ್ಯಾದಿಯಾಗಿ ವರ್ಗೀಕರಿಸಲಾಗುತ್ತಿದೆ. ಹೀಗೆ ವರ್ಗೀಕರಿಸುವುದನ್ನು ಕುವೆಂಪು ಒಪ್ಪುತ್ತಿರಲಿಲ್ಲ. ಮಲೆನಾಡಿನ ಜೀವನ ಚಿತ್ರಿಸಿರುವುದರಿಂದ 'ಕಾನೂರು ಹೆಗ್ಗಡತಿ'ಯು ಪ್ರಾದೇಶಿಕ ಕಾದಂಬರಿ ಎಂದು ಕೆಲ ವಿಮರ್ಶಕರು ವರ್ಗೀಕರಿಸಿದ್ದಾರೆ. ಆದರೆ ಇದರಲ್ಲಿ ಸಾರ್ವತ್ರಿಕತೆಯೂ ಇರುವುದರಿಂದ ಪ್ರಾದೇಶಿಕವೆಂದು ಕರೆಯುವುದು ತಪ್ಪು ಎಂಬುದು ಹಲವು ವಿಮರ್ಶಕರ ವಾದವಾಗಿದೆ ಎಂದರು.

ಕಾನೂರು ಹೆಗ್ಗಡತಿ ಬದುಕು ಹೇಗೆ ಇರಬೇಕೆಂಬುದನ್ನು ಸೂಕ್ಷ್ಮವಾಗಿ ತಿಳಿಸಿಕೊಡುತ್ತದೆ. ಓಬಯ್ಯ ಎಂಬ ಇಲ್ಲಿನ ಪಾತ್ರ ಗಮನಿಸಿದರೆ, ಅವನು ಕೈಗೊಂಡ ನಿರ್ಧಾರಗಳು, ಹಳ್ಳಿಯಲ್ಲಿ ಅವನು ಉಳಿದು ಮಾಡುವ ಸುಧಾರಣೆಗಳು, ವ್ಯವಸಾಯಕ್ಕೆ ತೊಡಿಕೊಳ್ಳುವುದು ಹಾಗೂ ಜನರ ಬದುಕನ್ನು ಉತ್ತಮವಾಗಿಸುವಲ್ಲಿ ಅವನ ಶ್ರಮ ಗೋಚರಿಸುತ್ತದೆ. ಭಾಷೆ ದೃಷ್ಟಿಯಿಂದ ಗಮನಿಸಿದರೆ, ಕುವೆಂಪು ಅವರು ಗ್ರಂಥಸ್ಥ ಭಾಷೆ ಹಾಗೂ ನಿರೂಪಣಾ ಶೈಲಿ ಬಳಸಿರುವುದು ಕಂಡುಬರುತ್ತದೆ. ಆದರೆ ಪಾತ್ರಗಳ ಸಂಭಾಷಣಾ ಸನ್ನಿವೇಶದಲ್ಲಿ ಮಾತ್ರ, ಆಡುಮಾತುಗಳನ್ನು ಬಳಸಿದ್ದಾರೆ. ಜೊತೆಗೆ ಗ್ರಂಥಸ್ಥ ರೂಪ ಹಾಗೂ ಸಂಸ್ಕೃತ ಹೆಚ್ಚು ಬಳಕೆಯಾಗಿದೆ ಎಂದು ವಿವರಿಸಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಸೇರಿದಂತೆ ಸಂಸ್ಥೆಯ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

ಹುದ್ದೆಗೆ ನೇಮಕಾತಿ

ವರ್ಗಗಳ ಇಲಾಖೆ ದಾಖಲಾತಿ ಒದಗಿಸುವ ಸಮಸ್ಯೆಯಿಂದಾಗಿ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. 1,292 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಒಂದೇ ದಿನ ಕೌನ್ಸಿಲಿಂಗ್ ನಡೆಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಸರ್ಕಾರಿ ಕಾಲೇಜುಗಳಲ್ಲಿ ಸಿಬ್ಬಂದಿ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಘವೇಂದ್ರ ಹಿಟ್ನಾಳ್ ಕೆ. ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೊಸ ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಿ ವರದಿ ನೀಡಲು ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ, ಸಮಿತಿ ವರದಿಯನ್ನಾಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಒಟ್ಟು 18 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮಂಜೂರಾಗಿವೆ, 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿವೆ.

ಎಂಜಿನಿಯರಿಂಗ್ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇವೆ, 2 ಸಾವಿರ ಹುದ್ದೆಗಳ ಭರ್ತಿಗೆ ಬಜೆಟ್‌ನಲ್ಲಿ ಅವಕಾಶ ಮಾಡಿಕೊಡಲಾಗಿದ್ದು, ಹುದ್ದೆಗಳ ಭರ್ತಿ ನಂತರ ಹೊಸ ಕಾಲೇಜು ಪ್ರಾರಂಭಿಸುವ ಬಗ್ಗೆ ಯೋಚಿಸಲಾಗುವುದು ಎಂದರು.

ಅಭಿನಂದನೆ



ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸತತವಾಗಿ ಐದನೇ ಬಾರಿ ನಿರ್ದೇಶಕರಾಗಿ ಆಯ್ಕೆಯಾದ ನಿವೃತ್ತ ಪಿಎಸ್‌ಐ ಮರಿಗೌಡ ಅವರನ್ನು ಮೈಸೂರಿನ ಕುವೆಂಪುನಗರ ಕೆ ಬ್ಲಾಕ್‌ನಲ್ಲಿರುವ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕುವೆಂಪುನಗರ ಒಕ್ಕಲಿಗರ ಯುವ ವೇದಿಕೆ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಸಹ ಕಾರ್ಯದರ್ಶಿ ಎಸ್.ಬಸವರಾಜು, ದಾನಿಗಳು ಹಾಗೂ ಅಧ್ಯಕ್ಷರು ಶ್ರೀ ಅಯ್ಯಪ್ಪ ಸ್ವಾಮಿ ಸಮಿತಿ, ಶಾರದಾದೇವಿ ನಗರದ ಪಿ.ನಾಗೇಂದ್ರ, ಮುಖಂಡರುಗಳಾದ ಧನ್ಯಕುಮಾರ್, ಭೈರವ ಗ್ರೂಪ್‌ನ ಮಾದೇವ, ಬಿಜೆಪಿ ಮುಖಂಡ ಆರ್.ರಾಕೇಶ್ ಗೌಡ, ಸಿ.ಜ್ಞಾನೇಶ್ ಗೌಡ, ಲಯನ್ ಲೋಕೇಶ್, ಆನಂದ್ ಶ್ಯಾಮಲ ಗ್ರೂಪ್, ಹೆಚ್.ಜೆ. ಅನಿಲ್‌ಕುಮಾರ, ಆರ್.ದಿಲೀಪ್, ರವಿ, ಸಿದ್ದಪ್ಪ ಇತರರು ಉಪಸ್ಥಿತರಿದ್ದರು.

ಲಾಭದ ಆಸೆಗೆ ಬಿದ್ದು ಆನ್‌ಲೈನ್‌ನಲ್ಲಿ 17 ಲಕ್ಷ ಹೂಡಿ ಮೋಸ ಹೋದ ವಕೀಲ!

ಮೈಸೂರು, ಮಾ.13(ಎಸ್‌ಬಿಡಿ)– ಟ್ರೇಡಿಂಗ್‌ನಲ್ಲಿ ಹೆಚ್ಚು ಲಾಭದ ಆಮಿಷಕ್ಕೆ ಬಲಿಯಾಗಿ ವಕೀಲರೊಬ್ಬರು 17 ಲಕ್ಷ ರೂ. ಕಳೆದುಕೊಂಡಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹದೇಶ್ವರ ಬಡಾವಣೆಯಲ್ಲಿ ನೆಲೆಸಿರುವ ವಕೀಲರೊಬ್ಬರು, ಮೇಘಾ ಅಜಯ್ ಹೆಸರಿನಲ್ಲಿ ಟೆಲಿಗ್ರಾಂ ಮೂಲಕ ಕಳುಹಿಸುತ್ತಿದ್ದ ಟ್ರೇಡಿಂಗ್‌ಗೆ ಸಂಬಂಧಿಸಿದ ಸಂದೇಶವನ್ನು ನಂಬಿ ವಂಚನೆಗೊಳಗಾಗಿದ್ದಾರೆ.

ಪರ್ಮ್ ಮೆಂಟ್ ಮಿಂಟ್ ಟ್ರೇಡಿಂಗ್‌ಗಳಲ್ಲಿ ಹಣ ಹೂಡಿಕೆ ಮಾಡಿ, ಲಾಭ ಪಡೆಯುವ ಬಗ್ಗೆ ಮಾಹಿತಿಯನ್ನು ಕಳುಹಿಸಿದ್ದರಿಂದ ವಕೀಲರು ಆ ಸಂದೇಶಗಳಿಗೆ ಪ್ರತಿಕ್ರಿಯಿಸಿದ್ದಾರೆ. ಕೂಡಲೇ ಅವರ ಮೊಬೈಲ್‌ಗೆ ಒಂದು ಲಿಂಕ್ ಬಂದಿದೆ. ಅದನ್ನು ಕ್ಲಿಕ್ ಮಾಡಿ, ಅಪ್ಲಿ ಕೇಷನ್ ಇನ್‌ಸ್ಟಾಲ್ ಮಾಡಿಕೊಂಡಾಗ ಟ್ರೇಡಿಂಗ್‌ಗೆ ಸಂಬಂಧಿಸಿದ ವೆಬ್ ಪೇಜ್ ಓಪನ್ ಆಗಿದೆ. ಅದರಲ್ಲಿ ಹೆಸರು, ಪಾಸ್ ವರ್ಡ್ ನಮೂದಿಸಿ ವೈಯಕ್ತಿಕ ಖಾತೆ ತೆರೆದುಕೊಂಡಿದೆ. ಆರಂಭದಲ್ಲಿ 8 ಸಾವಿರ ರೂ. ಹೂಡಿಕೆ ಮಾಡಿದ್ದಾರೆ. ಅದಕ್ಕೆ ಲಾಭ ಬಂದಿದ್ದರಿಂದ ಹೆಚ್ಚು ಹಣ ಹೂಡಿಕೆ ಮಾಡಿದರೆ ಅಧಿಕ ಲಾಭ ಬರುತ್ತದೆ ಎಂಬ ಆಸೆಯಿಂದ ಹಂತ ಹಂತವಾಗಿ 17 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಆ ಹಣಕ್ಕೆ ಲಾಭ ಬಂದಿರುವುದಾಗಿ ತಿಳಿಸಲಾಗಿದೆಯಾದರೂ ಆ ಮೊತ್ತವನ್ನು ವಿತ್ ಡ್ರಾ ಮಾಡಿಕೊಳ್ಳಲು 5 ಲಕ್ಷ ಪಾವತಿಸಬೇಕೆಂಬ ಸೂಚನೆ ಬಂದಿದೆ. ಆಗ ವಕೀಲರಿಗೆ ತಾವು ಮೋಸಹೋಗಿರುವುದು ಗೊತ್ತಾಗಿದೆ.

ಆರ್‌ಟಿಓ ಕಚೇರಿಯಲ್ಲಿ ವಾಹನ ನೋಂದಣಿಯೂ ಸೇರಿದಂತೆ ದಾಖಲೆ ನೀಡಿಕೆ ವಿಳಂಬ

ಯೂಸ್ಡ್ ಕಾರ್ ಡೀಲರ್ಸ್ ಮನವಿ



ಮೈಸೂರು ಸಿಟಿ(ಪಶ್ಚಿಮ) ಯೂಸ್ಡ್ ಕಾರ್ ಡೀಲರ್ಸ್ ಅಸೋಸಿಯೇಷನ್‌ನಿಂದ ಆರ್‌ಟಿಓ ಅಧಿಕಾರಿಗೆ ಮನವಿ ನೀಡುತ್ತಿರುವುದು.

ಮೈಸೂರು, ಮಾ.13(ಎಂಕೆ)– ಮೈಸೂರಿನ ಬಲ್ಲಾಳ ವೃತ್ತದ ಸಮೀಪದಲ್ಲಿರುವ ಆರ್‌ಟಿಓ(ಪಶ್ಚಿಮ) ಕಚೇರಿಯಲ್ಲಿ ವಾಹನಗಳ ನೋಂದಣಿ ಸೇರಿದಂತೆ ಇನ್ನಿತರೆ ಕೆಲಸಗಳು ವಿಳಂಬವಾಗುತ್ತಿದ್ದು, ತ್ವರಿತವಾಗಿ ಮಾಡಿಕೊಡುವಂತೆ ಮೈಸೂರು ಸಿಟಿ(ಪಶ್ಚಿಮ) ಯೂಸ್ಡ್ ಕಾರ್ ಡೀಲರ್ಸ್ ಅಸೋಸಿಯೇಷನ್ ವತಿಯಿಂದ ಆರ್‌ಟಿಓ ದೇವಿಕಾ ಅವರಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ಆರ್‌ಸಿ ಕಾರ್ಡ್‌ಗಳನ್ನು ಕೊಡಲು ಮೂರ್ನಾಲ್ಕು ತಿಂಗಳು ಮಾಡಲಾಗುತ್ತಿದೆ. ಕಳೆದ ವರ್ಷದ ಡಿಸೆಂಬರ್‌ನಿಂದಲೂ ತೊಂದರೆಯಾಗುತ್ತಿದೆ. ಕಾರ್‌ಗಳನ್ನು ಮಾರಾಟ ಮಾಡಲು ತೊಂದರೆಯಾಗುತ್ತಿದ್ದು, ಕೂಡಲೆ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರು. ಮೈಸೂರು ಸಿಟಿ(ಪಶ್ಚಿಮ) ಯೂಸ್ಡ್ ಕಾರ್ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಪ್ರದೀಪ್‌ಗೌಡ, ಪ್ರಧಾನ ಕಾರ್ಯದರ್ಶಿ ಸುರೇಶ್, ಗೌರವಾಧ್ಯಕ್ಷ ರಾಜುಗೌಡ, ಮುರುಗೇಶ್, ವೇಣು, ಕೃಷ್ಣ, ಕಣ್ಣಪ್ಪ, ಶ್ರೀನಿವಾಸ ಮತ್ತಿತರರಿದ್ದರು.

ಕ್ಯಾತಮಾರನಹಳ್ಳಿ ಮಸೀದಿ ವಿವಾದ; ಇಂದು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ

ಮೈಸೂರು, ಮಾ.13– ಹೈಕೋರ್ಟ್ ನಿರ್ದೇಶನದ ಮೇರೆಗೆ ಕ್ಯಾತಮಾರನಹಳ್ಳಿಯ ಮಸೀದಿಗೆ ಬೀಗ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಾಳೆ(ಮಾ.14) ಬೆಳಗ್ಗೆ 11 ಗಂಟೆಗೆ ಸಭೆ ಕರೆಯಲಾಗಿದೆ.

ಒಂಬತ್ತು ವರ್ಷಗಳ ಹಿಂದೆ ಆರ್‌ಎಸ್‌ಎಸ್ ಕಾರ್ಯಕರ್ತ ರಾಜು ಹತ್ಯೆ ಬಳಿಕ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಗಾಯತ್ರಿಪುರಂ ಎರಡನೇ ಹಂತ, ಕ್ಯಾತಮಾರನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಮಸೀದಿಗೆ ಬೀಗ ಹಾಕಲಾಗಿತ್ತು.

ಬಳಿಕ Aleema Sadlys Education institution & Masjid-E-Siddique-E-Akbar Trust ಬೀಗ ಹಾಕಿರುವುದನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿತ್ತು. ಈ ಹಿನ್ನೆಲೆಯಲ್ಲಿ ಇದೀಗ ನ್ಯಾಯಾಲಯವು ಮಸೀದಿಗೆ ಬೀಗ ಹಾಕಿರುವುದನ್ನು ಮುಂದುವರಿಸುವ ಅಥವಾ ಸದರಿ ಟ್ರಸ್ಟ್ ಬೀಗ ತೆರೆದು ಕಾರ್ಯ ನಿರ್ವಹಿಸಲು ಆಸಕ್ತ ಸಂಘ ಸಂಸ್ಥೆ ಅಥವಾ ವ್ಯಕ್ತಿಗಳ ಅಭಿಪ್ರಾಯ ಪಡೆಯಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ.

ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ಸೋಮವಾರ (ಮಾ.10) ಕರೆದಿದ್ದ ಸಭೆ ಕಾರಣಾಂತರಗಳಿಂದ ನಡೆಯಲಿಲ್ಲ. ಬದಲಿಗೆ ಸಭೆಯನ್ನು ನಾಳೆಗೆ (ಮಾ.14) ಮುಂದೂಡಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಯಲಿದೆ.

ಆರ್‌ಎಸ್‌ಎಸ್ ಕಾರ್ಯಕರ್ತ ರಾಜು ಹತ್ಯೆ ಪ್ರಕರಣ ನಡೆದು ದಶಕದ ಬಳಿಕ ಮತ್ತೆ ಈಗ ಮಸೀದಿ ವಿಚಾರ ಮುನ್ನಲೆಗೆ ಬಂದಿದೆ ಈ ಘಟನೆ ಬಳಿಕ ವಿವಾದಿತ ಮಸೀದಿಗೆ ಬೀಗ ಹಾಕಲಾಗಿತ್ತು. ಇದನ್ನು ಪ್ರಶ್ನಿಸಿ ಟ್ರಸ್ಟ್ ಪರವಾಗಿ ಮುನಾವರ್ ಪಾಶ ಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿ ನ್ಯಾಯಮೂರ್ತಿ ನಾಗಪ್ರಸನ್ನ ಅವರ ಮುಂದೆ ವಿಚಾರಣೆಗೆ ಬಂದಿತ್ತು. ಆಗ ಪ್ರಕರಣವನ್ನು ಸ್ಥಳೀಯ ಮಟ್ಟದಲ್ಲೇ ಮಾತುಕತೆ ನಡೆಸಿ 12 ವಾರಗಳಲ್ಲಿ ಇತ್ಯರ್ಥ ಪಡಿಸುವಂತೆ ಮೈಸೂರು ಜಿಲ್ಲಾಧಿಕಾರಿಗೆ ಕೋರ್ಟ್ ನಿರ್ದೇಶನ ನೀಡಿತು.

ಅಭಿನಂದನೆ...



ಸೋಮೇಶ್ವರಪುರ ಹಾಲು ಉತ್ಪಾದಕರ ಸಂಘದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಎಲ್.ಮಾಧು, ಉಪಾಧ್ಯಕ್ಷರಾಗಿ ಕೆಂಪಮ್ಮ ಅವಿರೋಧವಾಗಿ ಆಯ್ಕೆಯಾದರು. ಇವರನ್ನು ಸಂಘದ ನಿರ್ದೇಶಕರಾದ ಶ್ರೀಕಂಠಪ್ಪ, ಪರಶಿವಪ್ಪ, ಮಹದೇವಪ್ಪ, ಶೀಲಾ ನವೀನ್ ಹಾಗೂ ಗ್ರಾಮದ ಮುಖಂಡರು ಅಭಿನಂದಿಸಿದರು.

ಕ್ರೀಡಾಂಗಣ, ಉದ್ಯಾನವನಗಳ ನಿರ್ವಹಣೆ; ನೀರು, ಆಸ್ತಿ ವಸೂಲಾತಿ ಹೊಣೆ ಇನ್ನು ಮಹಿಳಾ ಸಂಘಟನೆಗಳದ್ದು

● ಮೈಸೂರು ಮಹಾನಗರಪಾಲಿಕೆ ಮಹತ್ವದ ಹೆಜ್ಜೆ ● ಮಂಗಳೂರು ಪಾಲಿಕೆಯ ಮಾದರಿ ಆಧರಿಸಿ ನಿರ್ಣಯ

ಮೈಸೂರು, ಮಾ.13(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿನ ಸಾರ್ವಜನಿಕ ಕ್ರೀಡಾಂಗಣ, ಉದ್ಯಾನವನಗಳ ನಿರ್ವಹಣೆ, ನೀರಿನ ತೆರಿಗೆ ಹಾಗೂ ಆಸ್ತಿ ತೆರಿಗೆ ವಸೂಲಾತಿಯನ್ನು 14 ಸ್ವ–ಸಹಾಯ ಗುಂಪುಗಳಿಗೆ 'ಅಮೃತ್‌ಮಿತ್ರ' ಯೋಜನೆಯಡಿ ವಹಿಸಲು ಮೈಸೂರು ನಗರಪಾಲಿಕೆ ಮುಂದಾಗಿದೆ.

ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ, ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಮಹಿಳಾ ಸ್ವ–ಸಹಾಯ ಸಂಘಗಳ ಸದಸ್ಯರು ಇನ್ನು ಮುಂದೆ 'ಅಮೃತ್ ಮಿತ್ರ'ರಾಗಿಯೂ ಗುರುತಿಸಿಕೊಳ್ಳಲಿದ್ದಾರೆ. ಇವರು ಪಾಲಿಕೆ ವ್ಯಾಪ್ತಿಯ ಉದ್ಯಾನವನ ನಿರ್ವಹಣೆ, ನೀರಿನ ಗುಣಮಟ್ಟದ ಪರೀಕ್ಷೆ ಹೊಣೆಯೂ ಇವರದು.



ಸಂಗ್ರಹ ಚಿತ್ರ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದೀನ ದಯಾಳ್ ಅಂತ್ಯೋದಯ ಯೋಜನೆ– ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ (ಡೇ–ನಲ್ಮ್) ರಚಿಸಲಾಗಿರುವ ಸ್ವ–ಸಹಾಯ ಗುಂಪುಗಳನ್ನು ಗುರುತಿಸಿ, ಅವರು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವುದು. ಈ ಮೂಲಕ ಮಹಿಳಾ ಸಬಲೀಕರಣಕ್ಕೂ ಪ್ರೋತ್ಸಾಹ ನೀಡುವುದು ಮಾತ್ರವಲ್ಲದೆ, ಸ್ವ ಸಹಾಯ ಗುಂಪುಗಳ ಜವಾಬ್ದಾರಿಗಳನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ. ಮೊದಲ ಹಂತದಲ್ಲಿ ಸಾರ್ವಜನಿಕ ಉದ್ಯಾನವನಗಳು, ಆಟದ ಮೈದಾನಗಳ ನಿರ್ವಹಣೆ ಹಾಗೂ ನೀರಿನ ಗುಣಮಟ್ಟ ಪರೀಕ್ಷೆ ಸೇರಿದಂತೆ ನೀರು ಮತ್ತು ಆಸ್ತಿ ತೆರಿಗೆ ವಸೂಲಾತಿ ಜವಾಬ್ದಾರಿಯನ್ನು ವಹಿಸಿಕೊಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಕ್ಸಸ್: ಪ್ರಾಥಮಿಕ ಹಂತದಲ್ಲಿ ಪೈಲಟ್ ಯೋಜನೆಯಾಗಿ ದ.ಕ. ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 23 ಕೆಲಸಗಳನ್ನು ಸ್ಥಳೀಯ ಮಹಿಳಾ ಸ್ವ–ಸಹಾಯ ಸಂಘಗಳಿಗೆ ವಹಿಸಿಕೊಡಲಾಗಿತ್ತು. ಈ ಕಾರ್ಯತಂತ್ರ ಯಶಸ್ವಿಯಾಗಿದೆ.

152 ಪ್ರಾಜೆಕ್ಟ್‌ಗಳು: ಮೊದಲ ಹಂತದಲ್ಲಿ 152 ಪ್ರಾಜೆಕ್ಟ್‌ಗಳನ್ನು 10 ಕೋಟಿ ವೆಚ್ಚದಲ್ಲಿ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ವಹಿಸಲಾಗುತ್ತಿದೆ. ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಬೇಕಾದ ಮಹಿಳಾ ಸ್ವ–ಸಹಾಯ ಸಂಘಗಳು ಈಗಾಗಲೇ ಡೇ–ನಲ್ಮ್ ಅಭಿಯಾನದಡಿ ಮೊದಲು ನೋಂದಾಯಿಸಿಕೊಂಡಿರಬೇಕು. ನಿರಂತರ ಸಭೆ, ನಿರಂತರ ಉಳಿತಾಯ, ಆಂತರಿಕ ಸಾಲ ವಿತರಣೆ, ನಿಯಮಿತ ಸಾಲ ಮರುಪಾವತಿ ಮತ್ತು ದಾಖಲಾತಿ ನಿರ್ವಹಣೆಯನ್ನು ಮಾಡಿರಬೇಕು ಎನ್ನುತ್ತಾರೆ ಅಮೃತ್ 2.0 ಅಭಿಯಾನದ ಅಧಿಕಾರಿ ಭೈರಲಿಂಗಯ್ಯ.

ರಾಜ್ಯದಲ್ಲಿ 152 ಪ್ರಾಜೆಕ್ಟ್ ಮೊದಲ ಹಂತದಲ್ಲಿ ಮಂಜೂರಾತಿ ಪಡೆದಿವೆ. ಇದರಲ್ಲಿ ಸಾರ್ವಜನಿಕ ಉದ್ಯಾನವನ, ಆಟದ ಮೈದಾನ ನಿರ್ವಹಣೆಯ ಜವಾಬ್ದಾರಿ ಹಾಗೂ ನೀರು ಮತ್ತು ಆಸ್ತಿ ತೆರಿಗೆ ಹಿಂಬಾಕಿ ವಸೂಲಿ ಜವಾಬ್ದಾರಿ ನೀಡಲಾಗುತ್ತಿದೆ. ಮುಂದಿನ ಹಂತದಲ್ಲಿ ಮೀಟರ್ ಓದುವಿಕೆ, ಬಿಲ್ ಜನರೇಷನ್ ಮತ್ತು ವಿತರಣೆ, ಶುಲ್ಕಗಳ ಸಂಗ್ರಹ, ಪಂಪ್‌ಹೌಸ್ ನಿರ್ವಹಣೆ, ಪ್ಲಾಂಟ್ ಆವರಣ ಸುಂದರಗೊಳಿಸುವುದು ಮೊದಲಾದ ಜವಾಬ್ದಾರಿಗಳನ್ನು ನೀಡಲಾಗುವುದು ಹಾಗೂ ಈ ವಿಷಯಗಳಲ್ಲಿ ಮಹಿಳೆಯರಿಗೆ ಕೌಶಲ ಬೆಳೆಸುವುದು, ಮಹಿಳಾ ಸಶಕ್ತೀಕರಣ, ಸಾಮುದಾಯಿಕ ಜವಾಬ್ದಾರಿ ನೀಡುವುದು ಇದರ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

> "ಸಾರ್ವಜನಿಕ ಉದ್ಯಾನವನ, ಅದರೊಳಗಿನ ಪುಟ್ಟ ಕ್ರೀಡಾಂಗಣಗಳ ನಿರ್ವಹಣೆಯ ಹೊಣೆಯನ್ನು 6 ಸ್ವ ಸಹಾಯ ಗುಂಪುಗಳಿಗೆ ನೀಡಲು ತೀರ್ಮಾನಿಸಲಾಗಿದ್ದು, ಇದರ ನಿರ್ವಹಣೆ ಕುರಿತು ಕಾರ್ಯಾದೇಶ ನೀಡಿದ ನಂತರ ಅಧಿಕೃತವಾಗಿ ಗುಂಪುಗಳು ಕಾರ್ಯಾರಂಭ ಮಾಡಲಿವೆ. – **ಮೋಹನ್, ಸಹಾಯಕ ನಿರ್ದೇಶಕರು, ತೋಟಗಾರಿಕೆ ವಿಭಾಗ, ಮೈನಪಾ.**

> "ನೀರು, ಆಸ್ತಿ ತೆರಿಗೆ ವಸೂಲಾತಿ ಹಾಗೂ ಉದ್ಯಾನವನ, ಅದರೊಳಗಿನ ಪುಟ್ಟ ಆಟದ ಮೈದಾನ ನಿರ್ವಹಣೆಗೆ 14 ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡಿ, ಆಡಳಿತಾತ್ಮಕ ಒಪ್ಪಿಗೆಯನ್ನು ಮಹಾನಗರ ಪಾಲಿಕೆ ಆಯುಕ್ತರು ಸೂಚಿಸಿದ್ದು, ಈ ಸಂಘದ ಸದಸ್ಯರು ತಮಗೆ ವಹಿಸಿದ ಕಾರ್ಯ ಆರಂಭ ಮಾಡಲು ಅಂತಿಮ ಕಾರ್ಯಾದೇಶ ನೀಡಬೇಕು.
> – **ಭೈರಲಿಂಗಯ್ಯ, ಅಮೃತ್ 2.0 ಅಭಿಯಾನದ ಅಧಿಕಾರಿ, ಮೈನಪಾ**

> "ಇದೇ ಮೊದಲ ಬಾರಿಗೆ ನೀರು, ಆಸ್ತಿ ತೆರಿಗೆ ವಸೂಲಾತಿ ಹಾಗೂ ಉದ್ಯಾನವನ, ಕ್ರೀಡಾಂಗಣ ನಿರ್ವಹಣೆಗೆ ಮಹಿಳಾ ಸಂಘಟನೆಗಳಿಗೆ ವಹಿಸಿರುವುದು ಉತ್ತಮ ನಿರ್ಧಾರ. ಆದರೆ, ನೀರು ಮತ್ತು ಆಸ್ತಿ ತೆರಿಗೆ ವಸೂಲಾತಿ ಸಂದರ್ಭದಲ್ಲಿ ಸದಸ್ಯೆಯರಿಗೆ ಭದ್ರತೆ ಒದಗಿಸುವುದು ಅತೀ ಮುಖ್ಯ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಮೈಸೂರು ನಗರಪಾಲಿಕೆ ಆಯುಕ್ತರು ಗಮನಹರಿಸಬೇಕು.
> – **ಪ್ರಸನ್ನ, ರಾಜ್ಯ ಕಾರ್ಯದರ್ಶಿ, ಜನ ಸಂಗ್ರಾಮ ಪರಿಷತ್**

ನೀರಿನ ತೆರಿಗೆ ವಸೂಲಾತಿಗೆ: ನೀರಿನ ತೆರಿಗೆ ಶುಲ್ಕ ವಸೂಲಾತಿಗೆ ಸುಮಲತಾ ನೇತೃತ್ವದ ಚಾಮುಂಡೇಶ್ವರಿ ಸ್ತ್ರೀಶಕ್ತಿ ಮಹಿಳಾ ಸ್ವ–ಸಹಾಯ ಸಂಘ, ಆಲನಹಳ್ಳಿ, ಮೀನಾಕ್ಷಿ ನೇತೃತ್ವದ ಧಾನೇಶ್ವರಿ ಸ್ತ್ರೀ ಶಕ್ತಿ ಮಹಿಳಾ ಸ್ವ ಸಹಾಯ ಸಂಘ, ಜಿ. ವಿಜಯಲಕ್ಷ್ಮೀ ನೇತೃತ್ವದ ಶರಧಿ ಸ್ತ್ರೀಶಕ್ತಿ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘ, ಸುಧಾಮಣಿ, ಎಂ. ಸುಷ್ಮಾ ಅಂಕಾಳಪರಮೇಶ್ವರಿ ಸ್ತ್ರೀ ಶಕ್ತಿ ಮಹಿಳಾ ಸ್ವ ಸಹಾಯ ಸಂಘ, ಯಶೋಧ ನೇತೃತ್ವದ ಆರೋರ ಮಹಿಳಾ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಕ್ಕೆ ವಹಿಸಲಾಗಿದ್ದು, ಈ ಸಂಘದ ಸದಸ್ಯರು ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 30 ಕೋಟಿಗೂ ಅಧಿಕ ನೀರಿನ ಕಂದಾಯ ಬಾಕಿಯ ವಸೂಲಾತಿ ಮಾಡಬೇಕಿದೆ.

ಆಸ್ತಿ ತೆರಿಗೆ ವಸೂಲಾತಿಗೆ: ಆಸ್ತಿ ತೆರಿಗೆ ವಸೂಲಾತಿಗಾಗಿ ರೇಷ್ಮಾ ನೇತೃತ್ವದ ಸ್ಫೂರ್ತಿ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘ ಅಜೀಜ್ ಸೇಠ್ ನಗರ, ವಿಜಯಲಕ್ಷ್ಮೀ ನೇತೃತ್ವದ ಸಂಜೀವಿನಿ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘ, ಹೆಚ್.ಆರ್.ಸವಿತಾ ನೇತೃತ್ವದ ಮಲ್ಲಿಗೆ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘದ ಸದಸ್ಯರಿಗೆ ವಹಿಸಲಾಗಿದ್ದು, ಈ ಸದಸ್ಯರು ಬಾಕಿ ಉಳಿದಿರುವ 36 ಕೋಟಿಗೂ ಅಧಿಕ ಆಸ್ತಿ ಕಂದಾಯ ವಸೂಲಾತಿ ಜವಾಬ್ದಾರಿಯೂ ಸೇರಿದೆ.

ಉದ್ಯಾನವನ ಮತ್ತು ಕ್ರೀಡಾಂಗಣಗಳ ನಿರ್ವಹಣೆ: ಸಾರ್ವಜನಿಕ ಉದ್ಯಾನವನಗಳು ಮತ್ತು ಆಟದ ಮೈದಾನಗಳ ನಿರ್ವಹಣೆಗೆ ರಶ್ಮಿ ನೇತೃತ್ವ ಅನ್ನಪೂರ್ಣೇಶ್ವರಿ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘ, ಜಯಲಕ್ಷ್ಮೀ, ಶೃತಿ ನೇತೃತ್ವದ ಶ್ರೀ ಲಕ್ಷ್ಮೀ ಸರಸ್ವತಿ ಮಹಿಳಾ ಸ್ವ–ಸಹಾಯ ಸಂಘ, ಸರಸ್ವತಿ ನೇತೃತ್ವದ ಸಮ್ಮತಿ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘ, ಹಜೀರಾ ಸುಲ್ತಾನ ಗುಲ್ಷನ್ ಭಾನು ನೇತೃತ್ವದ ಗುಲ್ಷನ್ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘ, ಸಯ್ಯದ್ ಸಲ್ಮಾ ಭಾನು ನೇತೃತ್ವದ ನೂರ್ ಸ್ತ್ರೀ ಶಕ್ತಿ ಮಹಿಳಾ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘ ಸದಸ್ಯರಿಗೆ ನೀಡಲಾಗಿ ದೆ. ಸದ್ಯಕ್ಕೆ ಪ್ರಮುಖ ಉದ್ಯಾನವನಗಳು, ಅದರೊಳ ಗಿರುವ ಪುಟ್ಟ ಕ್ರೀಡಾಂಗಣಗಳ ನಿರ್ವಹಣೆ ಗುರಿ ಈ ಸ್ವ ಸಹಾಯ ಗುಂಪುಗಳಿಗೆ ವಹಿಸಿದೆ.

ಯಶಸ್ವಿಯಾಗಿ ನಡೆದ ರೋಟೇರಿಯನ್ನರ ಟೆನಿಸ್ ಪಂದ್ಯಾವಳಿ



ರೋಟೇರಿಯನ್‌ಗಳಿಗಾಗಿ ಜಿಲ್ಲಾ ಟೆನಿಸ್ ಪಂದ್ಯಾವಳಿ ಯಶಸ್ವಿಯಾಗಿ ನಡೆಯಿತು.

ಮೈಸೂರು,ಮಾ.13(ಪಿಎಂ)– ರೋಟರಿ ಪಂಚ್‌ಶೀಲ್ ವತಿಯಿಂದ ಇತ್ತೀಚೆಗೆ ರೋಟರಿ ಡಿಸ್ಟ್ರಿಕ್ 3181ರ ರೋಟೇರಿಯನ್‌ಗಳಿಗಾಗಿ ಜಿಲ್ಲಾ ಟೆನ್ನಿಸ್ ಪಂದ್ಯಾವಳಿ ಯಶಸ್ವಿಯಾಗಿ ನಡೆಯಿತು.

ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್ ಆವರಣದಲ್ಲಿ ನಡೆದ ಪಂದ್ಯಾವಳಿಗೆ ಖ್ಯಾತ ಟೆನ್ನಿಸ್ ಪಟು ನಾಗರಾಜ್ ಚಾಲನೆ ನೀಡಿದರು. ಈ ವೇಳೆ ರೋಟರಿ ಸಹಾಯಕ ಗೌರ್ನರ್ ಚೇತನ್ ವಿಶ್ವನಾಥ್ ಅವರು ಉಪಸ್ಥಿತರಿದ್ದರು.

ಈ ಪಂದ್ಯಾವಳಿ ಕೇವಲ ಸ್ನೇಹಪರ ಸ್ಪರ್ಧೆ ಆಗಿರದೇ ರೋಟರಿಯನ್ನರ ಸಹಭಾಗಿತ್ವ ಬಲಪಡಿಸಲು ವೇದಿಕೆಯಾಗಿತ್ತು. ಸಿಂಗಲ್ಸ್ ಮತ್ತು ಡಬಲ್ಸ್ ಪಂದ್ಯಗಳಲ್ಲಿ ರೋಟರಿ ಪಂಚಶೀಲ್ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು.

ರೋಟರಿ ಪಂಚ್‌ಶೀಲ್ ಅನ್ನು ರಾಜೇಂದ್ರ ಹುಬ್ಬಳ್ಳಿ, ರಾಜೇಂದ್ರ ಪ್ರಸಾದ್, ಡಾ.ಅನುಪ್ ಪ್ರತಿನಿಧಿಸಿದ್ದರು. ರೋಟರಿ ಪಂಚ್‌ಶೀಲ್ ಅಧ್ಯಕ್ಷ ಅಶ್ವಿನ್ ಪಾಳೇಗಾರ್ ಇವರಿಗೆ ಅಭಿನಂದಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಮುಸ್ಲಿಂರಿಗೆ ಶಿಕ್ಷಣ–ಉದ್ಯೋಗ ಮೀಸಲಾತಿ ಶೇ.10ಕ್ಕೆ ಹೆಚ್ಚಿಸಲು ಸರ್ಕಾರ ಭರವಸೆ

ಕೋಲಾರ, ಮಾ.13– ರಾಜ್ಯ ಸರ್ಕಾರದ ಗುತ್ತಿಗೆಯಲ್ಲಿ ಟೆಂಡರ್ ಪಡೆಯುವುದಕ್ಕೆ ಶೇ.4 ಮೀಸಲಾತಿ ಪಡೆದುಕೊಂಡಿರುವ ಮುಸ್ಲಿಂ ಸಮುದಾಯ, ಇದೀಗ ಮತ್ತೊಮ್ಮೆ ತಮ್ಮ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯನ್ನು ಶೇ.10ಕ್ಕೆ ಹೆಚ್ಚಳ ಮಾಡುವಂತೆ ಮನವಿ ಮಾಡಿದೆ ಇದರ ಬೆನ್ನಲ್ಲಿಯೇ ಸಚಿವ ಜಮೀರ್ ಅಹಮದ್ ಖಾನ್ ಅವರು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಜ್ಯ ಸರ್ಕಾರದಿಂದ ಈವರೆಗೆ ಮುಸ್ಲಿಮರಿಗೆ ಶಿಕ್ಷಣ–ಉದ್ಯೋಗಕ್ಕಾಗಿ ಶೇ.4 ಮೀಸಲಾತಿಯನ್ನು ಕೊಡಲಾಗುತ್ತಿತ್ತು. ಆದರೆ, ಇತ್ತೀಚೆಗೆ ಕರ್ನಾಟಕ ಬಜೆಟ್ 2025ರಲ್ಲಿ ಸರ್ಕಾರಿ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.4ರಷ್ಟು ಕಾಮಗಾರಿಯ ಟೆಂಡರ್ ಅನ್ನು ಮುಸ್ಲಿಮರಿಗೆ ಕೊಡಬೇಕು ಎಂದು ಹೊಸದಾಗಿ ಕಾಯ್ದೆ ಜಾರಿ ಮಾಡಲಾಯಿತು. ಇದರ ಬೆನ್ನಲ್ಲಿಯೇ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಇಂಜಿನಿಯರ್ಸ್ ಅಸೋಸಿಯೇಷನ್‌ನಿಂದ ರಾಜ್ಯದಲ್ಲಿ ಮುಸ್ಲಿಂ ಸಮುದಾಯಕ್ಕೆ ಈಗಿರುವ ಶೇ.4 ಶಿಕ್ಷಣ–ಉದ್ಯೋಗ ಮೀಸಲಾತಿಯನ್ನು ಶೇ.10ಕ್ಕೆ ಹೆಚ್ಚಳ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ಅವರಿಗೆ ಮನವಿ ಸಲ್ಲಿಕೆ ಮಾಡಿದೆ. ಇದಕ್ಕೆ ಸರ್ಕಾರದಿಂದಲೂ ಭರವಸೆ ನೀಡಿದೆ.

ಮೈಸೂರಿನ ಖ್ಯಾತ ವೈದ್ಯರಾದ ಡಾ.ವಿ.ಲಕ್ಷ್ಮಿನಾರಾಯಣರಿಗೆ 'ಭಾರತದ ಮಹಾನ್ ಸುಪುತ್ರ' ಪ್ರಶಸ್ತಿ

ಬೆಂಗಳೂರು, ಮಾ.13– ಭಾರತೀಯ ಬುದ್ಧಿಜೀವಿಗಳ ಪರಿಷತ್ ವತಿಯಿಂದ ಮೈಸೂರಿನ ವೈದ್ಯರಾದ ಡಾ.ವಿ.ಲಕ್ಷ್ಮೀ ನಾರಾಯಣ್ ಅವರಿಗೆ 'ಭಾರತದ ಮಹಾನ್ ಸುಪುತ್ರ' (The Great son of India) ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಬೆಂಗಳೂರಿನ ರಾಜಭವನ ರಸ್ತೆಯಲ್ಲಿರುವ ದಿ ಕ್ಯಾಪಿಟಲ್ ಹೋಟೆಲ್‌ನಲ್ಲಿ ಇತ್ತೀಚೆಗೆ ಭಾರತೀಯ ಬುದ್ಧಿಜೀವಿಗಳ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ 'ಪರಿಸರ ಶಾಸನದ ಬಗ್ಗೆ ಸಾಂವಿಧಾನಿಕ ವಿಚಾರ ಆಯಾಮಗಳು' ಕುರಿತ ವಿಚಾರದ ಸಂಕಿರಣದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಡಾ.ಪ್ರಸನ್ನ ಬಿ.ವರಾಳೆ ಅವರು ಡಾ.ವಿ.ಲಕ್ಷ್ಮೀ ನಾರಾಯಣ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರೆ, ಭಾರತೀಯ ಬುದ್ಧಿಜೀವಿಗಳ ಪರಿಷತ್ ಅಧ್ಯಕ್ಷರಾದ ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಡಾ.ವಿ.



ಮೈಸೂರಿನ ವೈದ್ಯರಾದ ಡಾ.ವಿ.ಲಕ್ಷ್ಮೀ ನಾರಾಯಣ್ ಅವರಿಗೆ 'ಭಾರತದ ಮಹಾನ್ ಸುಪುತ್ರ' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಗೋಪಾಲಗೌಡ, ಸೇವಾ ಪ್ರಮಾಣಪತ್ರ ನೀಡಿ ಗೌರವಿಸಿದರು.

ಈ ಕಾರ್ಯಕ್ರಮದಲ್ಲಿ ಲಾ ಕಮಿಷನ್ ಛೇರ್ಮನ್, ನ್ಯಾಯಮೂರ್ತಿ ಬಿಸ್ವನಾಥ್ ರಥ್, ಸಿಐಸಿ ಜನರಲ್ ಸೆಕ್ರೆಟರಿ ಶಿವಶಂಕರಾಚಾರ್, ಹೈಕೋರ್ಟ್ ನ್ಯಾಯಮೂರ್ತಿಗಳಾದ ಇ.ಎಸ್.ಇಂದಿರೇಶ್, ನ್ಯಾ. ಚಿಲ್ಲಕೂರ್ ಸುಮಲತಾ, ಸುಪ್ರೀಂಕೋರ್ಟ್ ಹಿರಿಯ ವಕೀಲ ಆನಂದ್ ಸಂಜಯ್, ಹೈಕೋರ್ಟ್ ನ್ಯಾಯಮೂರ್ತಿ ಕೆ.ನಟರಾಜನ್ ಇನ್ನಿತರರು ಉಪಸ್ಥಿತರಿದ್ದರು.

ಈ ಉನ್ನತ ಪ್ರಶಸ್ತಿಯನ್ನು ಪಡೆದ ಮೊದಲ ಮೈಸೂರಿಗರು ಎಂಬ ಹಿರಿಮೆಗೆ ಡಾ.ವಿ.ಲಕ್ಷ್ಮೀನಾರಾಯಣ್ ಪಾತ್ರ ರಾಗಿದ್ದಾರೆ. ಭಾರತೀಯ ಬುದ್ಧಿಜೀವಿಗಳ ಪರಿಷತ್‌ನಿಂದ ಈವರೆವಿಗೂ 41 ಗಣ್ಯರಿಗೆ 'ಭಾರತದ ಮಹಾನ್ ಸುಪುತ್ರ' / 'ಭಾರತದ ಮಹಾನ್ ಸುಪುತ್ರಿ' ಪ್ರಶಸ್ತಿ ಪ್ರದಾನ ಮಾಡಲಾಗಿದ್ದು, ಕೇರಳ ಹೈಕೋರ್ಟ್‌ನ ವಿಶ್ರಾಂತ ಮುಖ್ಯನ್ಯಾಯಮೂರ್ತಿ ಮಳಿಮಠ್, ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಕ್ರಿಕೆಟಿಗ ಅನಿಲ್ ಕುಂಬ್ಳೆ, ಇಸ್ರೋ ಮಾಜಿ ಛೇರ್ಮನ್‌ಗಳಾದ ಯು.ಆರ್.ರಾವ್, ಕಸ್ತೂರಿ ರಂಗನ್, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್, ಇನ್ಫೋಸಿಸ್ ಫೌಂಡೇಶನ್‌ನ ಮುಖ್ಯಸ್ಥೆ ಶ್ರೀಮತಿ ಸುಧಾಮೂರ್ತಿ, ಖ್ಯಾತ ಹಿನ್ನೆಲೆ ಗಾಯಕ ದಿ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಮುಂತಾದವರು ಈ ಪ್ರಶಸ್ತಿ ಪಡೆದಿರುವ ಪ್ರಮುಖರು.

ದೇಶ - ವಿದೇಶ

ಹೈಜಾಕ್ ಮಾಡಿದ್ದ ರೈಲಿನಲ್ಲಿದ್ದ ಎಲ್ಲಾ ಒತ್ತೆಯಾಳುಗಳ ಬಿಡುಗಡೆ

ಲಾಹೋರ್: ಪಾಕಿಸ್ತಾನದಲ್ಲಿ ಬಲೂಚಿಸ್ತಾನ ಬಂಡುಕೋರರು ಹೈಜಾಕ್ ಮಾಡಿದ್ದ ಪ್ರಯಾಣಿಕರ ರೈಲಿನಲ್ಲಿದ್ದ ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿದ್ದು, ಹೈಜಾಕ್ ಮಾಡಿದ್ದ 30ಕ್ಕೂ ಹೆಚ್ಚು ಉಗ್ರರ ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ಸೇನೆ ಮಾಹಿತಿ ನೀಡಿದೆ. ಪಾಕಿಸ್ತಾನದ ವಶದಲ್ಲಿರುವ ಬಲೂಚಿಸ್ತಾನವನ್ನು ಸ್ವತಂತ್ರಗೊಳಿಸಬೇಕು ಎಂದು ಹೋರಾಡುತ್ತಿರುವ ಬಲೂಚ್ ಲಿಬರೇಶನ್ ಆರ್ಮಿ ತನ್ನ ಮಜೀದ್ ಬ್ರಿಗೇಡ್ ಮೂಲಕ ಪಾಕಿಸ್ತಾನದ ಪ್ಯಾಸೆಂಜರ್ ರೈಲನ್ನೇ ಹೈಜಾಕ್ ಮಾಡಿ, ಈ ರೈಲಿನ ಸುಮಾರು 9 ಬೋಗಿಗಳಲ್ಲಿದ್ದ 450ಕ್ಕೂ ಅಧಿಕ ಮಂದಿಯನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದರು. ವಿಚಾರ ತಿಳಿಯುತ್ತಲೇ ಪಾಕಿಸ್ತಾನ ಮತ್ತು ಚೀನಾ ಸೇನೆ ಜಂಟಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದವು. ಪಾಕಿಸ್ತಾನ ಸೇನಾ ಕಾರ್ಯಾಚರಣೆಯಲ್ಲಿ ಬಲೂಚ್ ಲಿಬರೇಷನ್ ಆರ್ಮಿಯ ಸುಮಾರು 30ಕ್ಕೂ ಹೆಚ್ಚು ಬಂಡುಕೋರರನ್ನು ಹೊಡೆದುರುಳಿಸಲಾಗಿದ್ದು, ಒತ್ತೆಯಾಳಾಗಿರಿಸಲ್ಪಟ್ಟಿದ್ದ 340ಕ್ಕೂ ಹೆಚ್ಚು ರೈಲು ಪ್ರಯಾಣಿಕರನ್ನು 30 ಗಂಟೆಗಳ ಸತತ ಕಾರ್ಯಾಚರಣೆ ಬಳಿಕ ರಕ್ಷಣೆ ಮಾಡಲಾಗಿದೆ. ಅಂತೆಯೇ ಈ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಸೇನೆಯ 27 ಮಂದಿ ಸೈನಿಕರು ಹುತಾತ್ಮರಾಗಿದ್ದಾರೆ.



ನೇಪಾಳ ರಾಜಮನೆತನ ಪರ ರ್‍ಯಾಲಿಯಲ್ಲಿ ಯೋಗಿ ಭಾವಚಿತ್ರ ಪ್ರದರ್ಶನ



ಕಠ್ಮಂಡು: ನೇಪಾಳದ ಮಾಜಿ ದೊರೆ ಜ್ಞಾನೇಂದ್ರ ಶಾ ಅವರನ್ನು ಸ್ವಾಗತಿಸಲು ಆಯೋಜಿಸಲಾಗಿದ್ದ ರ್‍ಯಾಲಿಯಲ್ಲಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭಾವಚಿತ್ರ ಪ್ರದರ್ಶನ ಇದೀಗ ಭಾರಿ ಚರ್ಚೆಗೆ ಕಾರಣವಾಗಿದೆ.

ಮಾಜಿ ದೊರೆ ಜ್ಞಾನೇಂದ್ರ ಶಾ ಅವರು ನೇಪಾಳದ ವಿವಿಧ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುತ್ತಿದ್ದು, ತ್ರಿಭುವನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅವರನ್ನು ಸಾವಿರಾರು ಜನರು ಮೆರವಣಿಗೆಯಲ್ಲಿ ಸ್ವಾಗತ ಕೋರಿದರು. ನೇಪಾಳದಲ್ಲಿ ರಾಜ ಪ್ರಭುತ್ವದ ಮರುಸ್ಥಾಪನೆಗೆ ಬೇಡಿಕೆ ಇಟ್ಟ ಸಾವಿರಾರು ಬೆಂಬಲಿಗರು ಮಾಜಿ ದೊರೆ ಜ್ಞಾನೇಂದ್ರ ಅವರ ಚಿತ್ರ ಮತ್ತು ರಾಷ್ಟ್ರಧ್ವಜಗಳನ್ನು ಪ್ರದರ್ಶಿಸಿದರು. ಈ ವೇಳೆ ಕೆಲವು ಬೆಂಬಲಿಗರು ಯೋಗಿ ಆದಿತ್ಯನಾಥ್ ಭಾವಚಿತ್ರವನ್ನು ಪ್ರದರ್ಶಿಸಿದರು. ಆದರೆ ರ್‍ಯಾಲಿಯಲ್ಲಿ ಯೋಗಿ ಆದಿತ್ಯನಾಥ್ ಅವರ ಭಾವಚಿತ್ರವನ್ನು ಪ್ರದರ್ಶಿಸಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ ನೇಪಾಳದ ಪ್ರಜಾಪ್ರಭುತ್ವ ಪರವಾದ ಅನ್ಯ ರಾಜಕೀಯ ಪಕ್ಷಗಳು, ಯೋಗಿ ಆದಿತ್ಯನಾಥ್ ಭಾವಚಿತ್ರ ಪ್ರದರ್ಶಿಸಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಉಕ್ರೇನ್ ವಶದಲ್ಲಿರುವ ಭೂಮಿ ಮರಳಿ ಪಡೆಯಲು ಸೇನೆಗೆ ಪುಟಿನ್ ಸೂಚನೆ



ಮಾಸ್ಕೋ: ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಬುಧವಾರ ಕುರ್ಸ್ಕ್ ಪ್ರದೇಶಕ್ಕೆ ಅನಿರೀಕ್ಷಿತ ಭೇಟಿ ನೀಡಿದರು. ಮಿಲಿಟರಿ ಸಮವಸ್ತ್ರ ಧರಿಸಿದ್ದ ಪುಟಿನ್, ಉಕ್ರೇನ್ ಪಡೆಗಳಿಂದ ಉಳಿದ ಪ್ರದೇಶವನ್ನು ಶೀಘ್ರವಾಗಿ ಮರಳಿ ಪಡೆಯುವಂತೆ ತಮ್ಮ ಸೈನ್ಯಕ್ಕೆ ಸೂಚನೆ ನೀಡಿದರು.

ಉಕ್ರೇನ್‌ಗೆ ಬೆಂಬಲವಾಗಿ 30 ದಿನಗಳ ಕದನ ವಿರಾಮಕ್ಕೆ ಅಮೆರಿಕ ಮಾಡಿದ್ದ ಪ್ರಸ್ತಾಪವನ್ನು ಪರಿಗಣಿಸುವಂತೆ ಪುಟಿನ್ ಅವರಿಗೆ ಮನವಿ ಮಾಡಿದ ಬೆನ್ನಲ್ಲೇ ಈ ಭೇಟಿ ನಡೆದಿದೆ. ಕುರ್ಸ್ಕ್‌ನಲ್ಲಿ ರಷ್ಯಾದ ಗಣನೀಯ ಪ್ರದೇಶವನ್ನು ವಶಪಡಿಸಿಕೊಂಡ ನಂತರ ಉಕ್ರೇನ್ ಪಡೆಗಳು ಹಿಮ್ಮೆಟ್ಟುತ್ತಿದ್ದು, ಸುಡ್ಜಾ ಪಟ್ಟಣದ ನಿಯಂತ್ರಣವನ್ನು ಕಳೆದುಕೊಂಡಿವೆ ಎಂದು ವರದಿಯಾಗಿದೆ. ಈ ಸಂಘರ್ಷದಲ್ಲಿ ಉಕ್ರೇನ್ ಪಡೆಗಳು ನುಗ್ಗಿದ್ದ ರಷ್ಯಾದ ಏಕೈಕ ಪ್ರಾಂತ್ಯ ಕುರ್ಸ್ಕ್ ಎಂಬುದು ಗಮನಾರ್ಹ. ರಷ್ಯಾದ ಸೇನೆಯ ಜನರಲ್ ಸ್ಟಾಫ್ ಮುಖ್ಯಸ್ಥ ಆರ್ಮಿ ಜನರಲ್ ವ್ಯಾಲೆರಿ ಗೆರಾಸಿಮೊವ್ ಅವರು ಪುಟಿನ್ ಅವರಿಗೆ ನೀಡಿದ ಮಾಹಿತಿ ಪ್ರಕಾರ ರಷ್ಯಾ ಪಡೆಗಳು ಕುರ್ಸ್ಕ್ ಪ್ರದೇಶದೊಳಗಿನ ಸುಮಿ ಪ್ರದೇಶವನ್ನು ಪ್ರವೇಶಿಸಿವೆ. ಕುರ್ಸ್ಕ್ ಪ್ರದೇಶದಲ್ಲಿ ಸುಮಾರು 430 ಉಕ್ರೇನಿಯನ್ ಸೈನಿಕರನ್ನು ಸೆರೆಹಿಡಿಯಲಾಗಿದೆ.

ರೂಪಾಯಿ ಲೋಗೋವನ್ನು ತಮಿಳು ಅಕ್ಷರದೊಂದಿಗೆ ಬದಲಾಯಿಸಿದ ತಮಿಳುನಾಡು ಸರ್ಕಾರ



ಚೆನ್ನೈ: ಭಾಷಾ ವಿವಾದದ ನಡುವೆಯೇ ಇದೇ ಮೊದಲ ಬಾರಿಗೆ ತಮಿಳುನಾಡು ಸರ್ಕಾರವು ತನ್ನ 2025–26ರ ರಾಜ್ಯ ಬಜೆಟ್ ಮೇಲೆ ದೇಶದ ಅಧಿಕೃತ ರೂಪಾಯಿ ಚಿಹ್ನೆ ಅನ್ನು ತಮಿಳು ಅಕ್ಷರ 'ರು' ನೊಂದಿಗೆ ಬದಲಾಯಿಸಿದೆ. ಹಿಂದಿ ಹೇರಿಕೆ, ಭಾಷಾ ನೀತಿಗಳ ಕುರಿತು ನಡೆಯುತ್ತಿರುವ ಚರ್ಚೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ–2020ಕ್ಕೆ ರಾಜ್ಯದ ವಿರೋಧದ ನಡುವೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಸರ್ಕಾರ ತಮಿಳು ಭಾಷೆಯ ಚಿಹ್ನೆಯನ್ನು ರೂಪಾಯಿ ಸೂಚಕವಾಗಿ ಬಳಸಿದೆ.

ತಮಿಳುನಾಡು ಸರ್ಕಾರ ಕಳೆದ ವರ್ಷ ಬಜೆಟ್ ಪ್ರತಿಯಲ್ಲಿ ರುಪಾಯಿ ಚಿಹ್ನೆಯನ್ನೇ ಬಳಸಿತ್ತು. ಆದರೆ ತಮಿಳು ಭಾಷೆಯ ಚಿಹ್ನೆಯನ್ನು ರೂಪಾಯಿ ಸೂಚಕವಾಗಿ ಬಳಸಿದೆ ಆದಾಗ್ಯೂ, ಬಜೆಟ್‌ನ ಇಂಗ್ಲಿಷ್ ಆವೃತ್ತಿಯಲ್ಲಿ ಅಂಕಿ–ಅಂಶಗಳನ್ನು ಉಲ್ಲೇಖಿಸುವಾಗ ಇನ್ನೂ ರುಪಾಯಿ ಚಿಹ್ನೆ ಉಳಿಸಿಕೊಂಡಿದೆ. ತಮಿಳುನಾಡು ಸರ್ಕಾರವು ಈ ಬದಲಾವಣೆ ಕುರಿತು ಇನ್ನೂ ಅಧಿಕೃತ ಹೇಳಿಕೆ ನೀಡಿಲ್ಲ ಆದಾಗ್ಯೂ, ಬಿಜೆಪಿ ವಕ್ತಾರ ನಾರಾಯಣನ್ ತಿರುಪತಿ ಅವರು, ಈ ಕ್ರಮವು ತಮಿಳು ಪಕ್ಷದ ನಿಲುವು ಭಾರತಕ್ಕಿಂತ ಭಿನ್ನ ಎಂಬುದನ್ನು ಪ್ರತಿಬಿಂಬಿಸುತ್ತದೆ ರೂಪಾಯಿ ಚಿಹ್ನೆಯನ್ನು ರಾಷ್ಟ್ರೀಯ ಲಾಂಛನವಾಗಿ ಗುರುತಿಸಲಾಗುತ್ತದೆ ಎಂದು ಹೇಳಿದ್ದಾರೆ.

ಪಾರ್ಕಿಂಗ್ ವಿಚಾರಕ್ಕೆ ಹಲ್ಲೆ; ವಿಜ್ಞಾನಿ ಸಾವು



ಚಂಡೀಗಢ: ಬಾಡಿಗೆ ಮನೆಯ ಬಳಿ ಪಾರ್ಕಿಂಗ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ನೆರೆಮನೆಯವನಿಂದ ಹಲ್ಲೆಗೊಳಗಾಗಿದ್ದ ವಿಜ್ಞಾನಿಯೊಬ್ಬರು ಸಾವಿಗೀಡಾಗಿರುವ ಘಟನೆ ಪಂಜಾಬ್‌ನ ಮೊಹಾಲಿಯಲ್ಲಿ ನಡೆದಿದೆ. ವಿಜ್ಞಾನಿ ಅಭಿಷೇಕ್ ಸ್ವರ್ಣಕರ್ ತಮ್ಮ ಮೋಟಾರ್ ಸೈಕಲ್ ನಿಲ್ಲಿಸುತ್ತಿದ್ದಾಗ ಅವರ ನೆರೆ ಮನೆಯ ಮಾಂಟಿ(26) ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾನೆ. ಇಬ್ಬರ ನಡುವೆ ವಾಗ್ವಾದ ನಡೆದಿದೆ. ನಂತರ ಮಾಂಟಿ ಸ್ವರ್ಣಕರ್(39) ಅವರನ್ನು ತಳ್ಳಿದ್ದರಿಂದ ಅವರು ರಸ್ತೆಗೆ ಬಿದ್ದಿದ್ದು, ಮಾಂಟಿ ಅಲ್ಲಿಂದ ಓಡಿಹೋಗಿದ್ದ ಘಟನೆಯ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ವಿಜ್ಞಾನಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅಲ್ಲಿ ಅವರು ಸಾವನ್ನಪ್ಪಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ವರ್ಣಕರ್ ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ಕಾರಣ ಡಯಾಲಿಸಿಸ್‌ಗೆ ಒಳಗಾಗುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಸ್ವರ್ಣಕರ್ ಜಾರ್ಖಂಡ್ ಮೂಲದವರಾಗಿದ್ದು, ತಮ್ಮ ಪೋಷಕರೊಂದಿಗೆ ಮೊಹಾಲಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಅವರು ಮೊಹಾಲಿಯ IISERನಲ್ಲಿ ಸಂಶೋಧಕರಾಗಿದ್ದರು.

ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ ಮೂಲಕ ಕೊಡವ ಹೆರಿಟೇಜ್ ನಿರ್ಮಾಣ

● ಸುಜಾ ಕುಶಾಲಪ್ಪ ಪ್ರಶ್ನೆಗೆ ಸಚಿವ ಎಚ್.ಕೆ.ಪಾಟೀಲ್ ಉತ್ತರ ● 14 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಾಮಗಾರಿ



ಮಡಿಕೇರಿ,ಮಾ.13– ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿ ಸನಿಹದಲ್ಲಿ ಕಳೆದ 14 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕೊಡವ ಹೆರಿಟೇಜ್ ನಿರ್ಮಾಣ ಯೋಜನೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಇದೀಗ ಸರಕಾರ ಮತ್ತೊಂದು ತೀರ್ಮಾನಕ್ಕೆ ಮುಂದಾಗಿದೆ. ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ (ಪಿ.ಪಿ.ಪಿ) ಮಾದರಿಯಲ್ಲಿ ಈ ಉದ್ದೇಶಿತ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಸರಕಾರ ಕ್ರಮವಹಿಸಲಿರುವುದಾಗಿ ಮೇಲ್ಮನೆ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ ಅವರ ಪ್ರಶ್ನೆಗೆ ಕಾನೂನು ನ್ಯಾಯ ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ವಿವರ ನೀಡಿದ್ದಾರೆ.

2013–14ನೇ ಸಾಲಿನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. ನಂತರದಲ್ಲಿ ಕಾಮಗಾರಿ ಆರಂಭಗೊಂಡು ಹಂತಹಂತವಾಗಿ ರೂ.330.45 ಲಕ್ಷ ಬಿಡುಗಡೆಯಾಗಿದ್ದು ಒಂದಷ್ಟು ಕೆಲಸ ನಡೆದಿದೆ. ಆದರೆ ಮತ್ತೆ ಹೆಚ್ಚುವರಿ ಅನುದಾನದ ಅಗತ್ಯತೆ ಎದುರಾಗಿದ್ದು ರೂ.4.95 ಕೋಟಿಯ ಬಿಡುಗಡೆಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಆರಂಭದಲ್ಲಿ ಕಳಪೆ ಕಾಮಗಾರಿ, ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿದ್ದು, ಯೋಜನೆಗೆ ಧಕ್ಕೆ, ಬಳಿಕ ಹೆಚ್ಚುವರಿ ಅನುದಾನದ ಕೊರತೆಯಿಂದಾಗಿ ಈ ಯೋಜನೆ ಅರ್ಧದಲ್ಲೇ ಉಳಿದಿದೆ. ಈ ಬಗ್ಗೆ ಕೆಲವು ಸಮಯದ ಹಿಂದೆ ಸುಜಾ ಕುಶಾಲಪ್ಪ ಅವರೇ ಅಧಿವೇಶನದಲ್ಲಿ ಪ್ರಶ್ನಿಸಿದಾಗ ಹೆಚ್ಚುವರಿ ಅನುದಾನ ಒದಗಿಸಲು ಆರ್ಥಿಕ ಇಲಾಖೆಯ ಸಹಮತ ಇಲ್ಲದಿರುವುದನ್ನು ಸರಕಾರ ಉಲ್ಲೇಖಿಸಿತ್ತು. ಬದಲಿಗೆ ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಿ.ಎಸ್.ಆರ್.(ಸೋಷಿಯಲ್ ರೆಸ್ಪಾನ್ಸ್ ನಿಧಿ) ಅನುದಾನದಡಿ ಕ್ರಮ ಕೈಗೊಳ್ಳುವಂತೆ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಹಾಗೂ ಕೊಡಗು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸರಕಾರ ಸ್ಪಷ್ಟಪಡಿಸಿತ್ತು. ಇದೀಗ ಈ ವಿಚಾರವನ್ನು ಕೆಲ ದಿನಗಳ ಹಿಂದೆ ಅಧಿವೇಶನದಲ್ಲಿ ಸದಸ್ಯ ಸುಜಾ ಕುಶಾಲಪ್ಪ ಅವರು ಪ್ರಶ್ನೆ ಎತ್ತಿದ್ದು, ಇದಕ್ಕೆ ಸರಕಾರ ಬೇರೆ ವಿವರಣೆ ನೀಡಿದೆ. 4 ಲಕ್ಷ ಕೋಟಿಯ ಬಜೆಟ್ ನೀಡುವ ಸರಕಾರ ಈ ಯೋಜನೆಗೆ ರೂ.4 ಕೋಟಿ ಅನುದಾನ ನೀಡಲು ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿದ ಸುಜಾ ಕುಶಾಲಪ್ಪ, ಪ್ರವಾಸೋದ್ಯಮದಲ್ಲೂ ಜಿಲ್ಲೆ ಬೆಳವಣಿಗೆ ಕಾಣುತ್ತಿದ್ದು ಸರಕಾರಕ್ಕೂ ಆದಾಯ ಬರಲಿದೆ ಎಂಬುದಾಗಿಯೂ ಗಮನ ಸೆಳೆದಿದ್ದರು.

ಇದಕ್ಕೇಉತ್ತರ ನೀಡಿದ ಸಚಿವ ಎಚ್.ಕೆ.ಪಾಟೀಲ್ ಅವರು, ಸಿ.ಎಸ್.ಆರ್ ನಿಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವುದು ಕಷ್ಟಸಾಧ್ಯವಾಗಿದ್ದು ಇದು ಕಾರ್ಯಸಾಧು ಅಲ್ಲ. ಬದಲಿಗೆ ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್(ಪಿ.ಪಿ.ಪಿ) ಮಾದರಿಯಲ್ಲಿ ಕ್ರಮವಹಿಸುವುದು ಸೂಕ್ತ ಎಂದು ಜಿಲ್ಲಾಧಿಕಾರಿಗಳು ವಿವರ ಪತ್ರದ ಮೂಲಕ ಸಲಹೆ ನೀಡಿದ್ದು ಸರಕಾರದ ಅನುಮತಿ ಕೋರಿದ್ದಾರೆ ಎಂದು ತಿಳಿಸಿದರು.

ಈ ಪ್ರಸ್ತಾವನೆಯಂತೆ ಇದೀಗ ಕಾಮಗಾರಿ ಕೈಗೆತ್ತಿಕೊಂಡು ಅಗತ್ಯ ಕೆಲಸ ನಿರ್ವಹಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸರಕಾರವೂ ಈ ನಿಟ್ಟಿನಲ್ಲಿ ಕೈಜೋಡಿಸಲಿದೆ ಎಂದು ಸಚಿವರು ತಿಳಿಸಿದರು. ಈ ತೀರ್ಮಾನದಿಂದ ಕಾಮಗಾರಿ ಮತ್ತಷ್ಟು ವಿಸ್ತಾರವಾಗಲಿದ್ದು ಶೀಘ್ರವಾಗಿಯೂ ಪೂರ್ಣಗೊಳ್ಳಲಿದೆ. ಮುಂದಿನ ಆರ್ಥಿಕ ವರ್ಷದೊಳಗೆ ಯೋಜನೆ ಪೂರ್ಣಗೊಳಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಹೆಜ್ಜೇನು ದಾಳಿಯಿಂದ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರಿಗೆ ಗಾಯ



ಹೆಜ್ಜೇನು ದಾಳಿಯಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಗಾಯಗೊಂಡಿರುವುದು.

ಸಿದ್ದಾಪುರ,ಮಾ.13– ಹೆಜ್ಜೇನು ದಾಳಿಯಿಂದ ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಗಾಯಗೊಂಡ ಘಟನೆ ವಿರಾಜಪೇಟೆ ತಾಲೂಕಿನ ಹಾಲಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೈರಂಬಾಡ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ. ಹೆಜ್ಜೇನು ದಾಳಿಯಿಂದ 19 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು, ಓರ್ವ ಬಿಸಿಊಟ ತಯಾರಿಕಾ ಅಡುಗೆ ಸಿಬ್ಬಂದಿ ಗಾಯಗೊಂಡಿದ್ದಾರೆ.

ಗುರುವಾರ ಮಧ್ಯಾಹ್ನ ಊಟದ ವಿರಾಮದ ನಂತರ ಆವರಣದಲ್ಲಿದ್ದ ವಿದ್ಯಾರ್ಥಿಗಳು ಕೊಠಡಿಗೆ ತೆರಳಲು ಮುಂದಾಗಿದ್ದಾರೆ. ಈ ವೇಳೆ ಏಕಾಏಕಿ ಹೆಜ್ಜೇನು ದಾಳಿ ನಡೆಸಿವೆ. ಹೆಜ್ಜೇನು ದಾಳಿಯಿಂದ ಗಾಯಗೊಂಡ ವಿದ್ಯಾರ್ಥಿಗಳು ಕಿರುಚಾಡಿದ್ದಾರೆ. ಅಲ್ಲೇ ಇದ್ದ ಶಿಕ್ಷಕರುಗಳು ತಕ್ಷಣವೇ ಮಕ್ಕಳನ್ನು ಕೊಠಡಿಯಲ್ಲಿ ಕೂಡಿ ಹಾಕಿ, ಕಿಟಕಿ ಬಾಗಿಲನ್ನು ಮುಚ್ಚುವ ಮೂಲಕ ಸಂಭಾವ್ಯ ಅಪಾಯದಿಂದ ಮಕ್ಕಳನ್ನು ರಕ್ಷಿಸಿದ್ದಾರೆ. ಈ ವೇಳೆ ಮುಖ್ಯ ಶಿಕ್ಷಕಿ ಪದ್ಮ, ಸಹಶಿಕ್ಷಕಿ ಪ್ರತಿಮಾ ಎಂಬವರು ಹೆಜ್ಜೇನು ದಾಳಿಗೆ ತುತ್ತಾಗಿದ್ದಾರೆ.

ಮಕ್ಕಳ ಚೀರಾಟ ಕೇಳಿ ಗ್ರಾಮ ಪಂಚಾಯಿತಿ ಸದಸ್ಯ ಎಂ.ಎಸ್.ಪೂವಯ್ಯ ಅವರು ಪಂದಿಕಂಡ ದಿನೇಶ್ ಎಂಬವರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸ್ಥಳಕ್ಕಾಗಮಿಸಿದ ದಿನೇಶ್, ಹೆಜ್ಜೇನು ದಾಳಿಯಿಂದ ಗಾಯಗೊಂಡ ವಿದ್ಯಾರ್ಥಿಗಳು ಹಾಗೂ ಶಿಕ್ಷಕಿಯರನ್ನು ಕಣ್ಣಂಗಾಲ ಉಪ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಲು ನೆರವಾಗಿದ್ದಾರೆ. ಕಣ್ಣಂ ಗಾಲ ಉಪ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಸಾಗರ್ ಅವರು ಗಾಯಾಳು ವಿದ್ಯಾರ್ಥಿಗಳು ಮತ್ತು ಶಿಕ್ಷಕಿಯರಿಗೆ ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡಿದ್ದಾರೆ. ಚಿಕಿತ್ಸೆಯಿಂದ ಚೇತರಿಸಿಕೊಂಡ ವಿದ್ಯಾರ್ಥಿಗಳು, ಶಿಕ್ಷಕಿಯರು ಪ್ರಾಣಾಪಾಯದಿಂದ ಪಾರಾಗಿ ಮನೆಗೆ ಹಿಂತಿರುಗಿದ್ದಾರೆ.

ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶಾಲಾ ಸಮೀಪದಲ್ಲಿ ದೇವರ ಕಾಡು ಅರಣ್ಯ ಪ್ರದೇಶವಿದ್ದು ಆ ವ್ಯಾಪ್ತಿಯಲ್ಲಿದ್ದ ಹೆಜ್ಜೇನು ಹುಳಗಳು ದಾಳಿ ಮಾಡಿವೆ ಎಂದು ಅರಣ್ಯ ಇಲಾಖಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಮಾಜಿ ಸೈನಿಕರ ಸಂಘದ ಕಟ್ಟಡಕ್ಕೆ ನಿವೇಶನ ನೀಡದೆ ನಿರ್ಲಕ್ಷ್ಯ



ಮಾಜಿ ಸೈನಿಕರ ಸಂಘದ ಕಟ್ಟಡದ ಮೂರನೇ ಅಂತಸ್ತಿನ ಮಳಿಗೆ ಉದ್ಘಾಟಿಸುತ್ತಿರುವುದು.


ವಿರಾಜಪೇಟೆ, ಮಾ.13– ಮಾಜಿ ಸೈನಿಕರ ಸಂಘದ ಸ್ವಂತ ಕಟ್ಟಡ ಕಟ್ಟಲು ಮಡಿಕೇರಿಯಲ್ಲಿ ಜಾಗ ನೀಡುವಂತೆ ಕಳೆದ 20 ವರ್ಷಗಳಿಂದಲು ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಬಂದಿದ್ದೂ ಇದುವರೆಗು ಯಾವುದೇ ಸರಕಾರ ಮಾಜಿ ಸೈನಿಕರಿಗೆ ಸ್ಪಂದಿಸುತ್ತಿಲ್ಲ ಎಂದು ಮೇ.ಜ.ಬಾಚಿಮಂಡ ಕಾರ್ಯಪ್ಪ ಆಪಾದಿಸಿದರು.

ವಿರಾಜಪೇಟೆ ಮಾಜಿ ಸೈನಿಕರ ಸಂಘದ ಕಟ್ಟಡದ ಮೂರನೇ ಅಂತಸ್ತಿನ ಮಳಿಗೆ ಉದ್ಘಾಟನೆ ಹಾಗೂ ಲಿಫ್ಟ್ ಸೌಲಭ್ಯ ಚಾಲನೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಸೈನಿಕರು ಕರ್ತವ್ಯದಲ್ಲಿ ದೇಶ ಕಾಯುವಾಗ ಎಷ್ಟೆಲ್ಲ ಕಷ್ಟ ಪಡಬೇಕಾಗಿದೆ. ನಂತರ ನಿವೃತ್ತರಾದ ಬಳಿಕ ಮಾಜಿ ಸೈನಿಕರನ್ನು ನಿರ್ಲಕ್ಷಿಸುವುದು ಸರಿಯಲ್ಲ. ಮಾಜಿ ಸೈನಿಕರಿಗೆ ಸಿಗುವಂತ ಸರಕಾರದ ಎಲ್ಲಾ ಸೌಲಭ್ಯಗಳು ದೊರಕುವಂತಾಗಬೇಕು ಎಂದರು.

ವಿರಾಜಪೇಟೆ ಡಿಹೆಚ್ಎಸ್ ಸಂಸ್ಥೆಯ ದುದ್ದಿಯಂಡ ಸೂಫಿ ಹಾಜಿ ರಿಬ್ಬನ್ ಕತ್ತರಿಸಿ ಲಿಫ್ಟ್‌ಗೆ ಚಾಲನೆ ನೀಡಿದ ಬಳಿಕ ಮಾತನಾಡಿ, ಮಾಜಿ ಸೈನಿಕರ ಸಂಘದಿಂದ ಉತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದು, ಮುಂದೆಯು ಇನ್ನು ಹೆಚ್ಚು ಅಭಿವೃದ್ಧಿ ಕಾರ್ಯಗಳು ನಡೆಯುವಂತಾಗಲಿ, ನಾವುಗಳು ನಿಮ್ಮೊಂದಿಗೆ ಕೈಜೋಡಿಸುವುದಾಗಿ ಹೇಳಿದರು. ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘದ ಕ್ಯಾಂಟೀನ್ ಸಮಾಗ್ರಿಗಳನ್ನು ಮೇಲಂತಸ್ತಿಗೆ ಸಾಗಿಸಲು ಸಮಸ್ಯೆ ಉಂಟಾಗುತ್ತಿತ್ತು ಈ ಕಾರಣದಿಂದ ಸಂಘದ ಸಭೆ ನಡೆಸಿ ಲಿಫ್ಟ್ ವ್ಯವಸ್ಥೆ ಮಾಡಲು ತೀರ್ಮಾನಿಸಿ ಹಣದ ವ್ಯವಸ್ಥೆಗಾಗಿ ಸಂಘ ಸಂಸ್ಥೆಗಳು, ದಾನಿಗಳಿಂದ, ಸ್ಥಳೀಯ ಶಾಸಕರು, ನಾಗರಿಕರಿಂದ ಸಂಗ್ರಯಿಸಿ ರೂ.19 ಲಕ್ಷ ವೆಚ್ಚದಲ್ಲಿ ಲಿಫ್ಟ್ ವ್ಯವಸ್ಥೆ ಮಾಡಲಾಯಿತು ಎಂದು ಸಭೆಗೆ ತಿಳಿಸಿದರು.

ಬಿಸಿಲಿನ ತಾಪಕ್ಕೆ ಬತ್ತುತ್ತಿರುವ ನೀರಿನ ಹರಿವು

ಕಾವೇರಿ ಉಗಮ ಸ್ಥಾನದಲ್ಲೇ ನೀರಿಗೆ ಹಾಹಾಕಾರ



ಕಾವೇರಿ ಉಗಮ ಸ್ಥಾನದಲ್ಲಿ ನೀರಿನ ಹರಿವು ತೀರಾ ಕಡಿಮೆಯಾಗಿರುವುದು.

ರಾಜ್ಯದ ನಾನಾ ಭಾಗಗಳಿಂದ ತ್ರಿವೇಣಿ ಸಂಗಮಕ್ಕೆ ಆಗಮಿಸುವ ನೂರಾರು ಭಕ್ತರು ತಮ್ಮ ಕುಟುಂಬದಲ್ಲಿ ನಿಧನರಾದವರಿಗೆ ಸಂಗಮದಲ್ಲಿ ಪಿಂಡ ಪ್ರದಾನ ಮಾಡುವುದು ಹಿಂದಿನಿಂದಲೂ ನಡೆದುಕೊಂಡು ಬಂದ ಆಚಾರವಾಗಿದೆ. ತ್ರಿವೇಣಿ ಸಂಗಮದಲ್ಲಿ ಪಿಂಡ ಪ್ರದಾನ ಶ್ರೇಷ್ಠವಾಗಿದ್ದು, ಇಲ್ಲಿಯೇ ಪುಣ್ಯ ಸ್ನಾನ ಮಾಡುವ ಹಿನ್ನೆಲೆಯಲ್ಲಿ ಸಂಗಮದಲ್ಲಿ ನೀರು ಬತ್ತದಂತೆ ನೋಡಿಕೊಳ್ಳಲಾಗುತ್ತಿದೆ.

ಮಡಿಕೇರಿ,ಮಾ.13– ಕಾವೇರಿ ನಾಡು ಕೊಡಗಿನಲ್ಲಿ ಈಗಾಗಲೇ ರಣ ಬಿಸಿಲಿನ ತಾಪಕ್ಕೆ ನದಿ ಮೂಲಗಳಲ್ಲಿ ನೀರಿನ ಹರಿವು ಬತ್ತುತ್ತಿದೆ. ಈ ನಡುವೆ ಕಾವೇರಿ ನದಿಯ ಉಗಮ ಸ್ಥಾನದಲ್ಲಿಯೇ ನೀರಿನ ಹರಿವು ಕ್ಷೀಣಿಸುತ್ತಿದ್ದು, ಕಾವೇರಿ, ಕನ್ನಿಕೆ, ಸುಜ್ಯೋತಿ ನದಿಗಳ ಸಂಗಮ ಸ್ಥಳವಾದ ಭಾಗಮಂಡಲದ 'ತ್ರಿವೇಣಿ ಸಂಗಮ'ದಲ್ಲಿ ನದಿ ನೀರಿನ ಹರಿವು ತೀರಾ ಕಡಿಮೆಯಾಗಿದೆ.

ಮಡಿಕೇರಿ ತಾಲೂಕಿನ ಭಾಗಮಂಡಲ ಕ್ಷೇತ್ರದ ತ್ರಿವೇಣಿ ಸಂಗಮದಲ್ಲಿ ನೀರಿನ ಹರಿವು ಕಳೆದ ವರ್ಷಕ್ಕಿಂತ ಈ ಬಾರಿಯ ಬೇಸಿಗೆಯ ಮಾರ್ಚ್ ಎರಡನೇ ವಾರದಲ್ಲೇ ಇಳಿಮುಖ ಕಂಡಿದೆ. ಕಳೆದ ವರ್ಷ ಮೇ ತಿಂಗಳ ಅವಧಿಯಲ್ಲಿ ಸಂಗಮದಲ್ಲಿ ನೀರು ಬತ್ತುವ ಹಂತಕ್ಕೆ ತಲುಪಿತ್ತು ಆದರೆ ಈ ವರ್ಷ ಎರಡು ತಿಂಗಳು ಮುನ್ನವೇ ನೀರು ಬತ್ತುವ ಹಂತಕ್ಕೆ ಬಂದಿರುವುದು ಚಿಂತೆಗೀಡು ಮಾಡಿದೆ. ನೀರಿನ ಹರಿವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಸಂಗಮದ ಕೆಳಭಾಗದಲ್ಲಿ ಹರಿಯುವ ನೀರಿಗೆ ತಾತ್ಕಾಲಿಕ ಚೆಕ್ ಡ್ಯಾಂ ಕಟ್ಟಲಾಗಿದೆ. ಪರಿಣಾಮ ತ್ರಿವೇಣಿ ಸಂಗಮದಲ್ಲಿ 3–4 ಅಡಿ ನೀರು ಸಂಗ್ರಹವಿದೆಯಾದರೂ, ನದಿಯ ತಳಭಾಗ ಕಾಣುತ್ತಿದೆ.

ಕಾವೇರಿ ನದಿಯಲ್ಲಿ ನೀರಿನ ಹರಿವು ಯಥಾ ಪ್ರಕಾರ ಮುಂದುವರೆಯಬೇಕಾದರೆ ಬ್ರಹ್ಮಗಿರಿ, ಚೇರಂಗಾಲ, ಕೋರಂಗಾಲ, ಕೋಳಿಕಾಡು, ಭಾಗಮಂಡಲ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುವ ಅಗತ್ಯವಿದೆ. ಹೀಗಾದಲ್ಲಿ ಮಾತ್ರವೇ ತ್ರಿವೇಣಿ ಸಂಗಮದಲ್ಲಿ ನೀರಿನ ಹರಿವು ಸರಾಗವಾಗಲಿದೆ. ಇದೇ ರೀತಿಯಲ್ಲಿ ತಾಪಮಾನ ಮುಂದುವರೆದಲ್ಲಿ ತ್ರಿವೇಣಿ ಸಂಗಮದಲ್ಲೂ ನೀರು ಬತ್ತಿ ಹೋಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿದೆ.

ಕೋಣಗೇರಿಯಲ್ಲಿ ಹುಲಿ ದಾಳಿಗೆ ಹಸು ಬಲಿ



ಹುಲಿ ದಾಳಿಯಿಂದ ಹಸು ಸಾವನ್ನಪ್ಪಿದ್ದು ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ ವೀಕ್ಷಿಸಿದರು.

ಗೋಣಿಕೊಪ್ಪ : ಹುದಿಕೇರಿ ಸಮೀಪ ಕೋಣಗೇರಿಯಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿದೆ. ಬೆಳೆಗಾರ ಚೆಕ್ಕೇರ ಗಣಪತಿ ಅವರಿಗೆ ಸೇರಿದ ಹಸುವನ್ನು ಗುರುವಾರ ಹಾಡಹಗಲೇ ಹುಲಿ ದಾಳಿ ಮಾಡಿದ್ದು, ಮೇಯಲು ಕಟ್ಟಿದ್ದ ಸಂದರ್ಭ ಹಸುವಿನ ಮೇಲೆ ಹುಲಿ ಎರಗಿದೆ. ಹಸುವಿನ ಸ್ವಲ್ಪ ಭಾಗವನ್ನು ಹುಲಿ ತಿಂದಿದೆ.

ಹುಲಿ ದಾಳಿಯಿಂದ ಸ್ಥಳೀಯ ಬೆಳೆಗಾರರು, ಕಾರ್ಮಿಕರಲ್ಲಿ ಮತ್ತೆ ಆತಂಕ ಮೂಡಿದೆ. ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ತ್ವರಿತ ಕಾರ್ಯಚರಣೆ ಕೈಗೊಳ್ಳುವಂತೆ ಸ್ಥಳೀಯ ಬೆಳೆಗಾರ ಚೆಕ್ಕೇರ ವಾಸು ಕುಟ್ಟಪ್ಪ ಆಗ್ರಹಿಸಿದ್ದಾರೆ.

ಗೃಹರಕ್ಷಕರ ಮನೆಯಲ್ಲಿ ಕಳ್ಳತನ

ಯಳಂದೂರು: ಗೃಹರಕ್ಷಕದ ದಳದಲ್ಲಿ ಹೋಂ ಗಾರ್ಡ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಮನೆಗೆ ಕಳ್ಳರು ಕನ್ನ ಹಾಕಿರುವ ಘಟನೆ ಭಾನುವಾರ ಜರುಗಿದ್ದು, ಈ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನ ಕೆಸ್ತೂರು ಗ್ರಾಮದ ಆದಿಜಾಂಬವರ ಬಡಾವಣೆಯ ನಿವಾಸಿ, ಕೊಳ್ಳೇಗಾಲ ಗೃಹರಕ್ಷಕ ದಳದ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಪುಟ್ಟಲಿಂಗಮ್ಮ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದೆ. ಇವರು ಕಳೆದ ಒಂದು ವಾರದಿಂದ ಕೊಳ್ಳೇಗಾಲ ತಾಲೂಕಿನ ತಿಮ್ಮರಾಜಿಪುರ ಗ್ರಾಮಕ್ಕೆ ತೆರಳಿದ್ದು, ಸಂಬಂಧಿಕರ ತೊಟ್ಟಿಲು ಶಾಸ್ತ್ರ ನಿಮಿತ್ತ ಅಲ್ಲೇ ಉಳಿದುಕೊಂಡಿದ್ದರು.

ಇದನ್ನು ಗಮನಿಸುತ್ತಿದ್ದ ಕಳ್ಳರು ಯಾರೂ ಇಲ್ಲದ ವೇಳೆಯಲ್ಲಿ ಮನೆಗೆ ನುಗ್ಗಿ, ಬಾಗಿಲನ್ನು ಒಡೆದು ಬೀರುವಿನಲ್ಲಿದ್ದ 50 ಸಾವಿರ ರೂ. ನಗದು, 3 ಗ್ರಾಂ ಚಿನ್ನದ ಓಲೆ, ಮನೆಯ ಹುಂಡಿಯಲ್ಲೇ ಶೇಖರಣೆಯಾಗಿದ್ದ 10 ಸಾವಿರ ರೂ. ಚಿಲ್ಲರೆ ಹಣವನ್ನು ದೋಚಿಕೊಂಡು ಪರಾರಿಯಾಗಿದ್ದಾರೆ. ಈ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮುಂದಿನ ಕ್ರಮ ವಹಿಸಿದ್ದಾರೆ.

ಗೃಹಿಣಿ ನಾಪತ್ತೆ ಪ್ರಕರಣ ದಾಖಲು

ಕೊಳ್ಳೇಗಾಲ: ತಾಲೂಕಿನ ಸತ್ತೇಗಾಲ ಗ್ರಾಮದ ಗೃಹಿಣಿಯೊಬ್ಬರು ಕಾಣೆಯಾಗಿರುವ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸತ್ತೇಗಾಲ ಗ್ರಾಮದ ಪ್ರಭುಸ್ವಾಮಿರವರ ಪತ್ನಿ ಜ್ಯೋತಿ(35) ಎಂಬುವರು ಕಾಣೆಯಾದವರು. ಈಕೆ ಮಾ.6 ರಂದು ತನ್ನ ತವರು ಮನೆ ಲೊಕ್ಕನಹಳ್ಳಿ ಗ್ರಾಮಕ್ಕೆ ಹೋಗಿಬರುವುದಾಗಿ ಹೇಳಿ ಹೋಗಿ ಹಿಂತಿರುಗಿ ಬಂದಿಲ್ಲ ಎಂದು ಈಕೆಯ ಪತಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆ



ಕೊಳ್ಳೇಗಾಲದಲ್ಲಿ ತಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ ರೇಣುಕಾಚಾರ್ಯ ಜಯಂತಿಗೆ ನಂದೀಶ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು.

ಕೊಳ್ಳೇಗಾಲ, ಮಾ.13– ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಬುಧವಾರ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಆಚರಣೆ ಮಾಡಲಾಯಿತು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಅಜ್ಜಿಪುರ ಮಠದ ನಂದೀಶ್ ಶಿವಾಚಾರ್ಯ ಸ್ವಾಮೀಜಿ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಶ್ರೀಗಳು, ಭಾರತದ ಪುಣ್ಯಭೂಮಿಯಲ್ಲಿ ಹಲವಾರು ಧರ್ಮಗಳು ಜನ್ಮ ಪಡೆದು ಮಾನವರ ಐಹಿಕ ಉದ್ಧಾರಕ್ಕೆ ಮತ್ತು ಅಲೌಕಿಕ ಪ್ರಾಪ್ತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ಧರ್ಮಗಳ ಸಂಗಮವಾಗಿರುವ ಯೋಗ ತ್ಯಾಗದ ನಾಡು ಈ ನಮ್ಮ ದೇಶದಲ್ಲಿ ವೀರಶೈವ ಧರ್ಮವು ತನ್ನ ವಿಶಿಷ್ಟ ವಿಚಾರಧಾರೆ, ಅರ್ಥಪೂರ್ಣ ಶಿಷ್ಟ ಆಚಾರ ಸಂಹಿತೆಯಿಂದಾಗಿ ಬುದ್ಧಿಜೀವಿಗಳ ಹಾಗೂ ಭಾವನಾ ಜೀವಿಗಳ ಗಮನವನ್ನು ವಿಶ್ವಮಟ್ಟದಲ್ಲಿ ಸೆಳೆದಿದೆ ಎಂದರು.

ದ್ವಾಪರಯುಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರಾಗಿ ಕಲಿಯುಗದಲ್ಲಿ ಶ್ರೀಜಗದ್ಗುರು ರೇವಣಸಿದ್ಧರಾಗಿ ಅವತರಿಸಿ ವೀರಶೈವ ಧರ್ಮ ಸಂಸ್ಥಾಪಕರಾಗಿ ಯುಗ ಪ್ರವರ್ತಕರಾಗಿ ಧರ್ಮ ಸಂರಕ್ಷಣೆಗಾಗಿ ಜಗದಲ್ಲಿ ಶಿವಜ್ಞಾನದ ಬೆಳಕನ್ನು ಬೀರಿದರು. ಕರ್ಮವನ್ನು ಕಳೆದು ಧರ್ಮವನ್ನು ಬಿತ್ತಿ ಬದುಕನ್ನು ಬಂಗಾರಗೊಳಿಸಿದ ಕೀರ್ತಿ ಶ್ರೀಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮಲ್ಲಹಳ್ಳಿ ಮಾಳ ಗ್ರಾಮದ ಸರ್ಕಾರಿ ಶಾಲೆಯ ಸಹ ಶಿಕ್ಷಕ ನಾಗಮಲ್ಲೇಶ್, ಗ್ಯಾರಂಟಿಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ ಮೋಳೆ, ತಹಶೀಲ್ದಾರ್ ಬಸವರಾಜು, ತಾಪಂ ಇಒ ಗುರುಶಾಂತಪ್ಪ ಬೆಳ್ಳುಂಡಗಿ ಮಾತನಾಡಿದರು.

ಬಿಇಒ ಮಂಜುಳಾ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಜಿಲ್ಲಾಧ್ಯಕ್ಷ ಮೂಡ್ಲಪುರ ನಂದೀಶ್, ಹನೂರು ಕ್ಷೇತ್ರದ ಬಿಜೆಪಿ ಯುವ ನಾಯಕ ನಿಶಾಂತ್, ತಾಲೂಕು ಅಧ್ಯಕ್ಷ ಪುಟ್ಟಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಸುಮ ಸುಬ್ಬಣ್ಣ ಮಧುವನಳ್ಳಿ ಪ್ರಭಾಕರ್, ವೀರಭದ್ರಸ್ವಾಮಿ, ಚೇತನ್ ಇನ್ನಿತರರು ಇದ್ದರು.

ಮದ್ಯ, ಮಾದಕ ವಸ್ತುಗಳ ಸೇವನೆ ತ್ಯಜಿಸಲು ದೃಢಸಂಕಲ್ಪ ಮಾಡಿ



ವಿಚಾರ ಸಂಕಿರಣ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ ಉದ್ಘಾಟಿಸಿದರು.

ಚಾಮರಾಜನಗರ, ಮಾ.13– ಜೀವ, ಜೀವನ ಎರಡೂ ಅಮೂಲ್ಯವಾಗಿದ್ದು, ಆರೋಗ್ಯಕ್ಕೆ ಮಾರಕವಾಗಿರುವ ಮದ್ಯ ಮತ್ತು ಮಾದಕ ಪದಾರ್ಥಗಳನ್ನು ತ್ಯಜಿಸಲು ಪ್ರತಿಯೊಬ್ಬರು ದೃಢಸಂಕಲ್ಪ ಮಾಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಸಲಹೆ ನೀಡಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಸುವರ್ಣ ಗಂಗೋತ್ರಿಯಲ್ಲಿಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಸೇವನೆ ದುಷ್ಪರಿಣಾಮಗಳ ಕುರಿತು ಆಯೋಜಿಸಲಾಗಿದ್ದ ವಿಚಾರ ಸಂಕಿರಣ ಹಾಗೂ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮದ್ಯ, ಮಾದಕ ಪದಾರ್ಥ ಸೇವನೆಯಿಂದ ಕುಟುಂಬ ಆರ್ಥಿಕವಾಗಿ ದುಸ್ಥಿತಿಗೆ ತಲುಪಲಿದೆ. ರಸ್ತೆ ಅಪಘಾತಗಳು ಸಂಭವಿಸುತ್ತವೆ. ಮದ್ಯ, ಮಾದಕ ಪದಾರ್ಥಗಳ ಸೇವನೆ ಇತ್ತೀಚೆಗೆ ಮಹಿಳೆಯರಲ್ಲೂ ಕಂಡು ಬರುತ್ತಿದೆ. ಇವುಗಳ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರು, ಯುವಜನರು ಹಾಗೂ ಮಕ್ಕಳಿಗೆ ಬಾಲ್ಯದಿಂದಲೇ ಅರಿವು ಮೂಡಿಸಬೇಕಾಗಿದೆ. ತಂಬಾಕು ದೇಹಕ್ಕೂ, ದೇಶಕ್ಕೂ ಹಾನಿಕರವಾಗಿದ್ದು, ಅವುಗಳನ್ನು ತ್ಯಜಿಸಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಡಾ.ಚಿದಂಬರ ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಮಾತನಾಡಿದರು. ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಸಚಿವ ಆರ್. ಲೋಕನಾಥ್ ನೈಜ ಘಟನೆಗಳನ್ನು ಉದಾಹರಿಸಿ ಮಾತನಾಡಿ, ನಾವು ದಿನನಿತ್ಯ ಸೇವಿಸುವ ಆಹಾರ ಪದಾರ್ಥಗಳಲ್ಲಿ ನಮ್ಮ ಆರೋಗ್ಯಕ್ಕೆ ಒಳ್ಳೆಯದೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಬೇಕಾಗಿದೆ. ಇನ್ನು ಮಾದಕ ಪದಾರ್ಥಗಳ ಸೇವನೆ ಬೇಕೆ, ಬೇಡವೇ ಎಂಬ ಬಗ್ಗೆ ನಮ್ಮ ಆತ್ಮಸಾಕ್ಷಿಯನ್ನೇ ಕೇಳಬೇಕು. ನಮ್ಮ ಮನಸಾಕ್ಷಿಯನ್ನು ಮುಂದಿಟ್ಟು ಮದ್ಯ, ಮಾದಕ ಪದಾರ್ಥಗಳನ್ನು ತ್ಯಜಿಸಿದರೆ ಜಾಗೃತಿಯ ಅವಶ್ಯಕತೆಯೇ ಇಲ್ಲ ಎಂದರು.

ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ಜಿ.ವಿ. ವೆಂಕಟರಮಣ ಅವರು ಮಾತನಾಡಿ, ಮಾದಕ ಪದಾರ್ಥಗಳ ಸೇವನೆಯಿಂದ ಸಾಕಷ್ಟು ಕುಟುಂಬಗಳು ಬೀದಿಗೆ ಬಿದ್ದಿವೆ. ಯುವಜನಾಂಗ ಮದ್ಯ, ತಂಬಾಕು ಸೇವನೆ ತ್ಯಜಿಸಿ ಇತರರಿಗೆ ಮಾದರಿಯಾಗಬೇಕು. ಜಿಲ್ಲೆಯನ್ನು ಆಲ್ಕೋಹಾಲ್ ಮುಕ್ತ ಜಿಲ್ಲೆಯಾಗಿ ಪರಿವರ್ತಿಸಲು ಪಣತೊಡಬೇಕು ಎಂದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋರೋಗ ತಜ್ಞರಾದ ಡಾ. ಮೇರಿ ಅಜಲ ಹಾಗೂ ಮಹೇಶ್ ಅವರು, ಕಾರ್ಯಕ್ರಮದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಸೇವನೆ ದುಷ್ಪರಿಣಾಮಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಯಳಂದೂರಿನ ರಂಗದೇಗುಲ ಕಲಾವೇದಿಕೆಯ ಶಾಂತರಾಜು ಮತ್ತು ತಂಡದವರು ಮದ್ಯ ಮತ್ತು ಮಾದಕ ವಸ್ತುಗಳ ಸೇವನೆ ದುಷ್ಪರಿಣಾಮಗಳ ಕುರಿತು ಜಾಗೃತಿ ಗೀತೆಗಳನ್ನು ಪ್ರಸ್ತುತಪಡಿಸುವ ಮೂಲಕ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎ.ರಮೇಶ, ವಾರ್ತಾ ಸಹಾಯಕ ಸುರೇಶ್‌ಕುಮಾರ್, ವಿಶ್ವವಿದ್ಯಾಲಯದ ಉಪನ್ಯಾಸಕರಾದ ಗುರುರಾಜ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾಡ ಬಂದೂಕು ಹಿಡಿದು ಅಡ್ಡಾಡುತ್ತಿದ್ದ ವ್ಯಕ್ತಿ ಬಂಧನ



ಅಗರ–ಮಾಂಬಳ್ಳಿ ಠಾಣೆಯ ಪೊಲೀಸರು ನಾಡಬಂದೂಕು ಹಿಡಿದು ಅಡ್ಡಾಡುತ್ತಿದ್ದ ಕುಣಗಳ್ಳಿ ಗ್ರಾಮದ ಮಲ್ಲಿಕಾರ್ಜುನ ಎಂಬಾತನನ್ನು ಬಂದೂಕು ಸಮೇತ ಸೆರೆಹಿಡಿದಿರುವುದು.

ಯಳಂದೂರು: ಸಮೀಪದ ಸೂರಪುರ ಗ್ರಾಮದ ಕಬಿನಿ ಕಾಲುವೆಯ ರಸ್ತೆಯಲ್ಲಿ ನಾಡ ಬಂದೂಕು ಹಿಡಿದು ಅಡ್ಡಾಡುತ್ತಿದ್ದ ವ್ಯಕ್ತಿಯನ್ನು ತಾಲೂಕಿನ ಅಗರ–ಮಾಂಬಳ್ಳಿ ಪೊಲೀಸರು ಬಂಧಿಸಿದ್ದಾರೆ.

ಕುಣಗಳ್ಳಿ ಗ್ರಾಮದ ಜೆಸಿಬಿ ಚಾಲಕ ಮಲ್ಲಿಕಾರ್ಜುನ ಎಂಬಾತನೇ ಬಂಧಿತ ವ್ಯಕ್ತಿ. ಈತ ಅರೆಪಾಳ್ಯದ ಕಡೆಯಿಂದ ಸೂರಪುರದ ಕಬಿನಿ ಕಾಲುವೆ ರಸ್ತೆಯಲ್ಲಿ ಒಂದು ನಳಿಕೆಯ ನಾಡ ಬಂದೂಕು ಹಿಡಿದು ತೆರಳುತ್ತಿದ್ದನೆಂಬ ಖಚಿತ ಮಾಹಿತಿ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ನಿರ್ದೇಶನದಂತೆ ಡಿವೈಎಸ್ಪಿ ಎಂ. ಧರ್ಮೇಂದ್ರ ಹಾಗೂ ಸಿಪಿಐ ಶ್ರೀಕಾಂತ್ ಮಾರ್ಗದರ್ಶನದಲ್ಲಿ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಕರಿಬಸಪ್ಪ ನೇತೃತ್ವದಲ್ಲಿ ಪೊಲೀಸರ ತಂಡ ಧಾಳಿ ನಡೆಸಿದೆ. ಆರೋಪಿಯನ್ನು ಬಂದೂಕು ಸಮೇತ ಬಂಧಿಸಿದ್ದಾರೆ. ವಿಚಾರಣೆ ವೇಳೆ ಕಾಡು ಪ್ರಾಣಿಯನ್ನು ಬೇಟೆಯಾಡಲು ಈ ಬಂದೂಕನ್ನು ಬಳಸುತ್ತಿದ್ದನೆಂದು ತಿಳಿದು ಬಂದಿದೆ. ಈತನ ವಿರುದ್ಧ ದೂರು ದಾಖಲಿಸಿಕೊಂಡು ಪೊಲೀಸರು ಮುಂದಿನ ಕ್ರಮ ವಹಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಹೆಡ್ ಕಾನ್ಸ್ಟೇಬಲ್ ಪರಶಿವಮೂರ್ತಿ, ಎಸ್.ಬಿ.ಶಿವಕುಮಾರ್, ಉಸ್ಮಾನ್, ಯೋಗೇಶ್, ಬಸವರಾಜು, ಮಲ್ಲೇಶ್ ಇದ್ದರು.

ಬಿಳಿಗಿರಿರಂಗನಬೆಟ್ಟದಲ್ಲಿ ಕೆಲಹೊತ್ತು ಸುರಿದ ಮಳೆ, ತಂಪಾದ ಕಾಡು

ಯಳಂದೂರು: ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಬುಧವಾರ ಸಂಜೆ 5 ಗಂಟೆ ವೇಳೆಯಲ್ಲಿ ಕೆಲ ಹೊತ್ತು ಮಳೆ ಸುರಿಯಿತು.

ತಾಲೂಕಿನ ಬಿಳಿಗಿರಿರಂಗನಬೆಟ್ಟದ ತಪ್ಪಲಿನಲ್ಲಿರುವ ಕೆ.ದೇವರಹಳ್ಳಿ, ಮುರುಟಿಪಾಳ್ಯ, ಬೆಲ್ಲವತ್ತ, ಗುಂಬಳ್ಳಿ ಚೆಕ್ಪೋಸ್ಟ್, ಪುರಾಣಿಪೋಡು, ಯರಕನಗದ್ದೆ, ಕನ್ನೇರಿ ಕಾಲೋನಿ, ಬಂಗ್ಲೆಪೋಡು, ಬಿಳಿಗಿರಿರಂಗನಾಥಸ್ವಾಮಿ ದೇಗುಲ ಸೇರಿದಂತೆ ಅನೇಕ ಕಡೆ ಮಳೆಯಾಗಿದೆ. ಇದರಿಂದ ಬೆಟ್ಟದಲ್ಲಿ ತಂಪು ವಾತಾವರಣ ನಿರ್ಮಾಣಗೊಂಡಿತ್ತು. ಅಲ್ಲದೆ ಬೆಟ್ಟಕ್ಕೆ ಬಂದಿದ್ದ ಪ್ರವಾಸಿಗರೂ ಈ ವರ್ಷದ ಮಳೆಯ ಸಿಂಚನದಿಂದ ಪುಳಕಿತಗೊಂಡಿದ್ದಾರೆ. ಹಲವು ದಿನಗಳಿಂದ ಬಿಸಿಲಿನ ಬೇಗೆಗೆ ಬಿಳಿಗಿರಿರಂಗನಬೆಟ್ಟದಲ್ಲೂ ತಾಪಮಾನದಲ್ಲಿ ಏರಿಕೆ ಕಂಡು ಬಂದಿತು. ಈ ವರ್ಷ ಮಾರ್ಚ್‌ನಲ್ಲೇ ಮಳೆ ಬಂದಿದೆ. ಈಗ ಕೇವಲ ಮಳೆಯ ಸಿಂಚನವಾಗಿದೆ. ಜೋರಾಗಿ



ಮಳೆಯಾದಲ್ಲಿ, ಇಲ್ಲಿನ ಕೆರೆಕಟ್ಟೆಗಳು ತುಂಬುತ್ತವೆ. ಕಾಡಿಗೆ ಜೀವ ಕಳೆ ಬರುತ್ತದೆ. ಕಾಡು ಪ್ರಾಣಿಗಳಿಗೂ ಸಮೃದ್ಧ ಮೇವು ಹಾಗೂ ನೀರು ಲಭಿಸುತ್ತದೆ. ಇನ್ನಷ್ಟು ಮಳೆ ಬಿದ್ದು ಎಲೆ ಉದುರಿರುವ ಕಾಡು ಬೇಗ ಚಿಗುರಲಿದೆ ಎಂದು ಇಲ್ಲಿನ ವಾಸಿಗಳು ಮಾಹಿತಿ ನೀಡಿದರು.

ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಕ್ತಿ ಬಂಧನ



ಕೊಳ್ಳೇಗಾಲ ತಾಲೂಕಿನ ಹಂಪಾಪುರ ಬಳಿ ಅಕ್ರಮ ಅಕ್ಕಿ ಸಾಗಣೆ ಆರೋಪಿ ಜೊತೆ ಪಟ್ಟಣ ಪೊಲೀಸರು ಮತ್ತು ಆಹಾರ ಇಲಾಖಾಧಿಕಾರಿಗಳು.

ಕೊಳ್ಳೇಗಾಲ. ಮಾ.13– ಸರ್ಕಾರ ನೀಡುವ ಪಡಿತರ ಅಕ್ಕಿಯನ್ನು ಪ್ಯಾಸೆಂಜರ್ ಆಟೋದಲ್ಲಿ ಅಕ್ರಮವಾಗಿ ಸಂಗ್ರಹಿಸಿ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಪಟ್ಟಣ ಪೊಲೀಸರು ಬಂಧಿಸಿ, 10 ಮೂಟೆ ಅಕ್ಕಿಯನ್ನು ಗುರುವಾರ ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ನಾಯಕರ ಬೀದಿ ವಾಸಿ ಚಾಲಕ ದಿಲೀಪ್(27) ಬಂಧಿತ ಆರೋಪಿ. ಈತನಿಂದ 432 ಕೆಜಿ ಅಕ್ಕಿ ಹಾಗೂ ಸಾಗಾಣಿಕೆಗೆ ಬಳಸಿದ್ದ ಪ್ಯಾಸೆಂಜರ್ ಆಟೋವನ್ನು ಇದೆ ವೇಳೆ ಪಟ್ಟಣ ಪೊಲೀಸರು ಮತ್ತು ಆಹಾರ ಇಲಾಖೆ ಜಂಟಿ ಕಾರ್ಯಾಚರಣೆ ವೇಳೆ ಜಪ್ತಿ ಮಾಡಿದ್ದಾರೆ. ಆರೋಪಿ ಪಟ್ಟಣದಲ್ಲಿ ಕಡಿಮೆ ಬೆಲೆಗೆ ಉಚಿತ ಪಡಿತರೆ ಅಕ್ಕಿಯನ್ನು ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಹಿನ್ನೆಲೆ ನರಸೀಪುರದ ಕಡೆಗೆ ಸಾಗಾಣಿಕೆ ಮಾಡುತ್ತಿರುವ ಮಾಹಿತಿಯನ್ನು ಖಚಿತಪಡಿಸಿಕೊಂಡ ಮೇರೆಗೆ ಪಟ್ಟಣ ಪೊಲೀಸ್ ಠಾಣೆಯ ಎಸ್ಐ ಕುಮಾರಿ ವರ್ಷ, ಆಹಾರ ಇಲಾಖೆಯ ನಿರೀಕ್ಷಕ ರಾಜೇಂದ್ರ ಪ್ರಸಾದ್, ಸಿಬ್ಬಂದಿಗಳಾದ ರಾಜು, ವೀರೇಂದ್ರ ಇನ್ನಿತರರು ಪಟ್ಟಣ ಠಾಣಾ ವ್ಯಾಪ್ತಿಯ ಹೊಸ ಹಂಪಾಪುರ ಗ್ರಾಮದ ಎನ್.ಹೆಚ್.ಫ್ಲೈಓವರ್ ಸೇತುವೆ ಬಳಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ರಾವೆನ್ ಟ್ರೇಲರ್ ಬಿಡುಗಡೆ

ಕಾಗೆಯೇ ಚಿತ್ರದ ನಾಯಕ..!





ಕನ್ನಡದಲ್ಲಿ ಬೇರೆ ಬೇರೆ ಪ್ರಾಣಿ ಹಾಗೂ ಪಕ್ಷಿಗಳನ್ನು ಪ್ರಧಾನವಾಗಿಟ್ಟುಕೊಂಡು ಸಾಕಷ್ಟು ಚಲನಚಿತ್ರಗಳು ನಿರ್ಮಾಣವಾಗಿವೆ, ಆದರೆ ಆತ್ಮ ಸಿನಿಮಾಸ್ ಹಾಗೂ ವಿಶ್ವ ಪ್ರೊಡಕ್ಷನ್ಸ್ ಅಡಿ ಪ್ರಬಿಕ್ ಮೊಗವೀರ್ ಮತ್ತು ವಿಶ್ವನಾಥ್ ನಿರ್ಮಾಣದ ರಾವೆನ್ ಚಿತ್ರದಲ್ಲಿ ಕಾಗೆಯೇ ಪ್ರಮುಖ ಪಾತ್ರಧಾರಿ. ಒಂದು ಕಾಗೆಯನ್ನಿಟ್ಟುಕೊಂಡು ನಿರ್ದೇಶಕ ವೇದ್ ಈ ಚಿತ್ರದ ಕಥಾಹಂದರ ಹೆಣೆದಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ನಿರ್ದೇಶಕ ವೇದ್ ಮಾತನಾಡುತ್ತ ರಾವೆನ್ ಇದು ಕಾಗೆಯ ಹೆಸರು. ಸಾಮಾನ್ಯವಾಗಿ ಕಾಗೆ ಮುಟ್ಟಿದರೆ ಸ್ನಾನ ಮಾಡಬೇಕು. ಅದು ವಾಹನದ ಮೇಲೆ ಕೂತರೆ ವಾಹನವನ್ನೇ ಬದಲಿಸಬೇಕು. ಕಾಗೆ ಮನೆಯೊಳಗೆ ಬರಬಾರದು. ಹೀಗೆ ಅನೇಕ ಮೂಢನಂಬಿಕೆಗಳು ಜನರಲ್ಲಿದೆ. ಆದರೆ ಕಾಗೆಗಿರುವ ಒಳ್ಳೆಯ ಗುಣವನ್ನು ಇತರೆ ಪಕ್ಷಿಗಳಲ್ಲಿ ನೋಡುವುದು ಕಡಿಮೆ. ಒಂದು ಹಿಡಿ ಅನ್ನ ಸಿಕ್ಕರೆ, ಅದು ತನ್ನೆಲ್ಲಾ ಬಳಗವನ್ನು ಕರೆದು ತಿನ್ನುವ ಪ್ರಾಣಿ. ಇಂತಹ ಕಾಗೆಯನ್ನೇ ಪ್ರಧಾನವಾಗಿಟ್ಟುಕೊಂಡು ನಿರ್ಮಾಣವಾದ, ತಾಂತ್ರಿಕವಾಗಿ ಹೆಚ್ಚು ಶ್ರೀಮಂತವಾಗಿರುವ ಈ ಚಿತ್ರದ ಸಿಜಿ ವರ್ಕ್ ಎಲ್ಲರ ಗಮನ ಸೆಳೆಯುತ್ತದೆ. ಸದ್ಯ ಚಿತ್ರದ ಎಲ್ಲಾ ಚಟುವಟಿಕೆಗಳು ಪೂರ್ಣಗೊಂಡಿದ್ದು, ತೆರೆಗೆ ಬರುವ ಹಂತದಲ್ಲಿದೆ. ದಿಲೀಪ್ ಪೈ ಚಿತ್ರದ ನಾಯಕನಾಗಿದ್ದು, ದೇವದೇವಯ್ಯ, ಸ್ವಪ್ನ ಶೆಟ್ಟಿಗಾರ್, ಶ್ರೇಯಾ ಆರಾಧ್ಯ, ಸುಚೇಂದ್ರ ಪ್ರಸಾದ್, ಲೀಲಾ ಮೋಹನ್ ಚಿತ್ರದಲ್ಲಿದ್ದಾರೆ ಎಂದರು.

ನಿರ್ಮಾಪಕರಾದ ಪ್ರಬಿಕ್ ಮೊಗವೀರ್ ಮಾತನಾಡುತ್ತಾ, ಮೂಲತಃ ಸಂಕಲನಕಾರರಾದ ವೇದ್ ಈ ಕಥೆ ಹೇಳಿದಾಗ ಇಷ್ಟವಾಗಿ ಚಿತ್ರನಿರ್ಮಾಣಕ್ಕೆ ಮುಂದಾದೆ ನಂತರ ವಿಶ್ವನಾಥ್ ಜೊತೆಯಾದರು. ಚಿತ್ರವನ್ನು ಮುಂದಿನ ತಿಂಗಳು ರಿಲೀಸ್ ಮಾಡುವ ಯೋಜನೆಯಿದೆ ಎಂದರು.

ಚಿತ್ರದ ನಾಯಕ ದಿಲೀಪ್ ಪೈ ಮಾತನಾಡುತ್ತ ಬಹಳ ದಿನಗಳ ಗ್ಯಾಪ್ ನಂತರ ನಾನೀ ಚಿತ್ರದಲ್ಲಿ ನಟಿಸಿದ್ದೇನೆ. ಕಾಗೆ ಶನಿ ಮಹಾತ್ಮನ ವಾಹನ. ಅಂಥ ಕಾಗೆಯ ಕುರಿತಾದ ಚಿತ್ರವಿದು. ನನ್ನನ್ನು ಎಲ್ಲರೂ ಚಿತ್ರದ ನಾಯಕ ಎನ್ನುತ್ತಿದ್ದಾರೆ. ಆದರೆ ಈ ಚಿತ್ರದ ನಿಜವಾದ ನಾಯಕ ಕಾಗೆಯೇ. ನಾನು ಅದರ ಸಹ ಪಾತ್ರಧಾರಿ ಅಷ್ಟೇ ಎಂದರು. ನಟ ದೇವ್ ದೇವಯ್ಯ, ನಾಯಕಿ ಸ್ವಪ್ನ ಶೆಟ್ಟಿಗಾರ್, ನಟ ಲೀಲಾ ಮೋಹನ್, ಸಂಗೀತ ನಿರ್ದೇಶಕ ಮ್ಯಾಡ್ ಡಿ ಹಾಗೂ ಛಾಯಾಗ್ರಾಹಕ ರಾಕೇಶ್ ಚಿತ್ರದ ಕುರಿತಂತೆ ಮಾಹಿತಿ ನೀಡಿದರು.

ಮರಳಿ ಮನಸಾಗಿದೆ

ಚಿತ್ರದ ಮೊದಲ ಹಾಡು ಬಿಡುಗಡೆ



ಸಂಬಂಧಗಳ ಮೌಲ್ಯವನ್ನು ಎತ್ತಿ ಹಿಡಿಯುವ ಕಥಾಹಂದರ ಇರುವ ಮರಳಿ ಮನಸಾಗಿದೆ ಚಿತ್ರದ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ದಾವಣಗೆರೆಯ ಮುದೇಗೌಡ್ರು ನವೀನ್ ಕುಮಾರ್ ಹಾಗೂ ತೆಲಿಗಿ ಮಲ್ಲಿಕಾರ್ಜುನಪ್ಪ ಅವರ ನಿರ್ಮಾಣದ ಈ ಚಿತ್ರಕ್ಕೆ ನಾಗರಾಜ್ ಶಂಕರ್ ಆಕ್ಷನ್ ಕಟ್ ಹೇಳಿದ್ದಾರೆ. ನಾಯಕನಾಗಿ ಅರ್ಜುನ್ ವೇದಾಂತ್, ನಾಯಕಿಯರಾಗಿ ನಿರೀಕ್ಷಾ ಶೆಟ್ಟಿ ಹಾಗೂ ಸ್ಮತಿ ವೆಂಕಟೇಶ್ ನಟಿಸಿದ್ದಾರೆ. ಇತ್ತೀಚೆಗೆ "ಮರಳಿ ಮನಸಾಗಿದೆ" ಚಿತ್ರದ ಮೊದಲ ಹಾಡನ್ನು ಶಾಸಕ ಅಶ್ವಥ್ ನಾರಾಯಣ್ ಅವರು ಬಿಡುಗಡೆ ಮಾಡಿದರು.

ನಿರ್ದೇಶಕ ನಾಗರಾಜ್ ಶಂಕರ್ ಮಾತನಾಡುತ್ತ, ಇದೊಂದು ಸಂಗೀತ ಪ್ರಧಾನ ಚಿತ್ರ. ವಿನು ಮನಸು ಅವರ ಸಂಗೀತದ ಸುಂದರ ಹಾಡುಗಳು ಚಿತ್ರದಲ್ಲಿವೆ. ಅದರಲ್ಲಿ "ಎದುರಿಗೆ ಬಂದರೆ ಹೃದಯಕೆ ತೊಂದರೆ" ಎಂಬ ಹಾಡು ಇಂದು ಬಿಡುಗಡೆಯಾಗಿದೆ. ಇದೊಂದು ಯುವಜನತೆಗೆ ಹತ್ತಿರವಾದ ಚಿತ್ರ. ಜೊತೆಗೆ ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಚಿತ್ರವೂ ಹೌದು. ಇದಲ್ಲದೆ ಮೆಡಿಕಲ್‌ಗೆ ಸಂಬಂಧಪಟ್ಟ ಪ್ರಮುಖ ವಿಷಯವೂ ಸಹ ಚಿತ್ರದಲ್ಲಿದೆ. ಇಂಟರ್‌ವೆಲ್‌ಗೆ ಮುಂಚೆ ಒಂದು ಸಿನಿಮಾ, ಇಂಟರ್‌ವೆಲ್ ನಂತರ ಮತ್ತೊಂದು ಸಿನಿಮಾ ತೆರೆಮೇಲೆ ಬರಲಿದೆ. ಎರಡು ಕಿರುಚಿತ್ರಗಳನ್ನು ನಿರ್ದೇಶಿಸಿರುವ ನನಗೆ ಇದು ಮೊದಲ ಚಿತ್ರ ಎಂದು ಹೇಳಿದರು.

ನಿರ್ಮಾಪಕ ಮುದೇಗೌಡ್ರ ನವೀನ್ ಕುಮಾರ್ ಮಾತನಾಡಿ, ನಾನು ದಾವಣಗೆರೆಯವನು. ನಮ್ಮೂರಲ್ಲೇ ಚಿತ್ರೀಕರಣ ಆರಂಭವಾಗಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಶೂಟಿಂಗ್ ನಡೆದಿದೆ. ನನಗೆ ಚಿತ್ರನಿರ್ಮಾಣಕ್ಕೆ ಹುರಿದುಂಬಿಸಿದವರು ತೆಲಿಗಿ ಮಲ್ಲಿಕಾರ್ಜುನಪ್ಪ. ಚಿತ್ರದ ಮೊದಲ ಹಾಡು ಶಾಸಕ ಅಶ್ವಥ್ ನಾರಾಯಣ್ ಅವರಿಂದ ಬಿಡುಗಡೆಯಾಗಿದೆ. ದಿ.23ರಂದು ಕಲ್ಬುರ್ಗಿಯಲ್ಲಿ ಎರಡನೇ ಹಾಡು ಬಿಡುಗಡೆಯಾಗಲಿದೆ. ಉಳಿದ ಹಾಡುಗಳನ್ನು ಬೇರೆ ಬೇರೆ ಊರುಗಳಲ್ಲಿ ರಿಲೀಸ್ ಮಾಡುವ ಯೋಚನೆ ಇದೆ ಎಂದರು.

ನಾಯಕ ಅರ್ಜುನ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆ ನನಗೆ ಬಹಳ ಇಷ್ಟವಾಯಿತು. ಚಿತ್ರದ ಪ್ರಮೋಷನ್‌ನ್ನು ಶುರು ಮಾಡಿದ್ದೇವೆ, ಕರ್ನಾಟಕದೆಲ್ಲೆಡೆ ಚಿತ್ರದ ಬಗ್ಗೆ ಪ್ರಚಾರ ಮಾಡುತ್ತೇವೆ. ಇಲ್ಲಿ ನನ್ನ ಪಾತ್ರದ ಹೆಸರು ಮನೋಜ್. ಇದು ಪರಿಶುದ್ಧ ಮನರಂಜನೆಯ ಚಿತ್ರ ಎಂದರು. ನಾಯಕಿ ಸ್ಮತಿ ವೆಂಕಟೇಶ್, ರಘು ಸಿರುಂಡೆ, ಸಂಗೀತ ನಿರ್ದೇಶಕ ವಿನು ಮನಸು ಸಿನಿಮಾ ಕುರಿತು ಮಾಹಿತಿ ನೀಡಿದರು. ಛಾಯಾಗ್ರಾಹಕ ಹಾಲೇಶ್, ಸಂಕಲನಕಾರ ಹರೀಶ್ ಕೊಮ್ಮೆ ಹಾಗೂ ವಿಜಯ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಠಾಣೆ ಕೇರಾಫ್ ಶ್ರೀರಾಮ್‌ಪುರ

ನ್ಯಾಯಕ್ಕಾಗಿ ನಾಯಕನ ಹೋರಾಟ





ಇಪ್ಪತ್ತು ವರ್ಷಗಳ ಹಿಂದೆ ದೃಶ್ಯ ಮಾಧ್ಯಮಗಳು, ಪೊಲೀಸ್ ವ್ಯವಸ್ಥೆಯಲ್ಲಿ ಟೆಕ್ನಾಲಜಿ ಅಷ್ಟು ಮುಂದುವರೆದಿಲ್ಲದ ಕಾಲದಲ್ಲಿ ನ್ಯಾಯಕ್ಕಾಗಿ ಜನರೇ ಹೋರಾಟ ಮಾಡಿ ಸಂಬಂಧಪಟ್ಟ ಇಲಾಖೆಗಳ ಗಮನ ಸೆಳೆಯುತ್ತಿದ್ದರು. ಅಂಥಾ ಕಾಲದಲ್ಲಿ ನಾಯಕ ಕಾಳಿ ನ್ಯಾಯಕ್ಕಾಗಿ ಯಾವ ರೀತಿಯ ಹೋರಾಟ ನಡೆಸಿ ಗೆಲುವು ಸಾಧಿಸಿದ ಎಂಬುದನ್ನು ಠಾಣೆ ಕೇರಾಫ್ ಶ್ರೀರಾಮ್‌ಪುರ ಚಿತ್ರದ ಮೂಲಕ ನಿರ್ದೇಶಕ ಎಸ್. ಭಗತ್ ರಾಜ್ ಅವರು ಹೇಳಹೊರಟಿದ್ದಾರೆ. ಇತ್ತೀಚೆಗೆ ಈ ಚಿತ್ರಕ್ಕಾಗಿ ಮಜಾ ಟಾಕೀಸ್ ಖ್ಯಾತಿಯ ರೆಮೋ ರಚನೆಯ, ಮಾನಸ ಹೊಳ್ಳ ಅವರ ಸಂಗೀತ ಸಂಯೋಜನೆಯ "ಬಾಳಿನಲ್ಲಿ ಭರವಸೆಯ ಬೆಳಕು" ಎಂಬ ಅರ್ಥಗರ್ಭಿತ ಹಾಡನ್ನು ನಟ ರಿಷಿ ಹಾಗೂ ಪೊಲೀಸ್ ಅಧಿಕಾರಿ ರವಿ ಡಿ. ಚನ್ನಣ್ಣನವರ್ ಅವರುಗಳು ಬಿಡುಗಡೆ ಮಾಡಿದರು.


ಈಗಾಗಲೇ "ಠಾಣೆ" ಚಿತ್ರದ ಚಿತ್ರೀಕರಣ ಹಾಗೂ ನಂತರದ ಚಟುವಟಿಕೆಗಳು ಮುಕ್ತಾಯವಾಗಿದ್ದು, ತೆರೆಗೆ ಬರುವ ಹಂತದಲ್ಲಿದೆ. ಕಳೆದ ಕೆಲ ವರ್ಷಗಳಿಂದ ಚಿತ್ರರಂಗದಲ್ಲಿ ಸಹ, ಸಾಹಸ ಕಲಾವಿದನಾಗಿ ಗುರುತಿಸಿಕೊಂಡಿರುವ ಹಾಗೂ ರಂಗಭೂಮಿ ಕಲಾವಿದ ಪ್ರವೀಣ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಮೈಸೂರಿನ ಹರಿಣಾಕ್ಷಿ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ, ನಾಯಕ ಪ್ರವೀಣ್ ಮಾತನಾಡುತ್ತ, ರಂಗಭೂಮಿ ಅನುಭವದಿಂದ ಮೊದಲ ಬಾರಿಗೆ ಈ ಚಿತ್ರದ ನಾಯಕನಾಗಿ ಬಣ್ಣ ಹಚ್ಚುತ್ತಿದ್ದೇನೆ, ನ್ಯಾಯಕ್ಕಾಗಿ ಹೋರಾಡುವ ಕಾಳಿ ಎಂಬ ಯುವಕನಾಗಿ ನಾನು ಕಾಣಿಸಿಕೊಂಡಿದ್ದೇನೆ. ಚಿತ್ರದ ಬಹುತೇಕ ಕಥೆ ಶ್ರೀರಾಮಪುರದಲ್ಲೇ ನಡೆಯುತ್ತದೆ. ನಾನು ಕೂಡ ಅದರ ಪಕ್ಕದಲ್ಲಿರುವ ಗಾಯತ್ರಿನಗರದವನು. ಶ್ರೀರಾಮಪುರವನ್ನು ತೀರ ಹತ್ತಿರದಿಂದ ಬಲ್ಲೆ, ಹಾಗಾಗಿ ಈ ಚಿತ್ರದಲ್ಲಿ ನಟಿಸುವುದು ಸುಲಭವಾಯಿತು ಎಂದು ಹೇಳಿದರು.

ಸಂಗೀತ ನಿರ್ದೇಶಕಿ ಮಾನಸ ಹೊಳ್ಳ ಮಾತನಾಡುತ್ತ, ಚಿತ್ರದಲ್ಲಿ ಕೇವಲ ಎರಡು ಹಾಡುಗಳಿದ್ದು, ಈಗ ರಾಜೇಶ್‌ಕೃಷ್ಣ ಅವರು ಹಾಡಿದ ಸಾಂಗ್ ಬಿಡುಗಡೆಯಾಗಿದೆ. ಮತ್ತೊಂದು ಹಾಡನ್ನು ಸದ್ಯದಲ್ಲೇ ರಿಲೀಸ್ ಮಾಡುತ್ತಿದ್ದೇವೆ ಎಂದು ಹೇಳಿದರು. ಛಾಯಾಗ್ರಾಹಕ ಪ್ರಶಾಂತ್ ಸಾಗರ್, ಚಿತ್ರದ ನಿರ್ಮಾಪಕಿ ಗಾಯತ್ರಿ ಸಿನಿಮಾ ಕುರಿತಂತೆ ಮಾತನಾಡಿದರು. ಬಿ.ವಿ. ರಾಜರಾಂ, ಬಲರಾಜ್ವಾಡಿ, ರೋಹಿತ್ ನಾಗೇಶ್, ಕುಲದೀಪ್, ಸಂತೋಷ್ ಕರ್ಕಿ, ಭೀಷ್ಮ ರಾಮಯ್ಯ, ನಾಗರಾಜ್, ಪಿ.ಡಿ.ಸತೀಶ್‌ಚಂದ್ರ ಪ್ರವೀಣ್ ಜಾನ್, ಪೂಜಾರಾವ್, ಕುಮಾರಿ ದೀಪಿಕಾ ಸೇರಿದಂತೆ ಅನೇಕ ರಂಗಭೂಮಿ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಸಿನಿಪದಬಂಧ-568

ಉಮ್ಮತ್ತೂರು ಇಂದುಶೇಖರ್
ಮೊ.9880820462





ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಕುಂಕುಮವಿರುವುದೇ ಹಣೆಗಾಗಿ.. ಶುಭದಿನ ಕಾದಿದೆ ನಮಗಾಗಿ ನೀನಿರುವೆ ನನಗಾಗಿ _ _ _ _ _ _ _ _ _ 9
6. ಧಾನ್ಯವೊಂದರ ಜೊತೆ ಹಕ್ಕಿಯೊಂದು ಸೇರಿದರೆ ನಟಿಯೊಬ್ಬಳು ಪ್ರತ್ಯಕ್ಷ! 3
7. ಸರ್ಪ ತೋರಿದ ಪವಾಡಕ್ಕೆ ಇಳೆಯ ರಾಜನ ಸಂಗೀತವಿದೆ 6
10. ರಾಜಣ್ಣನ ಹುಟ್ಟಿನಲ್ಲಿನ ಗೌಪ್ಯತೆ 5
12. ಶಂಕರ್‌ನಾಗ್ ಅಭಿನಯದಲ್ಲಿ ನರ-ರಾಕ್ಷಸ ಇದ್ದಾರೆ 6
14. 'ಬಂದೂಕು' ಹೀಗೊಂದು ಹೆಸರು 2
15. ರಮೇಶ್ ಅರವಿಂದ್ 'ಕೊಲೆಗಾರ' 3
16. ಇಂದ್ರನ ಆನೆ ಮೇಲೆ ದರ್ಶನ್ ಸವಾರಿ ! 4
17. ಕ್ರೇಜಿ ರವಿಯ ಪ್ರೀತಿಯ ಪ್ರಪಂಚ! 4
19. ಲಾಕಪ್ ಡೆತ್ ನಾಯಕಿಯಲ್ಲಿ ಕೋಪ ಅಡಗಿದೆ 3
20. ದೊಡ್ಡಣ್ಣ, ಸುದೀಪ್, ಸಾಧು ಅಭಿನಯದ ಚಿತ್ರ 7

ಮೇಲಿನಿಂದ ಕೆಳಕ್ಕೆ

1. _ _ _ _ _ _ _ ಕನ್ನಡ ತಾಯಿಯ ಪ್ರೇಮದ ಕುವರ ಅನೀತಿ ಅಳಿಸಿ.... 7
2. ಕೃಷ್ಣನ ಜೊತೆಗಾತಿ 3
3. ವಿನೋದ್ ಆಳ್ವಾನ ಸುರ ಸರ್ಪ 4
4. ವಿಷ್ಣುವರ್ಧನ್-ಮಂಜುಳಾ ಶರ್ಮಾ ಅಭಿನಯದ ಚಿತ್ರ 5
5. ಈಕೆಯ ನೋಡಲು ಮುಕುಂದ ಬೃಂದಾವನದಿಂದ ಬಂದ 2
8. ಅನಂತ್‌ನಾಗ್ ಅಭಿನಯದಲ್ಲಿ ರಾಮಕೃಷ್ಣನಿಗಿರುವ ಬಿರುದು 4
9. ಪ್ರಾಣಕ್ಕೆ ಪ್ರಾಣ ಅರ್ಥವಿರುವ ಚಿತ್ರ 5
11. ಪುನೀತ್ ಯುದ್ಧ ಶೂರ 5
13. ಅಂಬರೀಶ್-ಪ್ರಿಯಾಂಕ ಅಭಿನಯದ ಚಿತ್ರ 6
16. ರಾಕೆಟ್ ಚಿತ್ರದ ಹೀರೋಯಿನ್ 3
18. ತಾಯಿ_ _ _ 3

ಸಿನಿ ಪದಬಂಧ 567ರ ಉತ್ತರ


ನಾ	ನು	ಅ	ವ	ನ	ಲ್ಲ	ಅ	ವ	ಳು		
ರಿ		ರ್ಜ		ರ		ಮ			ಅಂ	
ಯ	ಮು	ನಾ		ಸಿಂ	ಧೂ	ರ	ತಿ	ಲ	ಕ	
ಸೀ				ಹ		ಜ್ಯೋ				ಕಾ
ರೆ		ಗಾ				ತಿ	ರು	ಗು	ಬಾ	ಣ
ಕ	ರು	ಳಿ	ನ	ಕೂ	ಗು			ಣ		ದ
ದ್ದ		ಗೋ			ರು		ಲಿ	ಸಾ		ಕೈ
		ಪು		ಅಂ	ಜ	ನಾ		ಗ		
ಅ	ತಿ	ರ	ಥ		ಗ		ಪಾ	ರಿ	ಜಾ	ತ
ಪ್ರಾ					ದ್ಗ					ಜ
ಜಿ	ಲೇ	ಬಿ		ಹಾ	ರು	ತ	ದೂ	ರ	ದೂ	ರ

ವಿಜೇತರು: ಮಂಜುಳ, 164/ಎಂ, 5ನೇ ಮೇನ್, ಆಲನಹಳ್ಳಿ ಲೇಔಟ್, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಚಾಮಯ್ಯ ಸನ್ ಆಫ್ ರಾಮಾಚಾರಿ

ಪುಟ್ಟಣ್ಣ ಕಣಗಾಲರ ನಾಗರಹಾವು ಮುಂದುವರಿದ ಭಾಗ



ಎಪ್ಪತ್ತರ ದಶಕದಲ್ಲಿ ದಿ.ಪುಟ್ಟಣ್ಣ ಕಣಗಾಲ್-ವಿಷ್ಣುವರ್ಧನ್ ಕಾಂಬಿನೇಶನ್‌ನಲ್ಲಿ ತೆರೆಗೆ ಬಂದಿದ್ದ 'ನಾಗರ ಹಾವು' ಚಿತ್ರದ ಮುಂದುವರಿದ ಭಾಗ 'ಚಾಮಯ್ಯ ಸನ್ ಆಫ್ ರಾಮಾಚಾರಿ' ಬಿಡುಗಡೆಗೆ ಸಿದ್ಧವಾಗಿದೆ, ದೇವನಹಳ್ಳಿ, ಕೈವಾರ ತಾತಯ್ಯ ಚಿತ್ರಗಳ ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಅವರ ನಿರ್ಮಾಣ ಹಾಗೂ ನಿರ್ದೇಶನದ ಈ ಚಿತ್ರದ ಚಿತ್ರೀಕರಣ ಮುಗಿದಿದ್ದು, ಇತ್ತೀಚೆಗೆ ಟೀಸರ್ ಬಿಡುಗಡೆಯಾಯಿತು. ಪಲ್ಲಕ್ಕಿ ಅವರು ನಿರ್ಮಾಣ, ನಿರ್ದೇಶನದ ಜತೆ ಜಲೀಲನ ಮಗ ಚೋಟಾ ಜಲೀಲನಾಗೂ ಕಾಣಿಸಿಕೊಂಡಿದ್ದಾರೆ. ವಿಷ್ಣು ಅವರ ತದ್ರೂಪವೇ ಅನಿಸಿಕೊಂಡಿರುವ ಜಯಶ್ರೀ ರಾಜ್ ಚಿತ್ರದಲ್ಲಿ ರಾಮಾಚಾರಿಯಾಗಿ ನಟಿಸಿದ್ದಾರೆ,

ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಮಾತನಾಡುತ್ತ, ಈ ಬಂಧನ ಚಿತ್ರೀಕರಣ ಸಂದರ್ಭದಲ್ಲಿ ಡಾ.ವಿಷ್ಣು ಅವರನ್ನು ಭೇಟಿ ಮಾಡಿ ಈ ಚಿತ್ರದ ಕಥೆ ಹೇಳಿದ್ದೆ, ಅವರು ಇಷ್ಟಪಟ್ಟು ಪಾತ್ರ ಮಾಡಲು ಒಪ್ಪಿದ್ದರು. ಆನಂತರ ಅವರೇ ಇಲ್ಲವಾದರು. ಅವರು ಕಾಲವಾದ ನಂತರ ಇದನ್ನು ಮಾಡೋದೇ ಬೇಡವೆಂದು ಸುಮ್ಮನಾಗಿದ್ದೆ. ಜಯಶ್ರೀ ರಾಜ್‌ರನ್ನು ನೋಡಿದಾಗ ಈ ಸಿನಿಮಾ ಮಾಡಬೇಕೆಂಬ ಆಸೆ ಹುಟ್ಟಿಕೊಂಡಿತು, ನಾಗರಹಾವು ಚಿತ್ರದ ಕೊನೆಯ ಸೀನ್‌ನಿಂದ ಈ ಕಥೆ ಶುರುವಾಗುತ್ತೆ. ರಾಮಾಚಾರಿ, ಮಾರ್ಗರೇಟ್ ಕೋಟೆಯಿಂದ ಕೆಳಕ್ಕೆ ಹಾರುತ್ತಾರೆ. ಮಾರ್ಗರೆಟ್ ಸತ್ತು, ರಾಮಾಚಾರಿ ಬದುಕುಳಿಯುತ್ತಾನೆ. ನಂತರ ಅವನನ್ನು ಪೈಲ್ವಾನ್ ಬಸಪ್ಪ(ಎಂ.ಪಿ.ಶಂಕರ್) ನಾಟಕ ತಂಡವೊಂದರ ಜತೆ ಸೇರಿಸುತ್ತಾರೆ. ಅಲ್ಲೊಬ್ಬ ಯುವತಿಯ ಜತೆ ಪ್ರೀತಿ ಮದುವೆಯಾಗಿ, ಇವರಿಗೆ ಹುಟ್ಟುವ ಮಗುವೇ ಚಾಮಯ್ಯ ಮುಂದೆ ಒಂದು ಹಂತದಲ್ಲಿ ಆತನ ಬದುಕಿನಲ್ಲಿ ಘೋರ ದುರಂತವೊಂದು ನಡೆಯುತ್ತದೆ. ಆಗ ಆತ ಯಾವ ನಿರ್ಣಯ ತೆಗೆದುಕೊಳ್ಳುತ್ತಾನೆ. ಈ ಮಧ್ಯೆ ಕೊಲೆಯೊಂದು ನಡೆದಾಗ ಅದರ ತನಿಖೆಯ ಸುತ್ತ ಕಥೆ ನಡೆಯುತ್ತದೆ. ಬೆಂಗಳೂರು, ಚಿತ್ರದುರ್ಗ, ಬಾದಾಮಿ, ಬನಶಂಕರಿ, ಐಹೊಳೆಯಲ್ಲಿ ಶೂಟಿಂಗ್ ನಡೆಸಲಾಗಿದೆ ಎಂದರು.

ರಾಮಾಚಾರಿಯ ಪಾತ್ರ ಮಾಡಿದ ಜಯಶ್ರೀ ರಾಜ್ ಮಾತನಾಡಿ, ಶೂಟಿಂಗ್ ಅನುಭವ ಹಂಚಿಕೊಂಡರು. ಚಾಮಯ್ಯನಾಗಿ ಪ್ರದೀಪ್ ಶಾಸ್ತ್ರಿ, ಮಗಳಾಗಿ ಚೈತ್ರಾ, ಪ್ರಿನ್ಸಿಪಾಲ್ ಆಗಿ ಪ್ರಕಾಶ್ ಅರಸು, ಸೂರ್ಯತೇಜ, ಕಾರ್ತಿಕ್, ಗುರುಕಿರಣ್, ಸಂದೀಪ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ,

ಈ ಚಿತ್ರಕ್ಕೆ ಸ್ಯಾಂ ಅವರ ಸಂಗೀತ ಸಂಯೋಜನೆ ಹಾಗೂ ಎಂ.ಆರ್.ಸೀನು ಅವರ ಛಾಯಾಗ್ರಹಣ ಶಿವಕುಮಾರ್.ಎ ಅವರ ಸಂಕಲನವಿದೆ.

ಚೌಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

ಪ್ರಭುಸ್ವಾಮಿ ಅಧ್ಯಕ್ಷ, ಎಂ.ರಾಚಯ್ಯ ಉಪಾಧ್ಯಕ್ಷ



ಚೌಹಳ್ಳಿ ಡೈರಿ ಅಧ್ಯಕ್ಷರಾಗಿ ಪ್ರಭುಸ್ವಾಮಿ, ಉಪಾಧ್ಯಕ್ಷರಾಗಿ ಎಂ.ರಾಚಯ್ಯ ಆಯ್ಕೆಯಾದರು.

ತಿ.ನರಸೀಪುರ, ಮಾ.13– ತಾಲೂಕಿನ ಚೌಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪ್ರಭುಸ್ವಾಮಿ, ಉಪಾಧ್ಯಕ್ಷರಾಗಿ ಎಂ.ರಾಚಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಡೈರಿ ಆವರಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪ್ರಭುಸ್ವಾಮಿ ಹಾಗೂ ಶಾಂತರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ರಾಚಯ್ಯ ನಾಮಪತ್ರ ಸಲ್ಲಿಸಿದರು. ನಾಮಪತ್ರ ವಾಪಸ್ ಪಡೆಯಲು ನೀಡಿದ್ದ ಸಮಯದಲ್ಲಿ ಶಾಂತರಾಜು ತಮ್ಮ ಉಮೇದುವಾರಿಕೆ ವಾಪಸ್ ಪಡೆದ ಹಿನ್ನೆಲೆಯಲ್ಲಿ ನೂತನ ಅಧ್ಯಕ್ಷರಾಗಿ ಪ್ರಭುಸ್ವಾಮಿ, ಉಪಾಧ್ಯಕ್ಷರಾಗಿ ಎಂ.ರಾಚಯ್ಯ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಹಸೀನಾ ಕಾರ್ಯ ನಿರ್ವಹಿಸಿದರು.

ಚುನಾವಣಾ ವಿಶೇಷ ಸಭೆಯಲ್ಲಿ ನಿರ್ದೇಶಕರಾದ ಮಹದೇವಸ್ವಾಮಿ, ಮಹೇಶ್, ರೇವಣ್ಣ, ರಾಜಶೇಖರ ಮೂರ್ತಿ, ಮರಿಸ್ವಾಮಿ, ನಾಗಮ್ಮ, ಲಕ್ಷ್ಮಮ್ಮ, ಎಂ.ರಾಚಪ್ಪ ಹಾಜರಿದ್ದು, ಅಧ್ಯಕ್ಷ– ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಪ್ರಭುಸ್ವಾಮಿ ತಮ್ಮ ಅವಿರೋಧ ಆಯ್ಕೆಗೆ ಸಹಕರಿಸಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, ಡೈರಿ ಅಭಿವೃದ್ಧಿಗೆ ಹಾಲು ಉತ್ಪಾದಕರು ಉತ್ತಮ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು. ಇಲ್ಲದಿದ್ದರೇ ಸಹಕಾರ ಸಂಘದ ಅಭಿವೃದ್ಧಿ ಕುಂಠಿತಗೊಳ್ಳಲಿದೆ. ಉತ್ಪಾದಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿ ಹೆಚ್ಚು ಹಾಲು ಉತ್ಪಾದನೆ ಮಾಡುವ ಮೂಲಕ ಡೈರಿ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಹಕಾರ ಸಂಘದ ಷೇರುದಾರರ ಹಿತ ಕಾಪಾಡುವ ನಿಟ್ಟಿನಲ್ಲಿ ರೈತರಿಗೆ ಮೈಮುಲ್ ಹಾಗೂ ಸರ್ಕಾರದಿಂದ ದೊರಕಬಹುದಾದ ಎಲ್ಲಾ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಚೌಹಳ್ಳಿ ಸಿದ್ದರಾಜು ಮಾತನಾಡಿ, ಸಹಕಾರ ಸಂಘದ ಅಭಿವೃದ್ಧಿ ನೂತನ ಅಧ್ಯಕ್ಷರು ಗಮನ ಹರಿಸಬೇಕು. ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತ ಸಮುದಾಯಕ್ಕೆ ಸತಾಯಿಸದೇ ಕಾಲ ಕಾಲಕ್ಕೆ ಬಟವಾಡೆ ಮಾಡುವ ಮೂಲಕ ಸಮುದಾಯದ ಹಿತ ಕಾಯುವಂತೆ ಮನವಿ ಮಾಡಿದರು.

ಸಂಘದ ಉಪಾಧ್ಯಕ್ಷ ಎಂ.ರಾಚಯ್ಯ ಮಾತನಾಡಿದರು. ಕಾರ್ಯದರ್ಶಿ ಕೆಂಪರಾಜು, ಕಾಂಗ್ರೆಸ್ ಮುಖಂಡ ಎಂ.ಗಿರೀಶ್, ನಂಜುಂಡಸ್ವಾಮಿ, ಸಿದ್ದರಾಜು, ಎಂ.ಶಿವಣ್ಣ, ಸುರೇಶ್ ಹಾಜರಿದ್ದರು.

ಹೆಗ್ಗಡಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೆಗ್ಗಡಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಹೆಚ್.ಬಿ.ರೇವಣ್ಣ, ಉಪಾಧ್ಯಕ್ಷರಾಗಿ ಬಸವಶೆಟ್ಟಿ ಆಯ್ಕೆಯಾದರು.

ನಂಜನಗೂಡು, ಮಾ.13– ತಾಲೂಕಿನ ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಬಿ.ರೇವಣ್ಣ, ಉಪಾಧ್ಯಕ್ಷರಾಗಿ ಬಸವಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

13 ಸದಸ್ಯ ಬಲದ ಸಹಕಾರ ಸಂಘದ ಈ ಹಿಂದಿನ ಅಧ್ಯಕ್ಷ ಪ್ರಕಾಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೆಚ್.ಬಿ.ರೇವಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಬಸವಶೆಟ್ಟಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಸಂಘಗಳ ನಿಬಂಧಕ ಸಿ.ಪ್ರಸಾದ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಜಿಪಂ ಮಾಜಿ ಸದಸ್ಯ ಹಾಗೂ ಸಂಘದ ನಿರ್ದೇಶಕ ಸಿ.ಚಿಕ್ಕರಂಗನಾಯಕ ಮಾತನಾಡಿ, ಹೆಗ್ಗಡಹಳ್ಳಿ ಗ್ರಾಪಂ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸುವ ಸಲುವಾಗಿ ಎಲ್ಲರ ಒಪ್ಪಿಗೆ ಮೇರೆಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಂಡು ಬರಲಾಗುತ್ತಿದೆ. ಅದರಂತೆ ಈ ಹಿಂದಿನ ಅಧ್ಯಕ್ಷ ಪ್ರಕಾಶ್ ಅವರು ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೊಬ್ಬರಿಗೆ ಅಧಿಕಾರ ಬಿಟ್ಟುಕೊಟ್ಟಿದ್ದಾರೆ ಎಂದರು.

ನೂತನ ಅಧ್ಯಕ್ಷ ಹೆಚ್.ಬಿ.ರೇವಣ್ಣ ಮಾತನಾಡಿ, ನನ್ನ ಆಯ್ಕೆಗೆ ಸಹಕರಿಸಿದ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಹಾಗೂ ಎಲ್ಲಾ ನಿರ್ದೇಶಕರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಸಂಘದ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ನೂತನ ರೈತರನ್ನು ಸದಸ್ಯರನ್ನಾಗಿ ಮಾಡಿಕೊಂಡು ಸಾಲ ಸೌಲಭ್ಯ ದೊರಕುವಂತೆ ಮಾಡುವುದಲ್ಲದೆ, ಸಹಕಾರ ಸಂಘದಿಂದ ಹೈನುಗಾರಿಕೆ ಕೈಗೊಳ್ಳಲು ರೈತರಿಗೆ ಸಾಲ ಸೌಲಭ್ಯ ಒದಗಿಸಿ ಉತ್ತೇಜನ ನೀಡಿ ಅವರು ಆರ್ಥಿಕವಾಗಿ ಸಬಲರಾಗುವಂತೆ ಕ್ರಮವಹಿಸುತ್ತೇನೆ ಎಂದರು.

ಈ ವೇಳೆ ನಿರ್ದೇಶಕರಾದ ಡಿ.ಎಂ.ಪ್ರಕಾಶ್, ಮಲ್ಲೇಶ್, ಕೆ.ವಿ.ಶಿವಬಸಪ್ಪ, ವಿ.ಎಸ್.ಮಹದೇವಸ್ವಾಮಿ, ಚಿಕ್ಕ ನಿಂಗಯ್ಯ, ಕುಮಾರ್, ಹೆಚ್.ಎಸ್.ವೆಂಕಟೇಶ್, ಕಮಲಮ್ಮ, ನಾಗಮ್ಮ, ಜಿ.ಎಸ್.ನಿರಂಜನ್, ಕಾರ್ಯದರ್ಶಿ ಎಚ್.ಬಿ.ರವಿ, ಮುಖಂಡರಾದ ಶಿವು, ದೊಡ್ಡಅಂಕಯ್ಯ ಸೇರಿದಂತೆ ಗ್ರಾಮಸ್ಥರು, ರೈತರು ಉಪಸ್ಥಿತರಿದ್ದರು.

ದೇವಾಲಯ ಗೋಪುರ ನಿರ್ಮಾಣಕ್ಕೆ ಚಾಲನೆ



ಮೈಸೂರು ತಾಲೂಕಿನ ಜಯಪುರದಲ್ಲಿ ಸಿದ್ದಪ್ಪಾಜಿ ದೇವಾಲಯದ ಗೋಪುರ ನಿರ್ಮಾಣ ಕಾಮಗಾರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಚಾಲನೆ ನೀಡಿದರು. ಗ್ರಾಪಂ ಸದಸ್ಯ ಎಂ.ನಾಗರಾಜು, ಮುಖಂಡರಾದ ಡೇರಿ ಬಸವರಾಜು, ಬಸವರಾಜಪ್ಪ, ಟೈಲರ್ ಬಸವರಾಜು, ಸಣ್ಣಸ್ವಾಮಿ, ಕೆಂಪಚಾರಿ, ರಂಗಸ್ವಾಮಿ, ಮೂರ್ತಿ ಮತ್ತು ತಮಿಳುನಾಡು ಶಿಲ್ಪಿ ಪ್ರಕಾಶ್ ಉಪಸ್ಥಿತರಿದ್ದರು.

ರೇಣುಕಾಚಾರ್ಯರ ತತ್ವ, ಸಿದ್ಧಾಂತ ಎಲ್ಲರೂ ಪಾಲಿಸಿ

ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ

ಕೆ.ಆರ್.ನಗರ, ಮಾ.13– ಮನುಕುಲದ ಉದ್ಧಾರಕ್ಕಾಗಿ ದುಡಿದು ಜಗತ್ತಿನ ಏಳಿಗೆಗೆ ಅಪಾರ ಕೊಡುಗೆ ನೀಡಿದ ಜಗದ್ಗುರು ರೇಣುಕಾಚಾರ್ಯರು ಯುಗಪುರುಷ ಎಂದು ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಂಚ ಪೀಠಗಳಲ್ಲಿ ಒಂದಾದ ರಂಭಾಪುರಿ ಪೀಠದ ಸ್ಥಾಪಕರಾಗಿದ್ದ ಅವರನ್ನು ರೇವಣ್ಣಸಿದ್ಧ ಮತ್ತು ರೇವಣಾರಾಧ್ಯ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ರೇಣುಕಾಚಾರ್ಯರ ತತ್ವ ಮತ್ತು ಸಿದ್ಧಾಂತಗಳನ್ನು ನಾವೆಲ್ಲರೂ ಪಾಲಿಸಿ ಉತ್ತಮ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.



ರೇಣುಕಾಚಾರ್ಯ ಜಯಂತಿಯನ್ನು ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಉದ್ಘಾಟಿಸಿದರು.

ಪುರಸಭೆ ಸದಸ್ಯ ಬಿ.ಎಸ್.ತೋಂಟದಾರ್ಯ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮ ಸ್ಥಾಪಕರಾಗಿದ್ದು, ಧರ್ಮದಿಂದಲೇ ಜಗತ್ತಿಗೆ ಜಯ ಎಂಬ ಸಂದೇಶ ಸಾರಿದ್ದು ಅವರು ಯುಗ ಯೋಗಿ ಎಂದು ಬಣ್ಣಿಸಿದರು. ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿರುವ ರೇಣುಕಾಚಾರ್ಯರ ಅನುಯಾಯಿಗಳಾದ ಜಂಗಮ ಸಮಾಜದ ಬಗ್ಗೆ ವ್ಯಾಪಕ ಪ್ರಚಾರ ಮಾಡುವ ಜೊತೆಗೆ ನಮಗೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸಮರ್ಪಕವಾಗಿ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರಲ್ಲದೆ ನಮ್ಮ ಸಮಾಜಕ್ಕೆ ಸರ್ಕಾರ ಜಾತಿ ಧೃಡೀಕರಣ ಪತ್ರವನ್ನು ಅರ್ಹರಿಗೆ ನೀಡಬೇಕು ಎಂದು ಕೋರಿದರು.

ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರುದ್ರೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು ಮಾತನಾಡಿದರು. ಈ ಸಂದರ್ಭ ರೇಣುಕಾಚಾರ್ಯರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಣೆ ಮಾಡಲಾಯಿತು.

ಜಂಗಮ ಸಮಾಜದ ಮುಖಂಡರಾದ ಭದ್ರೇಶ್, ಪಂಚಿಸತೀಶ್, ಯೋಗೀಶ್, ಫಣೀಶ್, ನಂಜಪ್ಪ, ಮಹದೇವ್, ಲೋಹಿತ್, ವಿಶ್ವನಾಥ್, ಪ್ರಶಾಂತ್, ಮಹದೇವಸ್ವಾಮಿದೇವರು, ಕಾಲಾಗ್ನಿ, ಜಯಂತ್, ಅಪ್ಪಿ, ಮೋಹನ್‌ಕುಮಾರಿ, ರತ್ನಮ್ಮ, ಮಹದೇವಮ್ಮ, ಪೂಜಾರಿಮಂಜು, ರಂಜಿತ್, ಮಾದೇಶ್, ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಬಿಇಓ ಆರ್.ಕೃಷ್ಣಪ್ಪ, ಸಮಾಜ ಕಲ್ಯಾಣಾಧಿಕಾರಿ ಹೆಚ್.ಎಲ್.ಶಂಕರಮೂರ್ತಿ ಮತ್ತಿತರರಿದ್ದರು.

ಕನ್ನಂಬಾಡಿಯಮ್ಮ, ಮಸಣಿಕಮ್ಮನವರ ಬ್ರಹ್ಮ ರಥೋತ್ಸವ

ಪಿರಿಯಾಪಟ್ಟಣ, ಮಾ.13– ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀಕನ್ನಂಬಾಡಿಯಮ್ಮ ಹಾಗೂ ಮಸಣಿಕಮ್ಮನವರ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು.

ಬಗೆ ಬಗೆಯ ಹೂಗಳಿಂದ ಅಲಂಕೃತಗೊಂಡ ರಥದಲ್ಲಿ ಮಸಣಿಕಮ್ಮ ದೇವಿ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕುವ ಮೂಲಕ ಮೆರವಣಿಗೆ ನಡೆಸಲಾಯಿತು. ಈ ವೇಳೆ ಲಕ್ಷಾಂತರ ಭಕ್ತರು ರಥ ಎಳೆದು, ಹಣ್ಣು–ಜವನ ಎಸೆದು ಪುನೀತರಾದರು.

ಪಟ್ಟಣದ ಬಿ.ಎಂ.ರಸ್ತೆಯಿಂದ ಬಸ್ ನಿಲ್ದಾಣದ ವೃತ್ತದವರೆಗೆ ವಿವಿಧ ಸಂಘಟನೆಗಳು ಭಕ್ತರಿಗೆ ಬಾತ್, ಮೊಸರನ್ನ, ಪುಳಿಯೋಗರೆ, ಮಜ್ಜಿಗೆ, ಪಾನಕ, ಕಲ್ಲಂಗಡಿ ಹಣ್ಣು, ಪಾನಕ, ಮಜ್ಜಿಗೆ, ಜ್ಯೂಸ್ ಮತ್ತು ಐಸ್‌ಕ್ರೀಂಗಳನ್ನು ವಿತರಿಸಿದರು. ಜಾತ್ರಾ ಮಹೋತ್ಸವ ಅಂಗವಾಗಿ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಏಕಮುಖ ಸಂಚಾರ ಕೈಗೊಂಡು ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದ್ದರು.



ಶ್ರೀಕನ್ನಂಬಾಡಿಯಮ್ಮ ಹಾಗೂ ಮಸಣಿಕಮ್ಮನವರ ಬ್ರಹ್ಮರಥೋತ್ಸವ ನಡೆಯಿತು.

ಕನ್ನಂಬಾಡಿ ಅಮ್ಮನವರ ರಥೋತ್ಸವ: ಕಳೆದ 3 ದಿನಗಳ ಹಿಂದೆ ನದಿಯಲ್ಲಿ ದೇವಿ ಉತ್ಸವ ಮೂರ್ತಿ ಶುಚಿಗೊಳಿಸಿ ಪುಣ್ಯ ತೀರ್ಥ ಸ್ನಾನ ನೆರವೇರಿಸಿದ ಬಳಿಕ ವಿವಿಧ ಪುಷ್ಪಗಳಿಂದ ಅಲಂಕರಿಸಿ ಮೆರವಣಿಗೆಯೊಂದಿಗೆ ದೇವಾಲಯಕ್ಕೆ ಕರೆತರಲಾಯಿತು. ಜಾತ್ರಾ ಮಹೋತ್ಸವ ಅಂಗವಾಗಿ ನಿತ್ಯ ದೇವಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ರಥೋತ್ಸವದಂದು ಶ್ರೀಕನ್ನಂಬಾಡಿಯಮ್ಮನವರ ಉತ್ಸವ ಮೂರ್ತಿಯನ್ನು ವಿವಿಧ ಹೂ, ಬಾವುಟಗಳಿಂದ ಅಲಂಕೃತಗೊಂಡ ರಥದಲ್ಲಿ ಪ್ರತಿಷ್ಠಾಪಿಸಿದ ಬಳಿಕ ಭಕ್ತರು ದೇವಿಗೆ ಜೈಕಾರ ಹಾಕುವ ಮೂಲಕ ರಥ ಎಳೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ ಹಣ್ಣು, ಜವನ ಎಸೆದು ಭಕ್ತಿ ಮೆರೆದರು. ಈ ವೇಳೆ ಕೇರಳ ಚಂಡೆ ವಾದ್ಯ, ನಗಾರಿ ಸದ್ದಿಗೆ ಯುವಕರು ಹೆಜ್ಜೆ ಹಾಕಿ ಸಂಭ್ರಮಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪಿರಿಯಾಪಟ್ಟಣ ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಫಲಾನುಭವಿಗಳಿಗೆ ಮಾಸಾಶನ ಆದೇಶ ಪತ್ರ ವಿತರಣೆ

ಹುಣಸೂರು, ಮಾ.13– ಅಧಿಕಾರಿಗಳು ಶ್ರದ್ಧೆ ವಹಿಸಿ ಕೆಲಸ ಮಾಡಿದರೇ ಸಕಾಲಕ್ಕೆ ಜನರಿಗೆ ಸರ್ಕಾರದ ಸವಲತ್ತು ಒದಗಿಸಬಹುದು ಎಂದು ಉಪವಿಭಾಗಾಧಿಕಾರಿ ವಿಜಯಕುಮಾರ್ ತಿಳಿಸಿದರು.

ತಾಲೂಕಿನ ಬಿಳಿಕೆರೆ ನಾಡ ಕಚೇರಿಯಲ್ಲಿ ಅರ್ಹ ಫಲಾನುಭವಿಗಳಿಗೆ ವಿವಿಧ ಮಾಸಾಶನ ಆದೇಶ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಇಲ್ಲಿನ ನಾಡ ಕಚೇರಿಯಲ್ಲಿ ಕಳೆದ ಮೂರು ತಿಂಗಳಿಂದ ಹಲವು ಕಡತಗಳು ವಿಲೆಯಾಗದೇ ಉಳಿದ ಪರಿಣಾಮ ಫಲಾನುಭವಿಗಳಿಗೆ ಮಾಸಾಶನ ಆದೇಶ ಪತ್ರ ವಿತರಿಸಿರಲಿಲ್ಲ. ಕಳೆದ ಒಂದು ವಾರದಿಂದ ನಾಡ ಕಚೇರಿ ಸಿಬ್ಬಂದಿ ಆಸಕ್ತಿ ವಹಿಸಿ ವಿಲೇವಾರಿಯಾಗದೇ ಉಳಿದಿದ್ದ ಕಡತಗಳನ್ನು ಪರಿಶೀಲಿಸಿದ್ದರಿಂದ ಇಂದು ಸಾಕಷ್ಟು ಫಲಾನುಭವಿಗಳಿಗೆ ಆದೇಶ ಪತ್ರ ವಿತರಿಸಲು ಸಾಧ್ಯವಾಗಿದೆ ಎಂದು ಸಿಬ್ಬಂದಿಗಳ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಈ ಹಿಂದಿನ ಉಪ ತಹಸೀಲ್ದಾರ್ ಸುದೀರ್ಘ ರಜೆ ಮೇಲೆ ತೆರಳಿದ ಕಾರಣ ಇಲ್ಲಿಗೆ ಪ್ರಭಾರ ಉಪ ತಹಸೀಲ್ದಾರ್ ಆಗಿ ಎಸ್.ಎನ್.ಮಂಜುನಾಥ್ ಬಂದ ನಂತರ ಸಾಕಷ್ಟು ಕಡತಗಳನ್ನು ಪರಿಶೀಲಿಸಿ ಮಾಸಾಶನ ಪತ್ರ ಸಿದ್ದಪಡಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಪ್ರಭಾರ ಉಪ ತಹಸೀಲ್ದಾರ್ ಮಾತನಾಡಿ, ಬಿಳಿಕೆರೆ ನಾಡ ಕಚೇರಿಯಲ್ಲಿ ಖಾಲಿ ಇದ್ದ ಉಪ ತಹಸೀಲ್ದಾರ್ ಸ್ಥಾನಕ್ಕೆ ನಾನು ವಾರದ ಹಿಂದೆ ಪ್ರಭಾರವಾಗಿ ಬಂದಿದ್ದು, ಇಲ್ಲಿನ ಸಿಬ್ಬಂದಿಗಳ



ಫಲಾನುಭವಿಗಳಿಗೆ ಆದೇಶ ಪತ್ರ ವಿತರಿಸಲಾಯಿತು.

ಸಹಕಾರದೊಂದಿಗೆ ಬಿಳಿಕೆರೆ, ಧರ್ಮಾಪುರ, ಹುಲ್ಲೇನಹಳ್ಳಿ, ನಂಜಾಪುರ, ಬೆಂಕಿಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ 20 ಮಂದಿಗೆ ವೃದ್ಧಾಪ್ಯ ವೇತನ, 13 ಮಂದಿಗೆ ವಿಧವಾ ವೇತನ, ಐವರಿಗೆ ಅಂಗವಿಕಲ ವೇತನ, 14 ಮಂದಿಗೆ ಸಂಧ್ಯಾ ಸುರಕ್ಷಾ ವೇತನ ಸೇರಿದಂತೆ 50 ಮಂದಿ ಫಲಾನುಭವಿಗಳಿಗೆ ವಿವಿಧ ಮಾಸಾಶನ ಆದೇಶ ಪತ್ರ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ನಾಡ ಕಚೇರಿಯಲ್ಲಿ ಉಳಿದಿರುವ ಮತ್ತಷ್ಟು ಕಡತಗಳನ್ನು ಸಿಬ್ಬಂದಿ ಸಹಕಾರದಿಂದ ವಿಲೇವಾರಿ ಮಾಡಲಾಗುವುದು ಎಂದರು.

ಈ ವೇಳೆ ದಸಂಸ ಡಿ.ಜಿ.ಸಾಗರ್ ಬಣದ ಜಿಲ್ಲಾ ಸಂಚಾಲಕ ಕೃಷ್ಣ, ಶಿವಕುಮಾರ್, ದೇವರಾಜು, ನಿಂಗರಾಜು, ತುಳಸೀರಾಮ್, ಚಂದ್ರಶೇಖರ್ ಇನ್ನಿತರರಿದ್ದರು.

ವಿಜೃಂಭಣೆಯ ಶ್ರೀಮಹೇಶ್ವರಿ ಕಾಳಮ್ಮನವರ ರಥೋತ್ಸವ

ಸರಗೂರು, ಮಾ.13– ತಾಲೂಕಿನ ಹೆಗ್ಗನೂರು ಗ್ರಾಮದಲ್ಲಿ ಮಹೇಶ್ವರಿ ಕಾಳಮ್ಮನವರ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ಜಾತ್ರೆ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯೇ ವಿಶೇಷ ಹೋಮ,ಸುಪ್ರಭಾತ ಸೇವೆ, ವಿಶೇಷ ಪಂಚಾಮೃತ ಅಭಿಷೇಕ ನಡೆಯಿತು. ಭಕ್ತರು ಉರುಳು ಸೇವೆ ಮಾಡಿ ಕ್ಷೇತ್ರದ ಈಶಾನ್ಯ ದಿಕ್ಕಿನಲ್ಲಿರುವ ಹೆಬ್ಬಾಳದ ತೊರೆಯಿಂದ ಗಂಗಾ ಪೂಜೆ ಮಾಡಿ ಬಾಯಿಬೀಗ ಹರಕೆ ಹೊತ್ತ ಭಕ್ತರು ನಂದಿಧ್ವಜ, ದೇವರ ರುದ್ರಾಕ್ಷಿ ಮಂಟಪದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಮಧ್ಯಾಹ್ನ 12ಗಂಟೆಗೆ ದೇವಾಲಯಕ್ಕೆ ಆಗಮಿಸಿದರು. ನಂತರ ಉಯ್ಯಾಲೆಸೇವೆ ಮೂಲಕ ಗರ್ಭಗುಡಿ ಸೇರಿಸಿ ಪಟ್ಟಕ್ಕೆ ಕುಳಿತು ಗಣಪತಿ ಪೂಜೆ, ನವಗ್ರಹ ಪೂಜೆ, ಹೋಮ, ಸಹಸ್ರನಾಮ, ಪೂರ್ಣಾಹುತಿ, ಮಂಗಳಾರತಿ ನೆರವೇರಿಸಲಾಯಿತು. ರಾತ್ರಿ 1 ಗಂಟೆಗೆ ದೇವಸ್ಥಾನದಿಂದ ಪ್ರಾರಂಭಗೊಂಡ ರಥೋತ್ಸವ ಗ್ರಾಮದ ಪ್ರಮುಖ ರಸ್ತೆಯಲ್ಲಿ ಶ್ರೀಮಹೇಶ್ವರಿ ಕಾಳಮ್ಮನವರಿಗೆ ಜೈಕಾರ ಹಾಕುವ ಮೂಲಕ ಭಕ್ತರು ರಥ ಎಳೆದು ತಮ್ಮ ಹರಕೆ ತೀರಿಸಿದರು. ಗುರುವಾರ ಬೆಳಗ್ಗೆ ಮಹಾಮಂಗಳರಾತಿ ನಡೆಸಿ ಉತ್ಸವ ಮೂರ್ತಿಯನ್ನು ಸ್ವಸ್ಥಾನಕ್ಕೆ ಸೇರಿಸಲಾಯಿತು. ಜಾತ್ರೆಯ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಭಕ್ತರ ಅನುಕೂಲಕ್ಕಾಗಿ ಸಕಲ ವ್ಯವಸ್ಥೆ ಮಾಡಲಾಗಿತ್ತು.



ಮಹೇಶ್ವರಿ ಕಾಳಮ್ಮನವರ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ನಾಳೆಯಿಂದ ಸರಗೂರಲ್ಲಿ 3 ದಿನ ಹೈನುಗಾರಿಕೆ, ಕೃಷಿ ಮೇಳ

ಹೆಚ್.ಡಿ.ಕೋಟೆ, ಮಾ.13– ಸರಗೂರಿನ ಜಯಚಾಮರಾಜ ಕ್ರೀಡಾಂಗಣದಲ್ಲಿ ಮಾ.15 ರಿಂದ 17 ರವರೆಗೆ ಹೈನುಗಾರಿಕೆ ಮತ್ತು ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಡೆನ್ನಿಸ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಪಶು ವೈದ್ಯಕೀಯ ಸೇವೆಗಳ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ ಸುತ್ತೂರು, ಮೈಸೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಸರ್ಕಾರ ಮತ್ತು ಸರ್ಕಾರೇತರ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 3 ದಿನಗಳ ಕಾಲ ಹೈನುಗಾರಿಕೆ ಮತ್ತು ಕೃಷಿ ಮೇಳ ನಡೆಸಲಾಗುವುದು. ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಲಿದ್ದು, ಸಚಿವ ಕೆ.ವೆಂಕಟೇಶ್, ಪಪಂ ಅಧ್ಯಕ್ಷೆ ರಾಧಿಕಾ,



ಸುದ್ದಿಗೋಷ್ಠಿಯಲ್ಲಿ ಡಾ.ಡೆನ್ನಿಸ್ ಮಾತನಾಡಿದರು.

ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಜಿಲ್ಲಾ ನಿರ್ದೇಶಕ ಡಾ.ನಾಗರಾಜು, ಟೈಟನ್ ಕಂಪನಿ ಮುಖ್ಯ ಸುಸ್ಥಿರ ಅಧಿಕಾರಿ ಎನ್.ಇ.ಶ್ರೀಧರ್, ಮೈಮುಲ್ ಅಧ್ಯಕ್ಷ ಚೆಲುವರಾಜು, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುರೇಶ್ ನಾಯಕ್, ನಿರ್ದೇಶಕ ಕೆ.ಈರೇಗೌಡ ಭಾಗವಹಿಸಲಿದ್ದು, ಸರಗೂರು ವಿವೇಕಾನಂದ ಸ್ಮಾರಕ ಆಸ್ಪತ್ರೆ ಮೂಳೆ ಮತ್ತು ಕೀಲು ರೋಗ ತಜ್ಞ ಡಾ.ಎಂ.ಆರ್.ಸೀತಾರಾಮ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮಾ.15 ರಂದು ಹೈನುಗಾರಿಕೆ ಕುರಿತು ಚರ್ಚೆ ಮತ್ತು ದೈನಂದಿನ ಜೀವನದಲ್ಲಿ ಹೈನುಗಾರಿಕೆ ಪ್ರಾಮುಖ್ಯತೆ ಕುರಿತು ಸರಗೂರು ಪಶುಪಾಲನ ಇಲಾಖೆ ಸಹಾಯಕ ನಿರ್ದೇಶಕ ವೈ.ಡಿ.ರಾಜಣ್ಣ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಸೌಲಭ್ಯಗಳ ಬಗ್ಗೆ ಮೈಸೂರು ಜಿಲ್ಲಾ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಉಪ ನಿರ್ದೇಶಕ ಡಾ.ನಾಗರಾಜ್ ವಿಷಯ ಮಂಡನೆ ಮಾಡಲಿದ್ದಾರೆ. ಹೈನುಗಾರಿಕೆಯಲ್ಲಿ ಅವಕಾಶಗಳು ಮತ್ತು ಸವಾಲುಗಳು ಬಗ್ಗೆ ಸ್ವಾಮಿ ವಿವೇಕಾನಂದ ಸ್ಮಾರಕ ಆಸ್ಪತ್ರೆ ಮೂಳೆ ಮತ್ತು ಕೀಲು ತಜ್ಞ ಡಾ. ಸೀತಾರಾಮ್ ಸಲಹೆ ನೀಡಲಿದ್ದಾರೆ.

ಮಾ.16ರಂದು ಹೈನುಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರುಕಟ್ಟೆಯಲ್ಲಿ ಅವಕಾಶಗಳ ಬಗ್ಗೆ ಕೃಷಿ ತಜ್ಞ ಡಾ.ದೀಪಕ್ ತಿಳಿಸಲಿದ್ದಾರೆ. ಮಾ.17 ರಂದು ವಿಶ್ವ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವನ್ನು ನಾಗರಹೊಳೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಎ.ಸೀಮಾ ಉದ್ಘಾಟಿಸಲಿದ್ದು, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ತಹಸೀಲ್ದಾರ್ ಮೋಹನ್ ಕುಮಾರಿ, ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟದ ಅಧ್ಯಕ್ಷೆ ಸರಸು, ನಿವೃತ್ತ ಐಪಿಎಸ್ ಅಧಿಕಾರಿ ಚಮನ್‌ಲಾಲ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಯಕ್, ನಿಂಗರಾಜು, ಅಕ್ಷಯ್ ಹಾಜರಿದ್ದರು.

ಮೂಗೂರು ಗ್ರಾಮ ಪಂಚಾಯಿತಿಗೆ ಭಾಗ್ಯ ಉಪಾಧ್ಯಕ್ಷೆ

ತಿ.ನರಸೀಪುರ, ಮಾ.13– ತಾಲೂಕಿನ ಮೂಗೂರು ಗ್ರಾಪಂ ಉಪಾಧ್ಯಕ್ಷೆಯಾಗಿ ಎನ್‌ಡಿಎ ಮೈತ್ರಿಕೂಟದ ಬೆಂಬಲಿತ ಅಭ್ಯರ್ಥಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಭಾಗ್ಯ ಮಹದೇವಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಉಪಾಧ್ಯಕ್ಷೆ ಎಂ.ಶಾಂತಿ ಅವರು 10 ತಿಂಗಳ ಅಧಿಕಾರವಧಿ ಪೂರೈಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಭಾಗ್ಯಮ್ಮ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕಾವೇರಿ ನೀರಾವರಿ ನಿಗಮದ ಬನ್ನೂರು ವಿಭಾಗದ ಎಇಇ ರತೀಶ್ ಪ್ರಕಟಿಸಿದರು. ಗ್ರಾಪಂ ಅಧ್ಯಕ್ಷ ಎಂ.ಡಿ.ಲೋಕೇಶ್, ಸದಸ್ಯರಾದ ಶಾಂತಿ, ಶಿವಣ್ಣ, ಚಂದ್ರಮ್ಮ, ಎಂ.ಪುಟ್ಟಮಾದಯ್ಯ, ಎಂ.ಎಸ್.



ಮೂಗೂರು ಗ್ರಾಪಂ ಉಪಾಧ್ಯಕ್ಷೆಯಾಗಿ ಭಾಗ್ಯ ಅವಿರೋಧವಾಗಿ ಆಯ್ಕೆಯಾದರು.

ಗೌರೀಶ್, ರತ್ನಮ್ಮ, ಎಂ.ಬಿ.ಮಹೇಶ್, ಟಿ.ಎಂ.ಚೇತನ್, ಲಕ್ಷ್ಮಿ, ಸವಿತಾ, ಬಿ.ಎಸ್.ತಂಗಮ್ಮ ಚುನಾವಣಾ ಸಭೆಗೆ ಹಾಜರಾದರೇ, ಜಿ.ಎಸ್.ಮೋಹನ್ ಕುಮಾರ್, ರಾಜಮ್ಮ, ಲಿಂಗರಾಜು, ಮಹದೇವಮ್ಮ, ಮಹದೇವನಾಯಕ, ಎಂ.ಪಿ.ಮಹದೇವಸ್ವಾಮಿ, ಆಶಾ, ರತ್ನಮ್ಮ, ರೋಜಾ, ನಾಗಮ್ಮ ಹಾಗೂ ಬಸವರಾಜು ಗೈರಾಗಿದ್ದರು.

ನೂತನ ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಭಾಗ್ಯ ಅವರು ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿರುವುದು ಸಂತಸದ ವಿಚಾರ. ಜೆಡಿಎಸ್ ಪಕ್ಷದವರು ಕೊಟ್ಟ ಮಾತಿನಂತೆ ಬಿಜೆಪಿ ಪಕ್ಷಕ್ಕೆ ಉಪಾಧ್ಯಕ್ಷ ಸ್ಥಾನ ಬಿಟ್ಟುಕೊಟ್ಟಿದ್ದಾರೆ. ಮುಂಬರುವ ಜಿಪಂ ಹಾಗೂ ತಾಪಂ ಚುನಾವಣೆಗಳಲ್ಲೂ ಜಿಲ್ಲಾದ್ಯಂತ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ಹಿಡಿಯಲಿದ್ದೇವೆ. ಪ್ರಧಾನಿ ಮೋದಿ ಅವರ ವಿಕಸಿತ ಭಾರತ ವಿರಬಹುದು. ಮಾಜಿ ಸಿಎಂ ಯಡಿಯೂರಪ್ಪನವರು ಹಳ್ಳಿಗಾಡಿಗೆ ಕೊಟ್ಟಂತಹ ಯೋಜನೆಗಳಿರಬಹುದು. ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಪಕ್ಷ ನಾಯಕನಾಗಿ ಹೋರಾಡುತ್ತಿರುವುದು. ಇವೆಲ್ಲದರ ಪರಿಣಾಮ ಜಿಲ್ಲೆಯಲ್ಲಿ ಬಿಜೆಪಿ ಪಕ್ಷ ಬಲಿಷ್ಠವಾಗುತ್ತಿದ್ದು, ಅವರ ಮಾರ್ಗದರ್ಶನದಲ್ಲಿ ನಾವೂ ಪ್ರತಿ ಬೂತ್‌ನಲ್ಲೂ ಪಕ್ಷ ಸಂಘಟನೆ ಮಾಡಿಕೊಂಡು ಬರುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಇಂದಿನ ಉಪಾಧ್ಯಕ್ಷರ ಆಯ್ಕೆ ಮುಂಬರುವ ಜಿಪಂ, ತಾಪಂ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದರು.

ನೂತನ ಉಪಾಧ್ಯಕ್ಷೆ ಭಾಗ್ಯಮ್ಮ ಮಾತನಾಡಿ, ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿಕೊಂಡು ಗ್ರಾಪಂ ಹಾಗೂ ಜನರ ಮೂಲ ಸೌಕರ್ಯಕ್ಕೆ ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿದರು. ಈ ವೇಳೆ ಮೈಸೂರು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಮಾಜಿ ಉಪಾಧ್ಯಕ್ಷ ಗೌಡರ ಪ್ರಕಾಶ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಸತ್ಯಪ್ಪ, ಎಸ್‌ಎಂಆರ್ ಪ್ರಕಾಶ್, ಆಡಿಟರ್ ಮಂಜು, ಪಿಎಸಿಸಿ ಸಂಘದ ಅಧ್ಯಕ್ಷ ಜಗದೀಶ್ ಮೂರ್ತಿ, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಪೂಜಿತ್ ಕುಮಾರ್, ಗ್ರಾಪಂ ಮಾಜಿ ಸದಸ್ಯ ಮರಿಸ್ವಾಮಿ, ಎಂ.ಸಿದ್ದರಾಜು, ಮಹದೇವಸ್ವಾಮಿ, ಹೊಸಹಳ್ಳಿ ಚಿನ್ನಸ್ವಾಮಿ, ಎಂ.ಎನ್.ರಾಜು, ಪಿಡಿಓ ಪ್ರಕಾಶ್, ಶಿವು ಮತ್ತಿತರಿದ್ದರು.

ಒಣ ಗಾಂಜಾ ಸೊಪ್ಪು ಸಾಗಿಸುತ್ತಿದ್ದ ಆರೋಪಿ ಬಂಧನ

ಹುಣಸೂರು, ಮಾ.13– ಅಕ್ರಮವಾಗಿ ಒಣ ಗಾಂಜಾ ಸೊಪ್ಪು ಸಾಗಿಸುತ್ತಿದ್ದ ಆರೋಪಿಯನ್ನು ಮಾಲು ಸಮೇತ ಬಂಧಿಸುವಲ್ಲಿ ಹುಣಸೂರು ನಗರ ಠಾಣೆ



ಪೊಲೀಸರು ಯಶಸ್ವಿಯಾಗಿದ್ದಾರೆ. ನಗರದ ವಿ.ಪಿ.ಬೋರೆ ನಿವಾಸಿ ಸಯ್ಯದ್ ಕಲೀಂ(37) ಬಂಧಿತ ಆರೋಪಿ. ಇತನಿಂದ ಒಂದು ಲಕ್ಷಕ್ಕೂ ಹೆಚ್ಚು ಮೌಲ್ಯದ 2.150 ಕೆಜಿ ಒಣ ಗಾಂಜಾ ಸೊಪ್ಪು ವಶಪಡಿಸಿಕೊಳ್ಳಲಾಗಿದೆ. ಈತ ಬುಧವಾರ ಮಧ್ಯಾಹ್ನ ತನ್ನ ಎಲೆಕ್ಟ್ರಿಕಲ್ ಬೈಕ್(ಕೆಎ.09, ಜೆಎ.6171) ನಲ್ಲಿ ಒಣ ಗಾಂಜಾ ಸೊಪ್ಪನ್ನು ಸಾಗಿಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ರತ್ನಪುರಿ ಕಾಲೋನಿಗೆ ತೆರಳುವ ರಸ್ತೆಯ ಕೊನ್ನಾರಿ ಹಳ್ಳದ ಬಳಿ ನಗರ ಠಾಣೆ ಪೊಲೀಸರು ದಾಳಿ ನಡೆಸಿ ಮಾಲು ಸಮೇತ ಆರೋಪಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಸಂತೋಷ್ ಕಶ್ಯಪ್, ಎಸ್‌ಐಗಳಾದ ಜಮೀರ್ ಅಹಮದ್, ಮಹಾಲಿಂಗಯ್ಯ, ಸಿಬ್ಬಂದಿಗಳಾದ ಅರುಣ್ ಕುಮಾರ್, ಇರ್ಫಾನ್, ಮಹೇಂದ್ರ, ರವಿಕುಮಾರ್, ಬಸವರಾಜು, ದಿಲೀಪ್ ಹಾಗೂ ರಾಜರತ್ನಂ ಭಾಗವಹಿಸಿದ್ದರು.

ಪೂಜಾರಿ ಜವರೇಗೌಡ ನಿಧನ



ಹಿರೀಕ್ಯಾತನಹಳ್ಳಿ, ಮಾ.13– ಹುಣಸೂರು ತಾಲೂಕಿನ ಶಿರೇನಹಳ್ಳಿ ಗ್ರಾಮದ ಪೂಜಾರಿ ಜವರೇಗೌಡ(88) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಚಿಕ್ಕಮ್ಮ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೇಣುಗೋಪಾಲಸ್ವಾಮಿ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ಅನುಮತಿಗೆ ಮೀನಾ-ಮೇಷ

ಮೈಸೂರು ಪಾಲಿಕೆ ಮುಂದೆ ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀಧರರಾಜೇ ಅರಸ್ ಧರಣಿ

ವಾರದೊಳಗೆ ಅನುಮತಿ ನೀಡುವ ಭರವಸೆ; ಧರಣಿ ಅಂತ್ಯ

ಮೈಸೂರು, ಮಾ.13(ಬಿಎಲ್‌ಯು)– ಮೈಸೂರಿನ ತ್ಯಾಗರಾಜ ರಸ್ತೆಯ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ಅನುಮತಿ ನೀಡಲು ಮೈಸೂರು ನಗರಪಾಲಿಕೆ ಮೀನಾ–ಮೇಷ ಎಣಿಸುತ್ತಿದೆ ಎಂದು ಆರೋಪಿಸಿ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್ ಇಂದು ಪಾಲಿಕೆ ಮುಂದೆ ಅನಿರ್ದಿಷ್ಟಾವಧಿ ಉಪವಾಸ ಧರಣಿ ಆರಂಭಿಸಿದ್ದರು. ಆದರೆ, ವಾರದೊಳಗೆ ಅನುಮತಿ ನೀಡುವ ಭರವಸೆಯನ್ನು ಪಾಲಿಕೆ ಅಧಿಕಾರಿಗಳು ನೀಡಿದ ಹಿನ್ನೆಲೆಯಲ್ಲಿ ಧರಣಿ ವಾಪಸ್ಸು ಪಡೆದರು.

ಗೋಪುರ ನಿರ್ಮಾಣಕ್ಕೆ ಅನುಮತಿ ನೀಡಲು ವಿಳಂಬ ಧೋರಣೆ ಖಂಡಿಸಿ ಶ್ರೀಧರ ರಾಜೇ ಅರಸ್ ಅವರು ಪಾಲಿಕೆ ಆವರಣದ ಉದ್ಯಾನವನದಲ್ಲಿ ಇಂದು ಬೆಳಿಗ್ಗೆ ಧರಣಿ ಆರಂಭಿಸಿದರು.

ಮೈಸೂರು ಮಹಾರಾಜರಾಗಿದ್ದ 10ನೇ ಚಾಮರಾಜ ಒಡೆಯರ್ ಸಹೋದರ ಪ್ರಿನ್ಸ್ ಸುಬ್ರಹ್ಮಣ್ಯರಾಜೇ ಅರಸ್ ಅವರ ಪತ್ನಿ ಲಕ್ಷ್ಮಣ್ಣಿ ಈ ದೇವಾಲಯ ನಿರ್ಮಾಣ ಮಾಡಿದ್ದರು. ಇದನ್ನು ನಿರ್ಮಿಸಿ 112 ವರ್ಷಗಳಾಗಿದ್ದು, ಸ್ವಲ್ಪ ಭಾಗ ಶಿಥಿಲಾವಸ್ಥೆಯಲ್ಲಿತ್ತು. ಜೊತೆಗೆ ಗೋಪುರ, ಸುಮಾರು 10 ಅಡಿ ಎತ್ತರವಿದ್ದು, ಯಾರಿಗೂ ಕಾಣಿಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಈಗಿರುವ ಗೋಪುರ ನೆಲಸಮಗೊಳಿಸಿ ಪಾರಂಪರಿಕ ಶೈಲಿಯಲ್ಲಿ ಹೊಸದಾಗಿ ನಿರ್ಮಾಣ ಕಾರ್ಯ ಆರಂಭಿಸಲಾಗಿದೆ.

ಗೋಪುರ ನಿರ್ಮಾಣಕ್ಕೆ ಈಗಾಗಲೇ ಪ್ರಾಚ್ಯವಸ್ತು ಇಲಾಖೆ ಅನುಮತಿ ನೀಡಿದೆ. ಜೊತೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಹೆರಿಟೇಜ್ ಸಮಿತಿ ಕೂಡ ಸಮ್ಮತಿಸಿದೆ. ಆದರೆ ನಗರಪಾಲಿಕೆ ಅನುಮತಿ ನೀಡಿರಲಿಲ್ಲ.



ಮೈಸೂರಿನ ತ್ಯಾಗರಾಜ ರಸ್ತೆಯ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಪ್ರವೇಶ ದ್ವಾರದ ಗೋಪುರ ನಿರ್ಮಾಣಕ್ಕೆ ಅನುಮತಿ ನೀಡುವಲ್ಲಿ ನಗರಪಾಲಿಕೆಯ ವಿಳಂಬ ಧೋರಣೆ ವಿರೋಧಿಸಿ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಅವರು ಗುರುವಾರ ಉಪವಾಸ ಧರಣಿ ನಡೆಸಿದರು. ಈ ವೇಳೆ ಕರ್ನಾಟಕ ಅರಸು ಮಹಾ ಮಂಡಳಿ ಚಾರಿಟಬಲ್ ಟ್ರಸ್ಟ್ ಖಜಾಂಚಿ ಹೆಚ್.ರವೀಂದ್ರ ರಾಜೇ ಅರಸ್ ಸಾಥ್ ನೀಡಿದರು.



ದೇವಸ್ಥಾನದ ಹಳೆಯ ಗೋಪುರವನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಶ್ರೀಧರರಾಜೇ ಅರಸ್ ಅವರು ಅನಿರ್ದಿಷ್ಟಾವಧಿ ಉಪವಾಸ ಧರಣಿ ಮಾಡುವುದಾಗಿ ಇಂದು ಬೆಳಿಗ್ಗೆ ಧರಣಿ ಆರಂಭಿಸಿದ್ದರು. ಈ ವೇಳೆ ಕರ್ನಾಟಕ ಅರಸು ಮಹಾ ಮಂಡಳಿ ಚಾರಿಟಬಲ್ ಟ್ರಸ್ಟ್ ಖಜಾಂಚಿ ಹೆಚ್.ರವೀಂದ್ರ ರಾಜೇ ಅರಸ್ ಅವರಿಗೆ ಸಾಥ್ ನೀಡಿದರು.

82 ವಯಸ್ಸಿನ ಶ್ರೀಧರ ರಾಜೇ ಅರಸ್, ಉಪವಾಸ ಧರಣಿ ಸತ್ಯಾಗ್ರಹ ನಡೆಸಿದರೆ ಅವರ ಆರೋಗ್ಯದಲ್ಲಿ ಏರುಪೇರಾಗಬಹುದು ಎಂದು ಅರಿತ ನಗರಪಾಲಿಕೆ ಅಧಿಕಾರಿಗಳು, ಧರಣಿ ಕೈ ಬಿಡುವಂತೆ ಶ್ರೀಧರ ರಾಜೇ ಅರಸ್ ಅವರ ಮನವೊಲಿಸಲೆತ್ನಿಸಿದರು.

ಆದರೆ, ಗೋಪುರ ನಿರ್ಮಾಣಕ್ಕೆ ಅನುಮತಿ ನೀಡುವ ತನಕ ಧರಣಿ ಕೈ ಬಿಡುವುದಿಲ್ಲ ಎಂದು ಪಟ್ಟು ಹಿಡಿದು ಧರಣಿ ಮುಂದುವರೆಸಿದರು.

ನಂತರ ಸ್ಥಳಕ್ಕೆ ಬಂದ ನಗರಪಾಲಿಕೆಯ ಯೋಜನಾ ವಿಭಾಗದ ಜಂಟಿ ನಿರ್ದೇಶಕ ಕೃಷ್ಣನಾಯಕ್, ಗೋಪುರ ನಿರ್ಮಾಣಕ್ಕೆ ವಾರದೊಳಗೆ ಅನುಮತಿ ನೀಡುವುದಾಗಿ ಭರವಸೆ ನೀಡಿದರು. ಈ ವಿಚಾರವಾಗಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರೊಡನೆ ಮಾತನಾಡಿರುವುದಾಗಿಯೂ ತಿಳಿಸಿದರು.

ಕೃಷ್ಣನಾಯಕ್ ಸೇರಿದಂತೆ ನಗರಪಾಲಿಕೆ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ದೀಪಕ್, ಕೆ.ಆರ್. ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಹರೀಶ್, ಅವರ ಮನವಿ ಹಿನ್ನೆಲೆಯಲ್ಲಿ ಶ್ರೀಧರ ರಾಜೇ ಅರಸ್ ಅವರು ಉಪವಾಸ ಧರಣಿ ವಾಪಸ್ಸು ಪಡೆದರು. ವಾರದೊಳಗೆ ಅನುಮತಿ ನೀಡದೆ ಇದ್ದಲ್ಲಿ ಮತ್ತೆ ಧರಣಿ ನಡೆಸುವುದಾಗಿ ಶ್ರೀಧರ ರಾಜೇ ಅರಸ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಕ್ಷಸ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋಲ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಕ್ಷಸ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
- ಸ್ಕ್ರೀನ್ 2 ನೊಫೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
- ಸ್ಕ್ರೀನ್ 3 ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
- ಸ್ಕ್ರೀನ್ 4 ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
- ಸ್ಕ್ರೀನ್ 2 ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
- ಸ್ಕ್ರೀನ್ 3 ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗ್ರಾಹಕರ ಪ್ರಾಣದ ಜೊತೆ ಚೆಲ್ಲಾಟವಾಡಬೇಡಿ...!

ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಹೋಂ ಸ್ಟೇ, ರೆಸಾರ್ಟ್, ಲಾಡ್ಜ್ ಮಾಲೀಕರಿಗೆ ಎಸ್ಪಿ ಎನ್.ವಿಷ್ಣುವರ್ಧನ್ ಎಚ್ಚರಿಕೆ



ಮೈಸೂರು ಜಿಲ್ಲಾ ಎಸ್ಪಿ ಎನ್.ವಿಷ್ಣುವರ್ಧನ್ ಮಾತನಾಡುತ್ತಿರುವುದು

ಮೈಸೂರು, ಮಾ.13(ಆರ್‌ಕೆ)–ತಮ್ಮ ಗ್ರಾಹಕರ ಪ್ರಾಣದ ಜೊತೆ ಚೆಲ್ಲಾಟವಾಡಬೇಡಿ ಎಂದು ಮೈಸೂರು ಜಿಲ್ಲಾ ಎಸ್ಪಿ ಎನ್.ವಿಷ್ಣುವರ್ಧನ್, ಹೋಂ ಸ್ಟೇ, ರೆಸಾರ್ಟ್ ಹಾಗೂ ಲಾಡ್ಜ್‌ಗಳ ಮಾಲೀಕರಿಗೆ ತಿಳುವಳಿಕೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಉದ್ಯಮಿಯೂ ತಮ್ಮ ಹೋಟೆಲ್, ಲಾಡ್ಜ್, ಹೋಂ ಸ್ಟೇ, ರೆಸಾರ್ಟ್‌ಗಳಲ್ಲಿ ಸರಿಯಾದ ರೀತಿ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿ, ಕನಿಷ್ಠ 3 ತಿಂಗಳ ಕಾಲ ಫುಟೇಜ್‌ಗಳನ್ನು ಸ್ಟೋರ್ ಮಾಡಬೇಕು ಎಂದು ತಿಳಿಸಿದರು.

ಸಾರ್ವಜನಿಕರ ರಕ್ಷಣಾ ಕಾಯ್ದೆ (Public Safety Act) ಅನ್ವಯ ವಾಸ್ತವ್ಯ ಹೂಡುವ ಪ್ರತಿಯೊಬ್ಬ ಗ್ರಾಹಕರ ಗುರುತಿನ ಚೀಟಿ, ವಿಳಾಸ, ಮೊಬೈಲ್ ಸಂಖ್ಯೆಯನ್ನು ಪಡೆದು ಅವರ ಚಲನ–ವಲನಗಳ ಬಗ್ಗೆ ನಿಗಾ ವಹಿಸಬೇಕು. ವಿಶೇಷವಾಗಿ ವಿದೇಶಿ ಪ್ರಜೆಗಳು ಬಂದಾಗ ಅವರಿಗೆ ಸೌಲಭ್ಯ ಒದಗಿಸುವ ಜೊತೆಗೆ ಅವರ ಸಂಪೂರ್ಣ ಮಾಹಿತಿ ಪಡೆಯುವುದು ನಿಮ್ಮ ಜವಾಬ್ದಾರಿ.

ಡಿಜೆ ಬಳಸಿ ಪಾರ್ಟಿ ಮಾಡುವುದು, ಇಸ್ಪೀಟ್ ಆಡಿಸುವುದು, ಡ್ರಗ್ಸ್ ಸೇವನೆ, ಕಾನೂನುಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡುವುದು ಕಂಡುಬಂದಲ್ಲಿ ಅಂತಹ ಉದ್ಯಮದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ವಿಷ್ಣುವರ್ಧನ್ ಎಚ್ಚರಿಕೆ ನೀಡಿದರು.

ವಾಟರ್ ಸ್ಪೋರ್ಟ್ಸ್ ಚಟುವಟಿಕೆ ನಡೆಸುವ ರೆಸಾರ್ಟ್ ಮಾಲೀಕರು, ತರಬೇತಿ ಹೊಂದಿರುವ ಈಜುಗಾರರನ್ನು ಸ್ಥಳದಲ್ಲಿರಿಸಿ ಜಲಕ್ರೀಡೆಯಾಡುವ ಪ್ರತಿಯೊಬ್ಬರಿಗೂ ಲೈಫ್ ಜಾಕೆಟ್ ನೀಡುವುದು ಅತ್ಯಗತ್ಯವಾಗಿದ್ದು, ಈ ವಿಷಯದಲ್ಲಿ ಗ್ರಾಹಕರ ಅಮೂಲ್ಯ ಪ್ರಾಣದೊಂದಿಗೆ ಚೆಲ್ಲಾಟವಾಡಬಾರದು ಎಂದು ಸೂಚನೆ ನೀಡಿದರು.

ನಿಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಮಾಹಿತಿ ಪಡೆದುಕೊಂಡು ನಿಗಾ ವಹಿಸುವ ಜೊತೆಗೆ ಸುಪ್ರೀಂಕೋರ್ಟ್ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವ ಮೂಲಕ ಸಾಮಾಜಿಕ ಜವಾಬ್ದಾರಿ ಹೊರಬೇಕು. ಈಗ ರಜಾ ದಿನಗಳು ಬರುವುದರಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಅವರಿಗೆ ಆತಿಥ್ಯ ನೀಡುವ ಜೊತೆಗೆ ರಕ್ಷಣೆಯನ್ನು ನೀಡಬೇಕು ಎಂದು ಎಸ್ಪಿಯವರು ಸಲಹೆ ನೀಡಿದರು.

ನೀವು ಉದ್ದಿಮೆ ನಡೆಸಲು ನಮ್ಮ ಅಭ್ಯಂತರವಿಲ್ಲ. ಆದರೆ ಮಾರ್ಗಸೂಚಿ, ಮುಂಜಾಗ್ರತಾ ಕ್ರಮ ಅನುಸರಿಸುವ ಮೂಲಕ ಮೈಸೂರಿನ ಘನತೆ, ಗೌರವ ಕಾಪಾಡಬೇಕಾಗಿದೆ ಎಂದು ವಿಷ್ಣುವರ್ಧನ್ ಇದೇ ವೇಳೆ ತಿಳಿಸಿದರು. ಎಎಸ್ಪಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಲಿಂಗ ಸಮಾನತೆಯ ಭಾವನೆ ಮನೆಯಿಂದಲೇ ಆರಂಭವಾಗಬೇಕು

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಉಷಾರಾಣಿ ಸಲಹೆ

ಮೈಸೂರು, ಮಾ.13(ಬಿಎಲ್‌ಯು)– ಯಾವುದೇ ತಾರತಮ್ಯವಿಲ್ಲದ ಲಿಂಗ ಸಮಾನತೆ ಭಾವನೆ ಮನೆಗಳಿಂದಲೇ ಆರಂಭವಾಗಬೇಕು ಎಂದು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಉಷಾರಾಣಿ ಸಲಹೆ ನೀಡಿದರು.

ನಗರದ ಕಲಾಮಂದಿರದಲ್ಲಿ ಇಂದು ಮೈಸೂರಿನ ನ್ಯಾಯಾಂಗ ಇಲಾಖೆಯ ಮಹಿಳಾ ನೌಕರರು ಹಾಗೂ ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಸಹಯೋಗದಲ್ಲಿ ಇಂದು ಆಯೋಜಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಂಡೆಂದು ಸುಮ್ಮನೆ ಕೂರುವುದು, ಹೆಣ್ಣೆಂದು ಹೆಚ್ಚಿನ ಕೆಲಸ ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮತ್ತು ಗಂಡು ಪರಸ್ಪರ ಒಬ್ಬರನ್ನೊಬ್ಬರು ಗೌರವಿಸುತ್ತಾ ಅವರವರ ಕೆಲಸ ಮಾಡುತ್ತಾ ಸಾಗಬೇಕು. ಸಮಸ್ಯೆಗಳು ಎಲ್ಲರಿಗೂ ಬಂದೇ ಬರುತ್ತದೆ. ಆದರೆ ಅದನ್ನೆಲ್ಲಾ ಸಮರ್ಥವಾಗಿ ಎದುರಿಸಿ ಸಾಧನೆ ಮಾಡಬೇಕು. ನಾವು ಕೂಡ ಹಲವು ಸಮಸ್ಯೆಗಳನ್ನು ಎದುರಿಸಿ ಈ ಹಂತಕ್ಕೆ ಬಂದಿದ್ದೇವೆ ಎಂದು ಉಷಾರಾಣಿ ಹೇಳಿದರು.

ಬದುಕಿನ ಬಂಡಿ ಸಾಗಿಸಲು ಹೆಗಲಿಗೆ ಹಲವು ಜವಾಬ್ದಾರಿ ಹೊತ್ತು ಕುಟುಂಬವನ್ನು ನಿರ್ವಹಿಸುವ ಜೊತೆಗೆ ದೇಶದ ಸಂಸ್ಕೃತಿ ಉಳಿಸುವ ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ನಮ್ಮ ಹಿಂದೂ ಸಮಾಜ ನೀಡಿದೆ. ಈ ಮೂಲಕ ಲಿಂಗ ಸಮಾನತೆಯನ್ನು ಒತ್ತಿ ಹೇಳಲಾಗಿದೆ ಎಂದು ಹೇಳಿದರು.

ಮಹಿಳಾ ದಿನಾಚರಣೆ ಹಿಂದೆ ಬಹಳಷ್ಟು ಹೋರಾಟವಿದೆ. ಮಹಿಳೆಯರು ಯಾವ ರೀತಿ ಹೋರಾಟ ಮಾಡಿದ್ದಾರೆ ಎಂಬುದನ್ನು ಅರಿಯಲು ಇತಿಹಾಸದ ಪುಟಗಳನ್ನು ತಿರುವಿ ನೋಡಬೇಕು ಎಂದು ಉಷಾರಾಣಿ ತಿಳಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಮೈಸೂರಿನ ನ್ಯಾಯಾಂಗ ಇಲಾಖೆಯ ಮಹಿಳಾ ನೌಕರರು ಹಾಗೂ ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಉಷಾರಾಣಿ ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶೆ ಸಾವಿತ್ರಿ ಶಿವಪುತ್ರ ಅವರು, ಹೆಣ್ಣು ಮಗಳಾಗಿ, ತಾಯಿಯಾಗಿ, ಸಹೋದರಿಯಾಗಿ, ಪತ್ನಿಯಾಗಿ ವಿವಿಧ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ ಎಂದರು.

ಪುರುಷರಿಗಿಂತ ನಾನೇನು ಕಡಿಮೆ ಇಲ್ಲವೆಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಶಕ್ತಿ ಏನೆಂದು ತೋರಿಸಿದ್ದಾಳೆ. ಹಾಗೆಂದ ಮಾತ್ರಕ್ಕೆ ತಾನೊಬ್ಬ ಸಮರ್ಥ ಮಹಿಳೆ ಎಂಬ ಅಹಂ ತೋರಿಸಿಲ್ಲ ಎಂದು ತಿಳಿಸಿದರು.

ಹಾಗೆಂದ ಮಾತ್ರಕ್ಕೆ ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆಯಾಗಿದೆ ಎಂದು ನಾನು ಹೇಳುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಹಿಳಾ ಸಮಾನತೆ ಇನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿಲ್ಲ ಎಂದರು.

3ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ ನ್ಯಾಯಾಲಯದ ನ್ಯಾಯಾಧೀಶೆ ಭಾಗ್ಯಾ, ಮಹಿಳೆಯರ ಸಮಾನತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಮನಃಶಾಸ್ತ್ರಜ್ಞೆ ಡಾ.ಭಾರತಿ ಕುಲಶೇಖರ್, ಉದ್ಯೋಗಸ್ಥ ಮಹಿಳೆಯರ ಮಾನಸಿಕ ಸಮಸ್ಯೆಗಳು ಮತ್ತು ಅದನ್ನು ಎದುರಿಸುವ ವಿಧಾನ ಕುರಿತು ಮಾತನಾಡಿದರೆ, ಧ್ಯಾನತಜ್ಞೆ ಮನೋರಮಾ ಅವರು ಒತ್ತಡ ನಿವಾರಣೆಗಾಗಿ ಸರಳ ಧ್ಯಾನ ಕುರಿತು ಉಪನ್ಯಾಸ ನೀಡಿದರು.

ಮಹಿಳಾ ನೌಕರರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ದುರ್ಗಾ ನೃತ್ಯ ಅಕಾಡೆಮಿಯವರು ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮ ಆಯೋಜಿಸಿದ್ದ ಭಾರತಿ, ವಸುಧಾ, ಗೀತಾ, ಹೇಮಲತಾ, ಅನಿತಾ ಕುಮಾರಿ, ರಾಜೇಶ್ವರಿ, ಭಾರತಿ ಮತ್ತು ಯಶೋಧಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

8ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.13– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜಾತಿಯ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಗಂಡು ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮೈಸೂರು ಇಲ್ಲಿಗೆ 8ನೇ ತರಗತಿಗಾಗಿ ಪ್ರವೇಶಾತಿಗೆ ಪರೀಕ್ಷೆಯ ಮುಖಾಂತರ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿಯಲ್ಲಿ ಅಥವಾ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇಲ್ಲಿಗೆ ಸಲ್ಲಿಸಬಹುದು. ಎಂದು ನಂಜನ ಗೂಡು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿಮ್ಮಪ್ಪನ ಸನ್ನಿಧಿಗೆ ದಾಖಲೆಯ ಕೆಎಂಎಫ್ ತುಪ್ಪ ರವಾನೆ

ಯುಗಾದಿಗಾಗಿ ತುರ್ತು 2 ಸಾವಿರ ಟನ್‌ಗೆ ಡಿಮ್ಯಾಂಡ್

ಅಮರಾವತಿ, ಮಾ.13– ತಿರುಪತಿ ತಿಮ್ಮಪ್ಪನ ಸನ್ನಿಧಿಗೆ ದಾಖಲೆಯ ಕೆಎಂಎಫ್ ನಂದಿನಿ ತುಪ್ಪ ರವಾನೆಯಾಗುತ್ತಿದೆ. ತಿರುಪತಿಯಲ್ಲಿ ಈ ಹಿಂದೆ ಬೇರೆ ಬ್ರಾಂಡ್ ತುಪ್ಪ ಬಳಸಿ ಲಡ್ಡು ತಯಾರಿಸಲಾಗುತ್ತಿತ್ತು. ಆದರೆ ಇದೀಗ ಲಡ್ಡು ತಯಾರಿಕೆಗಾಗಿ ಕೆಎಂಎಫ್ ನಂದಿನಿ ತುಪ್ಪವನ್ನು ಮಾತ್ರ ಬಳಸುತ್ತಿದ್ದು, ಇದರ ಹೊರತಾಗಿ ಬೇರೆ ಯಾವುದೇ ತುಪ್ಪವನ್ನು ಬಳಸುತ್ತಿಲ್ಲ. ಸದ್ಯ ಯುಗಾದಿ ಸಮೀಪಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಲಡ್ಡು ತಯಾರಿಕೆಗಾಗಿ ತುರ್ತು 2 ಸಾವಿರ ಟನ್ ತುಪ್ಪವನ್ನು ಕಳುಹಿಸಿಕೊಡುವಂತೆ ಟಿಟಿಡಿ, ಕೆಎಂಎಫ್‌ಗೆ ಸೂಚಿಸಿದ್ದು, ಈ ತಿಂಗಳಲ್ಲಿ ಸಪ್ಲೈ ಮಾಡುವಂತೆ ತಿಳಿಸಿದೆ.

ಸತತವಾಗಿ ಕೆಎಂಎಫ್ ನಂದಿನಿಗೆ ಮಾತ್ರ ಟಿಟಿಡಿ ಟೆಂಡರ್ ಕೊಡುತ್ತಿದೆ. ಈ ಮೊದಲು ತಿಮ್ಮಪ್ಪನ ಸನ್ನಿಧಾನಕ್ಕೆ ಎರಡು ದಿನಕ್ಕೆ ಒಮ್ಮೆ ತುಪ್ಪ ರವಾನೆಯಾಗುತ್ತಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನವೂ ತುಪ್ಪ ರವಾನೆಯಾಗುತ್ತಿದೆ. ಈ ವರ್ಷ 5 ಸಾವಿರ ಟನ್ ತುಪ್ಪವನ್ನು ರವಾನಿಸುವಂತೆ ಟಿಟಿಡಿ ಕೆಎಂಎಫ್‌ಗೆ ಬೇಡಿಕೆ ಇಟ್ಟಿದ್ದು, ಈಗಾಗಲೇ 600 ಟನ್ ತುಪ್ಪ ಕಳುಹಿಸಿಕೊಡಲಾಗಿದೆ.

'ಗ್ಯಾರಂಟಿ' ಸಮರ್ಪಕ ಅನುಷ್ಠಾನಕ್ಕೆ ಗ್ಯಾರಂಟಿ ಸಮಿತಿಗಳು ಅನಿವಾರ್ಯ

- ರಾಜ್ಯ ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್ ಸಮರ್ಥನೆ
- ವಿಪಕ್ಷಗಳ ವಿರೋಧದಲ್ಲಿ ಅರ್ಥವಿಲ್ಲ; ಬರೀ ಹೊಟ್ಟೆಕಿಚ್ಚು

ಮೈಸೂರು, ಮಾ.13(ಎಂಟಿವೈ)– ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಾರಿಗೆ ತರಲಾಗಿದೆ ಎಂದು ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿಗಳು ವಿಪಕ್ಷ ನಾಯಕರ ನಿದ್ದೆಗೆಡಿಸಿವೆ. ಹೊಟ್ಟೆಕಿಚ್ಚಿನಿಂದ ಅವರು ವಿರೋಧ ಮಾಡುತ್ತಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಲಕ್ಷಾಂತರ ಕುಟುಂಬಕ್ಕೆ ನೆರವಾಗಿವೆ. ಇದರಿಂದ ಫಲಾನುಭವಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮೇಲೆ ನಂಬಿಕೆ ಹೆಚ್ಚಿಸಿಕೊಂಡಿದ್ದಾರೆ. ಇದನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವಿರುದ್ಧ ಅಪಪ್ರಚಾರ ನಡೆಸುತ್ತಿದೆ. ಗ್ಯಾರಂಟಿ ಸಮಿತಿ ರದ್ದುಪಡಿಸುವಂತೆ ಸದನದಲ್ಲಿ ಗದ್ದಲ ನಡೆಸುತ್ತಿರುವ ಬಿಜೆಪಿ ನಾಯಕರು ರಾಜ್ಯಪಾಲರಿಗೆ ದೂರು ಕೊಟ್ಟಿದ್ದಾರೆ. ಮೊದಲಿಂದಲೂ ಟೀಕೆ ಮಾಡುತ್ತಲೇ ಇದ್ದಾರೆ. ಆದರೆ, ನಮ್ಮ ಸರ್ಕಾರದಲ್ಲಿ ಗ್ಯಾರಂಟಿಗಳು ನಿಲ್ಲುವುದಿಲ್ಲ. ಸಮಿತಿಯಲ್ಲೂ ಯಾವುದೇ ಬದಲಾವಣೆ ಇಲ್ಲ ಎಂದರು.

51 ಸಾವಿರ ಕೋಟಿ ಮೊತ್ತದ ಬೃಹತ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು, ಉಸ್ತುವಾರಿಗೆ ಅರ್ಹರು, ಅನರ್ಹರ ಪರಿಶೀಲನೆ, ಒಬ್ಬ ಫಲಾನುಭವಿ ಯೋಜನೆಯಿಂದ ವಂಚಿತರಾಗಬಾರದೆಂಬ ಕಾರಣಕ್ಕೆ ಈ ಸಮಿತಿ ಇದೆ. ಇದನ್ನು ವಿರೋಧಿಸುವುದು ಸರಿಯಲ್ಲ. ಗ್ಯಾರಂಟಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರಿಗೆ ಐಷಾರಾಮಿ ಸೌಲಭ್ಯಗಳನ್ನು ಕೊಟ್ಟಿಲ್ಲ. ನಿಗದಿಪಡಿಸಿರುವ ಗೌರವಧನ ನಿರ್ವಹಣೆಗೂ ಸಾಕಾಗುವುದಿಲ್ಲ. ತೆರಿಗೆ ಹಣ ವ್ಯರ್ಥವಾಗುತ್ತಿದೆ ಎಂಬ ವಿಪಕ್ಷ ನಾಯಕರ ಮಾತಿನಲ್ಲಿ ಸತ್ಯವಿಲ್ಲ. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಲ್ಲದೇ ಜನರ ಕಷ್ಟ ಕೇಳುವವರು ಇಲ್ಲವಾಗಿದ್ದಾರೆ. ಗ್ಯಾರಂಟಿ ಸಮಿತಿ ಸದಸ್ಯರು ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದಾರೆ. ಯಾವುದೇ ಆಸೆ–ಆಮಿಷ ಇಲ್ಲದೇ ಕೆಲಸ ಮಾಡುತ್ತಿದ್ದಾರೆ. ಇದನ್ನೇ ವಿರೋಧಿಸುವುದು ಸರಿಯಲ್ಲ ಎಂದು ಹೇಳಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ಯಾವುದೇ ಧರ್ಮ, ಜಾತಿ ಮತ್ತು ಪಕ್ಷಕ್ಕೆ ಸೀಮಿತವಾಗಿಲ್ಲ. ಗ್ಯಾರಂಟಿಗಳಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಿದೆ. ಬಡತನ ನಿರ್ಮೂಲನೆಯಾಗುತ್ತಿದೆ. ಹಾಗಾಗಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಭಯಭೀತರಾಗಿದ್ದಾರೆ. ಕೇಂದ್ರದ ಎನ್‌ಡಿಎ ಸರ್ಕಾರ ಕಳೆದ 10 ವರ್ಷಗಳಲ್ಲಿ ಬಡವರ ಪರವಾದ ಒಂದೂ ಕಾರ್ಯಕ್ರಮ ರೂಪಿಸಲಿಲ್ಲ. ದೇಶದ ಜನತೆಯಲ್ಲಿ 60 ದಿನಗಳ ಕಾಲಾವಕಾಶ ಕೇಳಿದ ಮೋದಿಯವರು ಏನು ಮಾಡಿದರು? ಗ್ರಾಮ 1 ಕೇಂದ್ರಗಳಲ್ಲಿ ಬಿಜೆಪಿ ಕಾರ್ಯಕರ್ತರನ್ನು ನೇಮಕ ಮಾಡಿಲ್ಲವೇ? ಮಹಾರಾಷ್ಟ್ರದಲ್ಲಿ ಸಂಘ ಪರಿವಾರ ಮತ್ತು ಬಿಜೆಪಿ ಕಾರ್ಯಕರ್ತರನ್ನು ಸರ್ಕಾರದ ವಿವಿಧ ಸ್ಥಾನಕ್ಕೆ ನೇಮಿಸಿಕೊಂಡಿಲ್ಲವೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ 16ನೇ ಬಜೆಟ್ ಕರ್ನಾಟಕದ ಸಮತೋಲನ ಅಭಿವೃದ್ಧಿಯ ದೂರದೃಷ್ಟಿಯಿಂದ ಕೂಡಿದೆ. ಎಲ್ಲ ವರ್ಗ, ಜಾತಿ, ಧರ್ಮ ಎಲ್ಲರಿಗೂ ಸಾಮಾಜಿಕ ನ್ಯಾಯ ಕಲ್ಪಿಸಲಾಗಿದೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಹೊಟ್ಟೆಕಿಚ್ಚಿನಿಂದ ಹಲಾಲ್ ಬಜೆಟ್ ಎಂದು ಟೀಕಿಸುತ್ತಿದ್ದಾರೆ. ಅಲ್ಪಸಂಖ್ಯಾತರ ಬಜೆಟ್ ಎಂದು ಟೀಕಿಸುವವರು ಚರ್ಚೆಗೆ ಬರುವಂತೆ ಸವಾಲು ಹಾಕಿದರು. 4 ಲಕ್ಷ ಕೋಟಿ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ 4 ಸಾವಿರ ಕೋಟಿ ಕೊಡಲಾಗಿದೆ. ಇವರ ಆರೋಪದಲ್ಲಿ ಹುರುಳಿಲ್ಲ. ಬರೀ ರಾಜಕೀಯ ಮಾಡಲು ವಿರೋಧ ಮಾಡುತ್ತಾರೆ ಎಂದು ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಪ್ರೊ.ಶಿವಕುಮಾರ್, ಚಂದ್ರಶೇಖರ್, ಬಸವಣ್ಣ, ಲತಾ ಇನ್ನಿತರರು ಇದ್ದರು.

ಇಂದಿನಿಂದ ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗಾಂಧಿ ಶಿಲ್ಪ ಬಜಾರ್

22ಕ್ಕೂ ಹೆಚ್ಚು ರಾಷ್ಟ್ರ, ರಾಜ್ಯ ಪ್ರಶಸ್ತಿ ಪುರಸ್ಕೃತ ಕರಕುಶಲಕರ್ಮಿಗಳು, ಕೈಮಗ್ಗ ನೇಕಾರರು ಭಾಗಿ

ಮೈಸೂರು, ಮಾ.13(ಜಿಎ)–ಜವಳಿ ಸಚಿವಾಲಯ ಅಭಿವೃದ್ಧಿ ಆಯುಕ್ತರು, ತ್ರಿಪುರದ ಕೈಮಗ್ಗ, ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ ಸಹಯೋಗದಲ್ಲಿ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ವತಿಯಿಂದ ಮಾ.14ರಿಂದ 23ರವರೆಗೆ ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳವಾದ ಗಾಂಧಿ ಶಿಲ್ಪ ಬಜಾರ್ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕುರಕುಶಲ ಮಾರುಕಟ್ಟೆ ವಿಸ್ತರಣಾಧಿಕಾರಿ (ಎಚ್‌ಬಿಒ) ಎಂ.ಬಿ.ಸಾಬೀರ ಈ ವಿಷಯ ತಿಳಿಸಿ, ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಮಾ.14ರಂದು ಸಂಜೆ 4ಕ್ಕೆ ಮೇಳವನ್ನು ಜಿಪಂ ಸಿಇಒ ಎಸ್.ಉಕೇಶ್‌ಕುಮಾರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯದ ನಿರ್ದೇಶಕ ಆರ್.ಅರುಣ್‌ಕುಮಾರ್, ಜವಳಿ ಮಂತ್ರಾಲಯದ ಅಭಿವೃದ್ಧಿ ಆಯುಕ್ತರ ಕಚೇರಿ ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್‌ರಾವ್ ಆತುಕುರಿ, ಸಹಾಯಕ ನಿರ್ದೇಶಕ ಕೆ.ಎಸ್.ಸುನಿಲ್‌ಕುಮಾರ್ ಭಾಗವಹಿಸುವರು. ಎಡಿಸಿ ಡಾ.ಪಿ.ಶಿವರಾಜು ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಮೇಳದಲ್ಲಿ ದೇಶದ 22ಕ್ಕೂ ಹೆಚ್ಚು ರಾಜ್ಯಗಳ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕರಕುಶಲಕರ್ಮಿಗಳು ಹಾಗೂ ಕೈಮಗ್ಗ ನೇಕಾರರು, ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳು ಒಂದೇ ಸೂರಿ ನಡಿಯಲ್ಲಿ ಲಭ್ಯವಿದೆ. ಕುಶಲಕರ್ಮಿಗಳು ತಮ್ಮ ಕುಲಕಸುಬುಗಳನ್ನು ಗ್ರಾಹಕರ ಅಗತ್ಯ ಮತ್ತು ಅಭಿರುಚಿಯನ್ನು ತಿಳಿದುಕೊಂಡು ನವೀನ ವಿನ್ಯಾಸದ ವಸ್ತುಗಳನ್ನು ರೂಪಿಸಲಾಗಿದೆ ಎಂದರು.

ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇರ್ಪ, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಒಡಿಶಾ ರಾಜ್ಯದ ಪಟ್ಟ ಚಿತ್ರ ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಬಿದಿರು–ಬೆತ್ತದ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಡ್ರೈ ಫ್ಲವರ್‌ಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಲ್ಯಾರಿ ಬಟ್ಟೆಗಳು ಖರೀದಿಗೆ ಸಿಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಚ್‌ಬಿಒ ಸ್ವದೇಶ್ ಫಾರ, ಅರ್ಬನ್ ಹಾತ್ ಸಂಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ರಾಕೇಶ್ ರೈ ಉಪಸ್ಥಿತರಿದ್ದರು.

ಏ.2ರಿಂದ ಚಿತ್ರಕಲಾ ಶಿಬಿರ

ಮೈಸೂರು, ಮಾ.13–ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಬಿರ ವನ್ನು ಏ.2ರಿಂದ 22ರವರೆಗೆ ಮೈಸೂರಿನ ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಡ್ರಾಯಿಂಗ್ ಪೇಪರ್ ನೀಡಲಾಗುತ್ತದೆ. ಪ್ರತಿದಿನ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ತರಗತಿಗಳು ನಡೆಯಲಿವೆ. ಏ.22ರಂದು ಮಕ್ಕಳು ರಚಿಸಿದ ಚಿತ್ರಗಳ ಪ್ರದರ್ಶನ ಏರ್ಪಡಿಸಿ, ಪ್ರತಿ ವಿಭಾಗ ದಲ್ಲಿ ಉತ್ತಮ ಚಿತ್ರಗಳಿಗೆ 3 ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. ಅರ್ಜಿಗಳನ್ನು ಮಾ.14ರಿಂದ ರಾಮಾನುಜ ರಸ್ತೆಯಲ್ಲಿರುವ ಬಾಲಜಗತ್ ಶಾಲೆ ಸಹ ಶಿಕ್ಷಕ ಚಾಮರಾಜಪ್ಪ ಅವರ ಬಳಿ ಭರ್ತಿ ಮಾಡಿದ ಅರ್ಜಿಗಳನ್ನು ಮಾ.31 ರವರೆಗೆ ತಲುಪಿಸಬಹುದು. ಮಾಹಿತಿಗೆ 80954 40122, 861858 6998, 96866 77503 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ

ವೇದ ಉಪನಿಷತ್ತು ಅಡ್ಡದಾರಿ ತೋರಿಸಿದರೆ ಸಂವಿಧಾನ ಜನರ ಹಕ್ಕಿನ ಮಹತ್ವ ತಿಳಿಸುತ್ತದೆ

ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ ಅಭಿಪ್ರಾಯ



ಮೈಸೂರಿನ ಮಾನಸ ಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಗುರುವಾರ ಮ.ಸ್ವಾಮಿ ಕಪ್ಪಸೋಗೆ ರಚಿತ 'ಸೇರುವ ದಾರಿ' ಕಾದಂಬರಿಯನ್ನು ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ) ಬಿಡುಗಡೆ ಮಾಡಿದರು.

ಮೈಸೂರು, ಮಾ.13(ಬಿಎಲ್‌ಯು)– ವೇದ ಉಪನಿಷತ್ತು ಅಡ್ಡದಾರಿ ತೋರಿಸಿದರೆ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಜನರ ಹಕ್ಕುಗಳ ಮಹತ್ವ ತಿಳಿಸುತ್ತದೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ) ಅಭಿಪ್ರಾಯಪಟ್ಟರು.

ನಗರದ ಮಾನಸ ಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಇಂದು ಮ.ಸ್ವಾಮಿ ಕಪ್ಪಸೋಗೆ ರಚಿತ 'ಸೇರುವ ದಾರಿ' ಕಾದಂಬರಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಜಾತಿ ಮತ್ತು ಧರ್ಮದ ಹೆಸರಿನಲ್ಲಿರುವ ನಡೆಯುವ ವಿಕೃತಿ ಕೊನೆಯಾಗಬೇಕು ಎಂದರು.

ಅತಿಯಾದ ಜಾತಿ ಪದ್ಧತಿಯ ಮನೋಭಾವ ಹಾಗೂ ದುಷ್ಟ ರಾಜಕಾರಣದಿಂದ ಸಾಂಸ್ಕೃತಿಕ ಚಿಂತನೆ ದಿನಕಳೆದಂತೆ ಮಸುಕಾಗುತ್ತಿದೆ. ಈ ಮೂಲಕ ಸಮಾಜಮುಖಿ ಚಿಂತನೆ ಪಲ್ಲಟಗೊಂಡು ವ್ಯವಸ್ಥೆಯ ವೈಫಲ್ಯತೆ ಹೆಚ್ಚಾಗುತ್ತಿದೆ. ಇದು ಮುಕ್ತವಾಗಿ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗಬೇಕು ಎಂದು ಜನಾರ್ಧನ್ ಪ್ರತಿಪಾದಿಸಿದರು.

ಸಾಂಸ್ಕೃತಿಕ ಚಿಂತನೆಯಲ್ಲಿ ಜಾನಪದ ಕಾವ್ಯ ಪ್ರಮುಖ ಪಾತ್ರ ವಹಿಸುತ್ತದೆ. ಸಾಂಸ್ಕೃತಿಕ ನೆಲೆಗಟ್ಟಿನ ವಾಸ್ತವತೆ ತಳಹದಿಯಲ್ಲಿ ಜಾನಪದ ಕಾವ್ಯ ವಿಸ್ತಾರಗೊಳ್ಳುತ್ತಾ ಹೋಗುತ್ತಿದೆ. ಒಳ್ಳೆಯ ಸಮಾಜ ನಿರ್ಮಾಣಕ್ಕೆ ಅವಶ್ಯವಿರುವ ಅಂಶಗಳನ್ನು ಅಕ್ಷರ ಬಲ್ಲ ಜಾನಪದ ಕಲಾವಿದರು ವಾಸ್ತವತೆ ಆಧಾರದ ಮೇಲೆ ಹಲವು ಹಾಡುಗಳನ್ನು ರಚಿಸಿದ್ದಾರೆ. ಈ ಕಾರಣದಿಂದ ನೂರಾರು ವರ್ಷವಾದರೂ ಜಾನಪದ ಸತ್ವ ಗಟ್ಟಿಯಾಗಿ ನಿಂತಿದೆ ಎಂದು ಪ್ರತಿಪಾದಿಸಿದರು.

ಜಾತಿಯತೆಯು ಸಮಾಜದಲ್ಲಿ ಸಂಬಂಧಗಳಿಗೆ ತಡಕಾಡುವ ಪರಿಸ್ಥಿತಿ ಬಂದಿದೆ. ಜಾತಿಯತೆ ಆಧಾರದಲ್ಲಿ ಇಂತಹವರು ಹೀಗೆ ಇರಬೇಕೆಂಬ ಲಕ್ಷ್ಮಣ ರೇಖೆ ಹಾಕಲಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯ ಕಥಾವಸ್ತುವಾದ 'ಸೇರುವ ದಾರಿ' ಪ್ರಮುಖ ಪಾತ್ರ ವಹಿಸುತ್ತದೆ ಎಂದು ಜನಾರ್ಧನ್ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಚಿಂತಕ ಪ್ರೊ.ಸಿ.ನಾಗಣ್ಣ, ಈ ಕಾದಂಬರಿ ಬರೆದಿರುವ ಮ.ಸ್ವಾಮಿ ಕಪ್ಪಸೋಗೆ ಅವರು ಮೊದಲ ಬಾರಿಗೆ ಆರು ರನ್ ಬಾರಿಸಿ ಯಶಸ್ವಿಯ ಹಾದಿಯಲ್ಲಿ ಸಾಗುತ್ತಿದ್ದಾರೆ. ಕಾದಂಬರಿಯ ನಾಯಕನಲ್ಲಿ ವೈಚಾರಿಕ ಮನೋಭಾವವಿದ್ದರೆ, ಕಥಾನಾಯಕಿ ಅಡೆ ತಡೆಗಳ ಮಧ್ಯೆ ಉತ್ತಮ ವಿದ್ಯಾಭ್ಯಾಸ ಮಾಡಿರುತ್ತಾಳೆ. ಸಮಾಜ ಹಾಗೂ ಪೋಷಕರ ತೀವ್ರ ವಿರೋಧದ ನಡುವೆಯೂ ಮದುವೆಯಾಗುತ್ತಾರೆ. ತರುವಾಯ ಇಬ್ಬರ ಪಾತ್ರಗಳು ಹಲವು ಮಜಲುಗಳನ್ನು ದಾಟಿ ಹೋಗುತ್ತದೆ ಎಂದು ವಿವರಿಸಿದರು. ಕಾದಂಬರಿ ಕರ್ತೃ ಮಹದೇವಸ್ವಾಮಿ ಕಪ್ಪಸೋಗೆ, ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಅಧ್ಯಾಪಕ ರಸಿಕ ಎಸ್.ಯಡಕೊಳ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜ್ಞಾನ ವೃದ್ಧಿಗಾಗಿ ನಿರಂತರ ಅಧ್ಯಯನ ಅವಶ್ಯ

ಖ್ಯಾತ ವಾಗ್ಮಿ ಪ್ರೊ.ಕೃಷ್ಣೇಗೌಡ ಕಿವಿಮಾತು



ಮೈಸೂರಿನ ಜ್ಞಾನಬುತ್ತಿ ಸಂಸ್ಥೆಯಲ್ಲಿ ಆಯೋಜಿಸಿರುವ ಪಿಸಿ ಹಾಗೂ ಪಿಎಸ್‌ಐ ಪರೀಕ್ಷೆಗಳ ತರಬೇತಿ ಶಿಬಿರವನ್ನು ಸಾಹಿತಿ ಹಾಗೂ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು.

ಮೈಸೂರು, ಮಾ.13(ಎಸ್‌ಬಿಡಿ)– ಪರೀಕ್ಷೆಗಾಗಿ ಮಾತ್ರವಲ್ಲದೆ ಜ್ಞಾನ ವೃದ್ಧಿಗಾಗಿ ನಿರಂತರ ಅಧ್ಯಯನದಲ್ಲಿ ತೊಡಗಬೇಕು ಎಂದು ಸಾಹಿತಿ, ವಾಗ್ಮೀ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ಆವರಣದಲ್ಲಿರುವ ಜ್ಞಾನಬುತ್ತಿ ಉಚಿತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದಲ್ಲಿ ಆಯೋಜಿಸಿರುವ ಪಿಸಿ ಹಾಗೂ ಪಿಎಸ್‌ಐ ಪರೀಕ್ಷೆಗಳ 45 ದಿನಗಳ ತರಬೇತಿ ಶಿಬಿರ ಉದ್ಘಾಟಿಸಿ, ಮಾತನಾಡಿದರು.

ಓದಿ ಬರೆಯುವುದಷ್ಟೇ ಶಿಕ್ಷಣ. ಉತ್ತಮ ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಗಿಟ್ಟಿಸುವುದೇ ಜೀವನ ಎಂಬ ಭಾವನೆ ಇರಬಾರದು. ಇದಕ್ಕೂ ಮೀರಿ ಮೌಲ್ಯಯುತ ಜೀವನ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ಆದ್ದರಿಂದ ಪರೀಕ್ಷೆಗಾಗಿ ಮಾತ್ರ ಅಧ್ಯಯನ ಮಾಡಬೇಡಿ. ನಿಮ್ಮ ಜ್ಞಾನ ವೃದ್ಧಿಗಾಗಿ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಳ್ಳಿ. ಆಗ ನಿಮ್ಮ ಚಿಂತನೆಯೂ ವಿಸ್ತಾರವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಇಂದಿನ ಯುವ ಜನತೆ, ತಮಗೂ, ಸಮಾಜಕ್ಕೂ ಸಂಬಂಧವಿಲ್ಲ ಎನ್ನುವಂತೆ ಬದುಕುತ್ತಿದ್ದಾರೆ. ಅನಾವಶ್ಯಕ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಯುವ ಸಮೂಹ ಹೀಗೆ ಸಮಾಜದಿಂದ ವಿಮುಖವಾದರೆ ದೇಶಕ್ಕೆ ಬಹಳ ದೊಡ್ಡ ನಷ್ಟವಾಗಲಿದೆ. ಯುವ ಜನತೆ ತಪ್ಪು ದಾರಿಗಳ ಬಗ್ಗೆ ಜಾಗ್ರತೆಯಿಂದಿರಬೇಕು. ಗುರಿ ಸಾಧಿಸಿ, ದೇಶಕ್ಕೆ ಸೇವೆ ಮಾಡುವುದರ ಕಡೆಗಷ್ಟೇ ಗಮನವಿರಬೇಕು. ಸಂವಿಧಾನದ ಮೌಲ್ಯಗಳ ಬಗ್ಗೆ ತಿಳಿದುಕೊಂಡು, ಸಮಾಜದ ಗಟ್ಟಿ ಧ್ವನಿಯಾಗಬೇಕು. ಗ್ರಹಿಕಾ ಶಕ್ತಿಯನ್ನು ಕಳೆದುಕೊಳ್ಳದೆ, ಸಾಹಿತ್ಯದ ಕಡೆ ಒಲವು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಯಾವುದೇ ನಿರೀಕ್ಷೆಗಳಿಲ್ಲದೆ ಜ್ಞಾನದ ಹಸಿವಿರುವ ಹಾಗೂ ಉದ್ಯೋಗದ ಕನಸಿರುವ ಅಭ್ಯರ್ಥಿಗಳ ಯಶಸ್ಸಿಗೋಸ್ಕರ ಉಚಿತ ತರಬೇತಿ ಕಲ್ಪಿಸಿರುವ ಜ್ಞಾನಬುತ್ತಿ ಸಂಸ್ಥೆ, ನಿಜಕ್ಕೂ ಮಾದರಿ. ಪರಿಸ್ಥಿತಿ, ಸಂದರ್ಭಗಳನ್ನೇ ಬಂಡವಾಳ ಮಾಡಿಕೊಂಡು ಹಣ ಮಾಡುವವರ ನಡುವೆ ಇಂತಹ ಸಂಸ್ಥೆಗಳಿರುವುದು ಹೆಮ್ಮೆಯ ಸಂಗತಿ. ಈ ಸಂಸ್ಥೆಯಿಂದ ಪ್ರಯೋಜನ ಪಡೆದವರು ಭವಿಷ್ಯದಲ್ಲಿ ಮತ್ತಷ್ಟು ಜನರಿಗೆ ಅನುಕೂಲವಾಗುವ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್. ಎಂ.ರಾಜಶೇಖರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಗ್ರಹಿಕಾ ಶಕ್ತಿ ಬಹಳ ಮುಖ್ಯ. ಪರಿಪೂರ್ಣ ಮನಸ್ಸಿನಿಂದ ಮಾಡುವಂತಹ ಪುಟ್ಟ ಕೆಲಸವೂ ಕೂಡ ಭವಿಷ್ಯದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಕೆಲವೊಮ್ಮೆ ಇಂದಿನ ಪುಟ್ಟ ಕೆಲಸಗಳೇ ಬದುಕಿಗೆ ತಿರುವು ನೀಡುತ್ತವೆ. ನಿರಂತರ ಕಲಿಕೆಯಿಂದ ನಿಮ್ಮ ಜ್ಞಾನ ಅಗಾಧ ವಾದಾಗ ಹೊಸ ಚೈತನ್ಯ ಮೂಡುತ್ತದೆ. ಯಾವುದೂ ಅಸಾಧ್ಯವಲ್ಲ. ಆದರೆ ನಿರಂತರ ಪರಿಶ್ರಮ ನಿಮ್ಮಲ್ಲಿರಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ರೋಹನ್ ರವಿಕುಮಾರ್, ಹೆಚ್.ಬಾಲಕೃಷ್ಣ, ಜೈನಹಳ್ಳಿ ಸತ್ಯನಾರಾಯಣಗೌಡ, ಪ್ರೊ.ಸಿ.ಕೆ.ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ, ರಾಜೀವ್ ಶರ್ಮ, ಪ್ರೊ.ವಿ.ಜಯಪ್ರಕಾಶ್ ಮತ್ತಿತರ ಸಂಪನ್ಮೂಲ ವ್ಯಕ್ತಿಗಳು ಹಾಜರಿದ್ದರು.

ಲಂಚಕ್ಕೆ ಪೀಡನೆ ಆರೋಪ; ಜಿಲ್ಲಾಧಿಕಾರಿಗೆ ದೂರು

ಮೈಸೂರು, ಮಾ.13(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಟಿಪಿಎಂ ಸೆಕ್ಷನ್‌ನಲ್ಲಿರುವ ಸಹನಾ ಎಂಬುವವರು ಲಂಚಕ್ಕೆ ಪೀಡಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗಳಿಗೆ ಮೈಸೂರು ತಾಲೂಕಿನ ಗಣಗರಹುಂಡಿಯ ಬಿ.ರಾಜಣ್ಣ ಎಂಬುವರು ಇಂದು ದೂರು ಸಲ್ಲಿಸಿದ್ದಾರೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಹುಲಿಕೆರೆ ಗ್ರಾಮದ ಸರ್ವೆ ನಂ.15/5 ಮತ್ತು 6ರ ಅಲಿನೇಷನ್ ಎನ್‌ಒಸಿಯು ಜಿಲ್ಲಾಧಿಕಾರಿಗಳ ಕಚೇರಿಗೆ ಕಳುಹಿಸಲು ತಡವಾದರೂ ಕೂಡ ಸಹಿ ಮಾಡಲು ಒಂದು ಫೈಲ್‌ಗೆ 5 ಸಾವಿರ ರೂ. ಆಗುತ್ತದೆ ಎಂದು ಪೀಡಿಸುತ್ತಿದ್ದಾರೆ. ಹಣವಿಲ್ಲದೆ ಫೈಲ್‌ಗಳಿಗೆ ಸಹಿ ಮಾಡುವುದಿಲ್ಲ. ಇಂತಿಷ್ಟು ಹಣ ಬೇಕೆಂದು ನಿಗದಿ ಪಿವನ್ ಮುಖಾಂತರ ಪಡೆಯುತ್ತಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಯಾವುದೇ ಭಯವಿಲ್ಲದೆ ಲಂಚಕ್ಕೆ ಬೇಡಿಕೆ ಇಡಲಾಗುತ್ತಿದೆ. ಟಿಪಿಎಂ ಸೆಕ್ಷನ್ ಒಳಗಿರುವ ಶೌಚಾಲಯದಲ್ಲಿ ಪಿವನ್‌ಗಳ ಮೂಲಕ ಹಣ ಪಡೆದುಕೊಳ್ಳುತ್ತಾರೆ. ಈ ವಿಚಾರವನ್ನು ಎಂಎಲ್‌ಎ, ಮುಡಾ ಆಯುಕ್ತರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಲಂಚವಿಲ್ಲದೆ ಮುಡಾದಲ್ಲಿ ಈಗಲೂ ಯಾವ ಕೆಲಸಗಳು ನಡೆಯುವುದಿಲ್ಲ ಎಂಬಂತಾಗಿದೆ. ಈ ಸಂಬಂಧ ಕೂಡಲೇ ಪರಿಶೀಲನೆ ನಡೆಸಿ, ಕ್ರಮಕೈಗೊಳ್ಳಬೇಕು ಎಂದು ದೂರಿನಲ್ಲಿ ಅವರು ಮನವಿ ಮಾಡಿದ್ದಾರೆ.

ಘನ ಜಿಲ್ಲಾ ಗ್ರಾಹಕರ ದೂರುಗಳ ಪರಿಹಾರ ಆಯೋಗ, ಮೈಸೂರು

ಜಾರಿ ಸಂಖ್ಯೆ: 56/2019

ಡಿಕ್ರಿದಾರರು: ಟಿ. ಸವಿತ, ಕೋಂ ದಿವಾಕರ್. ಸಿ.ಪಿ, ವಯಸ್ಸು 41 ವರ್ಷ, ವಾಸ: ನಂ. 10, 5ನೇ ಕ್ರಾಸ್, ಎಸ್.ಬಿ.ಎಂ ಕಾಲೋನಿ, ಶ್ರೀರಾಮ್‌ಪುರ, ಮೈಸೂರು

– ವಿರುದ್ಧ –

ತೀರ್ಪುಋಣಿದಾರರು:
1) ಸ್ವಾಮಿ ಬಿನ್ ಲೇಟ್ ರಂಗಪ್ಪ, ವಯಸ್ಸು 58 ವರ್ಷ.
2) ಮಂಜುಳ ಕೋಂ ಸ್ವಾಮಿ, ವಯಸ್ಸು 58 ವರ್ಷ.
3) ಪ್ರಭಾಕರ ಬಿನ್ ಸ್ವಾಮಿ ವಯಸ್ಸು 38 ವರ್ಷ.
4) ಪುಷ್ಪಲತ ಬಿನ್ ಸ್ವಾಮಿ ವಯಸ್ಸು 25 ವರ್ಷ.

1 ರಿಂದ 4 ರವರೆಗೆ ಎಲ್ಲರೂ ವಾಸ: ನಂ. 10, ಲಿಯೋ ಜನನಿ ಅಪಾರ್ಟ್‌ಮೆಂಟ್. ನೆಲ ಮಹಡಿ, ಹೆಬ್ಬಾಳ ಗ್ರಾಮ, ಕಸಬಾ ಹೋಬಳಿ, ಹೆಬ್ಬಾಳ ಮೈನ್ ರಸ್ತೆ, ಮೈಸೂರು.
5) ಜಯಶೀಲ ಕೋಂ ಪ್ರಭಾಕರ್, ವಯಸ್ಸು 23 ವರ್ಷ, ವಾಸ: ನಂ. 854, 1ನೇ ಮಹಡಿ, ಗೋಕುಲಮ್ 3ನೇ ಹಂತ, ಕ್ಯಾಂಟರ್ ರಸ್ತೆ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಪ್ರಕರಣದ ಡಿಕ್ರಿದಾರರು ತೀರ್ಪುಋಣಿದಾರರ ವಿರುದ್ಧ ಸಿಸಿ ನಂ. 152/2018 ರಲ್ಲಿ ಈ ಗೌರವಾನ್ವಿತ ಆಯೋಗವು ಹೊರಡಿಸಿದ ಆದೇಶವನ್ನು ಜಾರಿಗೊಳಿಸುವ ಸಲುವಾಗಿ ಮೇಲ್ಕಂಡ ಜಾರಿ ಪ್ರಕರಣವನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ತೀರ್ಪುಋಣಿದಾರರಿಂದ ಬಾಕಿ ಬರಬೇಕಾಗಿರುವ ರೂ. 4,60,972/– ರೂ.ಗಳ ವಸೂಲಿಗಾಗಿ ತೀರ್ಪುಋಣಿದಾರರಿಗೆ ಸೇರಿದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸರ್ಕಾರಿ ಮೌಲ್ಯಮಾಪನ ರೂ. 20,00,000/– ಗಳಿಗೆ ಆಸ್ತಿಯನ್ನು ಬಹಿರಂಗ ಹರಾಜು ಮಾಡಿ ಬಾಕಿ ಹಣ ವಸೂಲಿಗಾಗಿ ಮಾನ್ಯ ಆಯೋಗ ಆದೇಶಿಸಿದ್ದು, ಈ ಸಂಬಂಧ ಸದರಿ ಆಸ್ತಿಯನ್ನು ಬಹಿರಂಗ ಹರಾಜಿನ ಮೂಲಕ ಸ್ಥಳದಲ್ಲಿ ಹರಾಜು ಮಾಡಲು ಮಾನ್ಯ ಆಯೋಗ ದಿನಾಂಕ: 03–04–2025 ರಂದು ನಿಗಧಿ ಪಡಿಸಿದ್ದು, ಮಾನ್ಯ ಆಯೋಗದಲ್ಲಿ ಹರಾಜು ಮಾಡುವ ಸಲುವಾಗಿ ದಿನಾಂಕ: 17–4–25 ರಂದು ನಿಗಧಿಪಡಿಸಿದ್ದು, ಆಸಕ್ತ ಸಾರ್ವಜನಿಕರು ಹರಾಜಿನಲ್ಲಿ ಭಾಗವಹಿಸುವಂತೆ ಕೋರಿ ನೀಡಿರುವ ಸಾರ್ವಜನಿಕ ಪ್ರಕಟಣೆ.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಳ ಗ್ರಾಮದ ಸರ್ವೆ ನಂ. 136ರಲ್ಲಿ ಕಟ್ಟಿರುವ ಲಿಯೋ ಜನನಿ ಅಪಾರ್ಟ್‌ಮೆಂಟ್, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ನೆಲಮಹಡಿಯಲ್ಲಿರುವ 3 ಬೆಡ್‌ರೂಮ್‌ವುಳ್ಳ ಫ್ಲಾಟ್ ನಂ. 010, ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ. 008 ; ಪಶ್ಚಿಮಕ್ಕೆ: ಅಪಾರ್ಟ್‌ಮೆಂಟ್‌ನ ಮುಖ್ಯ ಕಾಂಪೌಂಡ್ ; ಉತ್ತರಕ್ಕೆ: ಮುಖ್ಯ ದ್ವಾರ ಮತ್ತು ಪ್ಯಾಸೇಜ್ ಮತ್ತು ಮೆಟ್ಟಿಲು ; ದಕ್ಷಿಣಕ್ಕೆ: ಅಪಾರ್ಟ್‌ಮೆಂಟ್ ಮುಖ್ಯ ಕಾಂಪೌಂಡ್.

ಆಯೋಗದ ಆದೇಶದ ಮೇರೆಗೆ,
ಸಹಿ/– ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿ, ಜಿಲ್ಲಾ ಗ್ರಾಹಕರ ಆಯೋಗ, ಮೈಸೂರು
ಸಹಿ/– ಎಸ್. ಜಗನ್ನಾಥನ್
ಡಿಕ್ರಿದಾರರ ಪರ ವಕೀಲರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ, ನನ್ನ ಕಕ್ಷಿದಾರರಾದ, ಮೈಸೂರು, ರಾಜೇಂದ್ರ ನಗರ, ಬಸವೇಶ್ವರ ರಸ್ತೆ, ಮನೆ ಸಂಖ್ಯೆ 4810 ರಲ್ಲಿ ವಾಸವಾಗಿರುವ, ಲೇಟ್. ಮಹದೇವಪ್ಪ ನವರ ಮಗ ಎಂ. ಲೋಕೇಶ್ ರವರಿಗೆ ಗುಂಡ್ಲುಪೇಟೆ, ಅಶ್ವಿನಿ ಬಡಾವಣೆ, ವೆಂಕಟೇಶ್ವರ ನಿಲಯ, ಇಲ್ಲಿ ವಾಸವಾಗಿರುವ ಎ.ಎಸ್.ಗೋಪಾಲಸ್ವಾಮಿ ಮತ್ತು ಆರ್.ಮೀನಾಕ್ಷಿ ರವರುಗಳು ದಿನಾಂಕ : 30–4–2007 ರಂದು ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತಾರೆ. ಆದಾಗ್ಯೂ ಸದರಿ ವ್ಯಕ್ತಿಗಳು ಮುರಳಿ ಎಂಬ ವ್ಯಕ್ತಿಗೆ ಅಕ್ರಮವಾಗಿ ದಾನ ಪತ್ರ ಮಾಡಿರುವುದು ನನ್ನ ಕಕ್ಷಿದಾರರಾದ ಎಂ.ಲೋಕೇಶ್ ರವರಿಗೆ ತಿಳಿದುಬಂದಿರುತ್ತದೆ, ಈ ಕಾರಣ ನನ್ನ ಕಕ್ಷಿದಾರರು ಮೈಸೂರು ತಾಲ್ಲೂಕು, ಮಾನ್ಯ ತಹಶೀಲ್ದಾರ್ ರವರಿಗೆ ದಿನಾಂಕ: 13–03–2025 ರಂದು ಮುರಳಿ ಎಂಬ ವ್ಯಕ್ತಿಯ ಹೆಸರಿನಲ್ಲಿರುವ ಎಂ. ಆರ್ / ಖಾತೆ ಯನ್ನು ರದ್ದು ಮಾಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯದ ವಿಚಾರಣೆ ಚಾಲ್ತಿಯಲ್ಲಿರುತ್ತದೆ. ಆದುದರಿಂದ, ಮುರಳಿ ಬಿನ್.ಎಲ್.ಸ್ವಾಮಿ ಎಂಬ ವ್ಯಕ್ತಿಯೊಂದಿಗೆ ಅನುಸೂಚಿ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿ / ವ್ಯಕ್ತಿಗಳು, ಸಂಘ / ಸಂಸ್ಥೆಗಳು ಯಾವುದೇ ರೀತಿಯ ಪರಭಾರೆ / ಕ್ರಯದ ವ್ಯವಹಾರ ಮಾಡಿಕೊಳ್ಳುವುದು ಕಾನೂನು ಬಾಹಿರವಾಗುತ್ತದೆ ಮತ್ತು ಅಂತಹ ವ್ಯವಹಾರವು ನನ್ನ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬದ್ಧಪಡಿಸುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೀಡಲಾಗಿದೆ.

ಅನುಸೂಚಿ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ : 68/2 ರ ವಿಸ್ತೀರ್ಣ 0.20 ಎಕರೆ ಮತ್ತು 68/3 ರ ವಿಸ್ತೀರ್ಣ 0.20 ಎಕರೆ ಒಟ್ಟು 1.00 ಎಕರೆ ವ್ಯವಸಾಯದ ಜಮೀನು.

ಸಹಿ /– ಹೆಚ್.ಪಿ.ಮಹದೇವಸ್ವಾಮಿ
ವಕೀಲರು. KAR 2561/2009
729, ಶಿವಕೃಪ ಎಸ್.ಹೆಚ್.88, ಹಿನಕಲ್, ಮೈಸೂರು–570030
ದಿನಾಂಕ: 14–03–2025 ಮೊ: 9886363973

PUBLIC NOTICE

Notice is hereby given that SMT. ASHIK KALAPPA, wife of Sri. K.K Kalappa is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY:
MUDA Site No.298, measuring East to West:9 Meters and North to South:12 Meters, totally measuring 108 Square Meters, situated at Cross Road, First Stage, Vijayanagar, Devaraja Mohalla, Mysore and bounded on East: Site No.297, West: Site No.299, North: Road and South: Site No.313.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 13.03.2025
Place: Mysore